ಸೋಮವಾರ, ಮೇ 4, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ತಪಾಸಣೆ

ಕಲಬುರಗಿಯ ಪಿಡಿಎ ಎಂಜಿನಿಯರಿಂಗ್ ಕಾಲೇಜಿನಲ್ಲಿ ಭಾನುವಾರ ನೀಟ್ ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿಗಳನ್ನು ಸಿಬ್ಬಂದಿ ಪರಿಶೀಲನೆ ನಡೆಸಿದರು





ಪ್ರತಿಭಟನೆ

ಮಣಿಪುರ ಹಿಂಸಾಚಾರ ನಡೆದು ಮೂರು ವರ್ಷ ಪೂರ್ಣಗೊಂಡಿರುವ ಕಾರಣ ದೆಹಲಿಯಲ್ಲಿ ಭಾನುವಾರ ಪ್ರತಿಭಟನೆ ನಡೆಯಿತು

‘ಎಸ್‌ಸಿ ಸಾಮಾನ್ಯ ಹಿಂಪಡೆಯಬೇಕು’

ಒಳಮೀಸಲು: ಮಾದಿಗರ ಚಿಂತಕರ ದುಂಡು ಮೇಜಿನ ಸಭೆಯಲ್ಲಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಳಮೀಸಲಾತಿ ಜಾರಿ ವೇಳೆ ಯಾವುದೇ ವೃಂದದಲ್ಲಿ ಪರಿಶಿಷ್ಟ ಜಾತಿಯ ರೋಸ್ಟರ್ ಬಿಂದುಗಳು ಮೂರಕ್ಕಿಂತ ಕಡಿಮೆ ಇದ್ದರೆ ‘ಎಸ್‌ಸಿ ಸಾಮಾನ್ಯ’ ಎಂದು ಪರಿಗಣಿಸುವ ಆದೇಶ ಹಿಂಪಡೆಯಬೇಕು. ರೋಸ್ಟರ್ ಬಿಂದುವಿನಲ್ಲಿ ಇರುವ ದೋಷಗಳನ್ನು ಸರಿಪಡಿಸಲು ಸಮಾಜ ಕಲ್ಯಾಣ ಇಲಾಖೆಗೆ ವಹಿಸಿರುವ ಜವಾಬ್ದಾರಿಯನ್ನು ಹಿಂಪಡೆದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ವಹಿಸಬೇಕು’ ಎಂದು ಮಾದಿಗರ ಚಿಂತಕರ ದುಂಡು ಮೇಜಿನ ಸಭೆ ಒತ್ತಾಯಿಸಿದೆ.

ಶಾಸಕರ ಭವನದಲ್ಲಿ ಮಾದಿಗ ಸಮುದಾಯದ ಮಾಜಿ ಸಚಿವರು, ಸಂಸದರು, ನಿವೃತ್ತ ಅಧಿಕಾರಿಗಳು, ಚಿಂತಕರು, ಸಾಹಿತಿಗಳ ಸಭೆ ಭಾನುವಾರ ನಡೆಯಿತು.

ಸಚಿವರಾದ ಕೆ.ಎಚ್. ಮುನಿಯಪ್ಪ ಮತ್ತು ಆರ್.ಬಿ. ತಿಮ್ಮಾಪುರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿಗೆ ನಿಯೋಗ ತೆರಳಿ ಒಳಮೀಸಲಾತಿ ಜಾರಿಯಲ್ಲಿನ ಲೋಪಗಳನ್ನು ಸರಿಪಡಿಸುವಂತೆ ಒತ್ತಾಯಿಸಲು ಸಭೆಯಲ್ಲಿ ನಿರ್ಣಯ ಕೈಗೊಂಡಿದೆ.

> ಒಳಮೀಸಲಾತಿ ಸಂಪೂರ್ಣವಾಗಿ ಜಾರಿಗೊಳಿಸಬೇಕು. ಯಾವುದೇ ಹುದ್ದೆಗಳನ್ನು ಒಳಮೀಸಲಾತಿ ಇಲ್ಲದೆ ತುಂಬಬಾರದು. ಆಗ ಮಾತ್ರ ಮಾದಿಗರಿಗೆ ನ್ಯಾಯ ಕಲ್ಪಿಸಲು ಸಾಧ್ಯ
>
> **ಎಚ್. ಆಂಜನೇಯ,** ಮಾಜಿ ಸಚಿವ

ಕರ್ನಾಟಕ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ಸರ್ಕಾರವೇ ಇದೆ. ಆದ್ದರಿಂದ, ಎರಡೂ ಕಡೆ ಒಳಮೀಸಲಾತಿ ನೀತಿ ಒಂದೇ ರೀತಿಯಲ್ಲಿ ಇರಬೇಕು. ತೆಲಂಗಾಣ ಮಾದರಿ ಒಳಮೀಸಲಾತಿ ನೀತಿಯನ್ನು ರಾಜ್ಯದಲ್ಲಿಯೂ ಅನುಷ್ಠಾನಗೊಳಿಸಬೇಕೆಂದು ಸಭೆ ಆಗ್ರಹಿಸಿದೆ.

ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಜಾತಿ ಸೂಚಕದಡಿ ಮಾದಿಗರು, ಛಲವಾದಿಗರು ಇಬ್ಬರೂ ಜಾತಿ ಪ್ರಮಾಣಪತ್ರ ಪಡೆಯುತ್ತಿದ್ದಾರೆ.



ಸಭೆಯಲ್ಲಿ ಗೋನಾಳ್ ಭೀಮಪ್ಪ, ಎಚ್. ಆಂಜನೇಯ, ಎಲ್. ಹನುಮಂತಯ್ಯ ಮತ್ತಿತರರು ಇದ್ದರು

ಸದ್ಯ ಪ್ರವರ್ಗ ‘ಎ’, ಪ್ರವರ್ಗ ‘ಬಿ’, ಪ್ರವರ್ಗ ‘ಸಿ’ ಎಂದು ಜಾತಿಗಳನ್ನು ವರ್ಗೀಕರಣ ಮಾಡಲಾಗಿದೆ. ಪ್ರವರ್ಗ ‘ಎ’ ಗುಂಪಿನಲ್ಲಿ ಮಾದಿಗ ಮತ್ತು ಸಂಬಂಧಿತ ಜಾತಿಗಳಿದ್ದು, ಈ ಗುಂಪಿಗೆ ಕಳ್ಳದಾರಿಯಲ್ಲಿ ಅನೇಕರು ನುಸುಳುವ ಸಾಧ್ಯತೆಯಿದೆ. ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಸಭೆ ಒತ್ತಾಯಿಸಿದೆ.

ಮಾಜಿ ಸಚಿವ ಎಚ್. ಆಂಜನೇಯ ಮಾತನಾಡಿ, ‘ಯಾರೊಂದಿಗೂ ಸ್ಪರ್ಧೆ ಮಾಡಲು ಶಕ್ತರಲ್ಲವೆಂದೇ ಒಳಮೀಸಲಾತಿ ಜಾರಿಗೆ ಮಾದಿಗರು ಹೋರಾಟ ನಡೆಸಿದ್ದರು. ಪರಿಶಿಷ್ಟ ಜಾತಿಯಲ್ಲಿಯೇ ಸಿಂಹಪಾಲು ಆಗಿರುವ ಮಾದಿಗರು, ಬಡತನ, ಸಂಕಷ್ಟದಿಂದ ಸೌಲಭ್ಯ ಪಡೆಯಲು ಸಾಧ್ಯವಾಗಿಲ್ಲ. ಸಮುದಾಯದ ಕೂಗಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನ್ಯಾಯ ಕೊಟ್ಟಿದ್ದಾರೆ. ಸರ್ಕಾರವು ಸಣ್ಣಪುಟ್ಟ ಲೋಪಗಳನ್ನು ಸರಿಪಡಿಸಿದರೆ ಸಮುದಾಯಕ್ಕೆ ಇನ್ನಷ್ಟು ಸಹಕಾರ ಮಾಡಿದಂತೆ ಆಗಲಿದೆ’ ಎಂದರು.

ಸಭೆಯನ್ನು ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಗೋನಾಳ್ ಭೀಮಪ್ಪ ಉದ್ಘಾಟಿಸಿದರು. ಕೆಪಿಎಸ್‌ಸಿ ಮಾಜಿ ಸದಸ್ಯ ಎಚ್. ದುಗ್ಗಪ್ಪ, ನಿವೃತ್ತ ಅಧಿಕಾರಿಗಳಾದ ಬಾಬುರಾವ್ ಮುಡಬಿ, ಎಚ್.ಆರ್. ತೇಗನೂರು, ಭೀಮಾಶಂಕರ್, ಸಾಹಿತಿ ದಾಸನೂರು ಕೂಸಣ್ಣ, ಮಾದಿಗ ನೌಕರ ಸಂಘದ ರಾಜ್ಯಾಧ್ಯಕ್ಷ ಮಂಜುನಾಥ್ ಹೊಣೆಕೇರಿ, ಪ್ರಧಾನ ಕಾರ್ಯದರ್ಶಿ ಸುಮಂತ್ ಕಟ್ಟಿಮನಿ, ದೇವೇಂದ್ರಪ್ಪ, ಕೆ.ಜಿ. ಜಗದೀಶ್, ರೇವಣ್ಣಸಿದ್ದಪ್ಪ, ಲಕ್ಷ್ಮೀನಾರಾಯಣ, ಕೆಂಚಮಾರಯ್ಯ, ಶರಣು ರಾಯಚೂರು, ಸತೀಶ್, ಕಿರಣ್ ಶಿವಪುರ, ವಕೀಲ ರವೀಂದ್ರ ಮುಂತಾದವರು ಇದ್ದರು.

ಮಾದಿಗರ ಒಳಮೀಸಲಾತಿ ಸಮಿತಿ ರಚನೆ

ಒಳಮೀಸಲಾತಿ ಅನುಷ್ಠಾನದಲ್ಲಿನ ಲೋಪ, ಪ್ರವರ್ಗ ‘ಎ’ ಗುಂಪಿಗೆ ನುಸುಳುವುದು ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಕಡಿವಾಣ ಹಾಕಲು ಮಾಜಿ ಸಚಿವ ಎಚ್. ಆಂಜನೇಯ ಅಧ್ಯಕ್ಷತೆಯಲ್ಲಿ ಮಾದಿಗರ ಒಳಮೀಸಲಾತಿ ಸಂರಕ್ಷಣಾ ಸಮಿತಿ ರಚಿಸಲಾಗಿದೆ. ಈ ಸಮಿತಿಗೆ ಗೌರವಾಧ್ಯಕ್ಷರಾಗಿ ಎಲ್. ಹನುಮಂತಯ್ಯ ಅವರನ್ನು ಆಯ್ಕೆ ಮಾಡಲಾಗಿದೆ. ಜಿಲ್ಲಾ-ತಾಲ್ಲೂಕು ಮಟ್ಟದಲ್ಲಿ ಸಮಿತಿ ರಚಿಸುವ ಅಧಿಕಾರವನ್ನು ಸಭೆಯು ಆಂಜನೇಯ ಅವರಿಗೆ ವಹಿಸಿದೆ.

ಚಿಟಿಕೆ ಸುದ್ದಿ

ಆಲಮಟ್ಟಿ ಜಲಾಶಯ: ಸಮಾವೇಶ 8ರಂದು

ಮುದ್ದೇಬಿಹಾಳ (ವಿಜಯಪುರ): ‘ಆಲಮಟ್ಟಿ ಜಲಾಶಯದ ಎತ್ತರವನ್ನು 524.256 ಮೀಟರ್‌ಗೆ ಹೆಚ್ಚಿಸಬೇಕು ಎಂದು ಆಗ್ರಹಿಸಿ ಮೇ 8ರಂದು ವಿಜಯಪುರದಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ’ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಘಟಕದ ಅಧ್ಯಕ್ಷ ಚುನ್ನಪ್ಪ ಪೂಜೇರಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇದು ಪಕ್ಷಾತೀತ ಸಮಾವೇಶವಾಗಿದ್ದು, 1ಲಕ್ಷಕ್ಕೂ ಅಧಿಕ ಜನರು ಸೇರುವ ನಿರೀಕ್ಷೆ ಇದೆ. ಮಠಾಧೀಶರು, ರೈತ ಮುಖಂಡರು ಭಾಗವಹಿಸಲಿದ್ದಾರೆ’ ಎಂದರು.

ಹೊಂಡದ ಗೋಡೆ ಕುಸಿತ: ಇಬ್ಬರ ಸಾವು

ಬೆಳಗಾವಿ: ಇಲ್ಲಿನ ಕಪಿಲೇಶ್ವರ ದೇವಸ್ಥಾನ ಬಳಿಯ ಹೊಂಡದ ಗೋಡೆ ಕುಸಿದು, ಹೊಂಡದಲ್ಲಿ ಈಜಾಡುತ್ತಿದ್ದ ಇಬ್ಬರು ಬಾಲಕರು ಭಾನುವಾರ ಮೃತಪಟ್ಟಿದ್ದಾರೆ.



ಶಿವಂ



ಪರಶುರಾಮ

ಶಹಾಪುರ ಶಿವಾಜಿ ನಗರದ ಜೆ.ಡಿ. ಗಲ್ಲಿಯ ಶಿವಂ ಪರಶುರಾಮ ಸುಂಡಿಕರ್ (7), ಪರಶುರಾಮ ರಾಜು ನಿಲಜಕರ್ (11) ಮೃತರು. ಭಾನುವಾರ ನಾಲ್ವರು ಗೆಳೆಯರು ಈಜಲು ಹೋಗಿದ್ದರು. ಗೋಡೆ ಮೇಲೆ ಕುಳಿತಿರುವಾಗ ಏಕಾಏಕಿ ಗೋಡೆ ಕುಸಿದಿದೆ. ನಾಲ್ವರೂ ಹೊಂಡದಲ್ಲಿ ಬಿದ್ದರು. ಇಬ್ಬರು ಈಜಿ ದಡ ಸೇರಿದರು. ಇಬ್ಬರು ಅವಶೇಷಗಳ ಮಧ್ಯೆ ನೀರಿನಲ್ಲೇ ಸಿಲುಕಿ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

ಲಾರಿ–ಕಾರು ಡಿಕ್ಕಿ ಮೂವರು ಸಾವು

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಮದ್ದಯ್ಯನಹುಂಡಿ ಸಮೀಪ ರಾಷ್ಟ್ರೀಯ ಹೆದ್ದಾರಿ–766ರಲ್ಲಿ ಭಾನುವಾರ ಲಾರಿ ಮತ್ತು ಕಾರಿನ ನಡುವೆ ಸಂಭವಿಸಿದ ಅಪಘಾತದಲ್ಲಿ ಮೂವರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ.

ಕೇರಳದ ಕಣ್ಣೂರು ಮೂಲದ ಕಾರು ಚಾಲಕ ಮುನೀರ್ (30), ಮುನಿರಾ (45) ಹಾಗೂ ಮೂರೂವರೆ ವರ್ಷದ ಬಾಲಕ ಮೋಹಿಜ್ ಮೃತಪಟ್ಟವರು. ಗಾಯಾಳುಗಳ ಪೈಕಿ ಪರ್ವಿನ್ ಅವರು ಗರ್ಭಿಣಿ ಎಂದು ತಿಳಿದುಬಂದಿದೆ.

ಗುಂಡ್ಲುಪೇಟೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ 2 ನಿಮಿಷ

‘ಸಿ.ಎಂ ಬದಲಿಸುವುದೇ ಆದರೆ ಶಾಸಕರ ಅಭಿಪ್ರಾಯ ಪಡೆಯಿರಿ’

ಕೊಪ್ಪಳ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬದಲಾವಣೆಗೆ ಪಕ್ಷ ನಿರ್ಧರಿಸಿದರೆ ಕಡ್ಡಾಯವಾಗಿ ಶಾಸಕರ ಅಭಿಪ್ರಾಯ ಕೇಳಬೇಕು, ಅವರಿಗೆ ಪರ್ಯಾಯವಾಗಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಖ್ಯಮಂತ್ರಿ ಮಾಡಬೇಕು’ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರೂ ಆದ ಯಲಬುರ್ಗಾ ಕ್ಷೇತ್ರದ ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ತಾಲ್ಲೂಕಿನ ಕೋಳೂರು–ಕಾಟ್ರಳ್ಳಿಯಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಡಿ.ಕೆ.ಶಿವಕುಮಾರ್ ಸಿ.ಎಂ. ಆಗಬಾರದು ಎಂದು ನಾನು ಹೇಳಿಲ್ಲ, ಸಿಎಂ ಆಗುತ್ತೇನೆ ಎಂದು ಶಿವಕುಮಾರ್ ಎಲ್ಲಿಯಾದರೂ ಹೇಳಿದ್ದಾರೆಯೇ’ ಎಂದು ಪ್ರಶ್ನಿಸಿದರು.

‘ನಾನು ಯಾರ ಬೆಂಬಲಿಗನೂ ಅಲ್ಲ. ಕಾಂಗ್ರೆಸ್ ಪಕ್ಷದ ಬೆಂಬಲಿಗ. ಸಿದ್ದರಾಮಯ್ಯನವರ ಆಡಳಿತ ವೈಖರಿ ಚೆನ್ನಾಗಿದ್ದು, ಅವರ ಬಗ್ಗೆ ಪ್ರೀತಿಯಿದೆ. ಆದ್ದರಿಂದ ಅವರ ಪರವಾಗಿ ಮಾತನಾಡುತ್ತೇನೆ’ ಎಂದು ಪ್ರತಿಕ್ರಿಯಿಸಿದರು.

ನೀವು ಸಚಿವ ಸ್ಥಾನದ ಆಕಾಂಕ್ಷಿಯೇ ಎನ್ನುವ ಪ್ರಶ್ನೆಗೆ, ‘ಈ ಬಗ್ಗೆ ಪಕ್ಷ ತೀರ್ಮಾನಿಸುತ್ತದೆ. ಆದರೆ ಸಚಿವ ಸ್ಥಾನ ನೀಡುವಂತೆ ಖರ್ಗೆ ಅವರ ಬಳಿ ಕೇಳಿಲ್ಲ ಎಂದು ತಿಳಿಸಿದರು.



ಮಗು ಅಳದಿದ್ದರೆ ತಾಯಿಯೇ ಹಾಲು ಕೊಡುವುದಿಲ್ಲ; ಇನ್ನು ಸಚಿವ ಸ್ಥಾನವನ್ನು ಖರ್ಗೆ ಅವರ ಬಳಿ ಕೇಳದಿದ್ದರೂ ಹೇಗೆ ಎನ್ನುವ ಮಾಧ್ಯಮದವರ ಪ್ರಶ್ನೆಗೆ ‘ನಿಜವಾದ ತಾಯಿ ಖಂಡಿತವಾಗಿಯೂ ಹಾಲು ಕೊಡುತ್ತಾಳೆ’ ಎಂದು ಮಾರ್ಮಿಕವಾಗಿ ಉತ್ತರಿಸಿದರು.

ಅಧಿಕಾರಕ್ಕಾಗಿ ತಿಕ್ಕಾಟ, ನಾಚಿಕೆಗೇಡು: ಬೊಮ್ಮಾಯಿ

ಗದಗ: ‘ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಮನಸ್ಸು ಗೆಲ್ಲುವವರು ಸಿ.ಎಂ ಆಗುತ್ತಾರೆ. ಪ್ರಜಾಪಭುತ್ವ ವ್ಯವಸ್ಥೆಯಲ್ಲಿ ಇದು ನಾಚಿಕೆಗೇಡಿನ ಸಂಗತಿ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಅವರು ಟೀಕಿಸಿದರು.

‘ಕಾಂಗ್ರೆಸ್ಸಿಗರು ಪ್ರಜಾಪಭುತ್ವದ ಬಗ್ಗೆ ಬಹಳಷ್ಟು ಮಾತನಾಡುತ್ತಾರೆ. ಆದರೆ, ಅವರ ಪಕ್ಷದಲ್ಲಿ ಪ್ರಜಾಪಭುತ್ವದ ಆಶಯ ನಾಶವಾಗಿರುವುದು ಕಾಣಿಸುತ್ತದೆ’ ಎಂದು ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ಕಾಂಗ್ರೆಸ್ ನಾಯಕರಲ್ಲಿ ಅಧಿಕಾರಕ್ಕಾಗಿ ತಿಕ್ಕಾಟ ಶುರುವಾಗಿದೆ. ಕೆಲವರು ಮೂರು ಬಾರಿ ಗೆದ್ದಿದ್ದೇವೆ, ತಮಗೂ ಸಚಿವ ಸ್ಥಾನ ಕೊಡಿ ಅಂತ ಕೇಳುತ್ತಿದ್ದಾರೆ. ಹೊಸಬರು ಆಕಾಂಕ್ಷಿಗಳಾಗಿದ್ದಾರೆ. ನ್ಯಾಯಸಮ್ಮತವಾಗಿ ಸಿ.ಎಂ ಸ್ಥಾನ ತನಗೆ ಸಿಗಬೇಕು ಎಂಬ ನೋವು ಮಲ್ಲಿಕಾರ್ಜುನ ಖರ್ಗೆಯವರ ಮನಸಿನಲ್ಲಿದೆ’ ಎಂದು ಹೇಳಿದರು.

ತಡವಾಗಿ ಬಂದ ಇಬ್ಬರು ವಿದ್ಯಾರ್ಥಿನಿಯರಿಗೆ ಬರೆಯುವ ಅವಕಾಶ ನಿರಾಕರಣೆ

ರಾಜ್ಯದಲ್ಲಿ ಸುಗಮವಾಗಿ ನಡೆದ ‘ನೀಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯು (ನೀಟ್) ಭಾನುವಾರ ಸುಗಮವಾಗಿ ನಡೆಯಿತು. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ಆಯೋಜಿಸಿದ್ದ ನೀಟ್ ಪರೀಕ್ಷೆಗೆ ರಾಜ್ಯದಲ್ಲಿ ಸುಮಾರು 1.45 ಲಕ್ಷ ವಿದ್ಯಾರ್ಥಿಗಳು ಹಾಜರಾದರು.

ಇಬ್ಬರು ವಿದ್ಯಾರ್ಥಿನಿಯರು ನಗರದಲ್ಲಿನ ಪರೀಕ್ಷಾ ಕೇಂದ್ರಕ್ಕೆ ತಡವಾಗಿ ಬಂದಿದ್ದರಿಂದ ಪರೀಕ್ಷೆ ಬರೆಯಲು ಅವಕಾಶ ಸಿಗಲಿಲ್ಲ.

ಮಧ್ಯಾಹ್ನ 2 ಗಂಟೆಗೆ ಪರೀಕ್ಷೆ ಆರಂಭವಾಯಿತು. 1.30ರ ಒಳಗೆ ಪರೀಕ್ಷಾ ಕೇಂದ್ರದಲ್ಲಿ ಇರಬೇಕು ಎಂದು ಸೂಚಿಸಲಾಗಿತ್ತು. ಆದರೆ, ಸಂಚಾರ ದಟ್ಟಣೆಯಿಂದಾಗಿ ವಿದ್ಯಾರ್ಥಿನಿಯೊಬ್ಬರು 20 ನಿಮಿಷ ತಡವಾಗಿ ಪರೀಕ್ಷಾ ಕೇಂದ್ರಕ್ಕೆ ಬಂದರು. ಇದರಿಂದಾಗಿ ಆರ್.ಸಿ.ಕಾಲೇಜಿನ ಪರೀಕ್ಷಾ ಕೇಂದ್ರದ ಸಿಬ್ಬಂದಿ ಒಳಗೆ ಬಿಡಲಿಲ್ಲ. ಪರೀಕ್ಷೆ ಬರೆಯಲು ಅವಕಾಶ ಸಿಗದ ಕಾರಣ ವಿದ್ಯಾರ್ಥಿನಿ ಕಣ್ಣೀರು ಹಾಕಿದಳು.

‘ಅತ್ತಿಬೆಲೆಯಿಂದ ಪರೀಕ್ಷೆ ಬರೆಯಲು ಬಂದಿದ್ದೇನೆ. ಸಂಚಾರ ದಟ್ಟಣೆ ಇದ್ದ ಕಾರಣ ತಡವಾಯಿತು. ಸಮಯ ಮುಗಿದಿರುವ ಕಾರಣ ನಿಯಮಾವಳಿ ಪ್ರಕಾರ ಅವಕಾಶ ನೀಡಲು ಸಾಧ್ಯವಿಲ್ಲ ಎಂದು ಸಿಬ್ಬಂದಿ ಹೇಳಿದರು. ವರ್ಷವಿಡೀ ಕಷ್ಟಪಟ್ಟು ಓದಿದ್ದೇನೆ. ಆದರೆ, ಪರೀಕ್ಷೆ ಬರೆಯಲು ಸಾಧ್ಯವಾಗಲಿಲ್ಲ’ ಎಂದು ವಿದ್ಯಾರ್ಥಿನಿ ಬೇಸರ ವ್ಯಕ್ತಪಡಿಸಿದಳು.

ಮತ್ತೊಬ್ಬ ವಿದ್ಯಾರ್ಥಿನಿ ಬೇಗನೇ ಪರೀಕ್ಷಾ ಕೇಂದ್ರಕ್ಕೆ ಬಂದಿದ್ದರು. ಆದರೆ, ಭಾವಚಿತ್ರ ತೆಗೆಸಲು ಮೆಜೆಸ್ಟಿಕ್‌ಗೆ ತೆರಳಿದ್ದರು. ಅಲ್ಲಿಂದ ವಾಪಸ್ ಬರುವ ವೇಳೆಗೆ ಸಮಯ ಮೀರಿದ್ದರಿಂದ ಪರೀಕ್ಷಾ ಕೇಂದ್ರದ ಒಳಗೆ ಬಿಡಲಿಲ್ಲ.

‘ಮಧ್ಯಾಹ್ನ 2 ರಿಂದ ಸಂಜೆ 5 ಗಂಟೆವರೆಗೆ ಪರೀಕ್ಷೆ ನಡೆಯಿತು. ಮಧ್ಯಾಹ್ನ 1.30ರ ಒಳಗೆ ಪರೀಕ್ಷಾ ಕೇಂದ್ರದಲ್ಲಿ ಇರಬೇಕು ಎಂದು ಮೊದಲೇ ಸೂಚಿಸಲಾಗಿತ್ತು. ಆದರೂ, ತಡವಾಗಿ ಬಂದಿದ್ದಾರೆ. ಹೀಗಾಗಿ ಒಳಗೆ ಬಿಟ್ಟಿಲ್ಲ. ನಮ್ಮ ಸಿಬ್ಬಂದಿಯ ಕಡೆಯಿಂದ ಯಾವುದೇ ಲೋಪ ಆಗಿಲ್ಲ’ ಎಂದು ಪರೀಕ್ಷಾ ಕೇಂದ್ರದ ಮೇಲ್ವಿಚಾರಕರು ತಿಳಿಸಿದರು.

‘ಜೀವವಿಜ್ಞಾನ ವಿಷಯದಲ್ಲಿ ಪ್ರಶ್ನೆಗಳು ಸುಲಭವಾಗಿದ್ದವು. ಆದರೆ, ಭೌತವಿಜ್ಞಾನ ಮತ್ತು ರಸಾಯನ ವಿಜ್ಞಾನ ವಿಷಯದ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ಸ್ವಲ್ಪ ಕಷ್ಟವಾಯಿತು’ ಎಂದು ವಿದ್ಯಾರ್ಥಿಯೊಬ್ಬರು ತಿಳಿಸಿದರು.



ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಭಾನುವಾರ ತಪಾಸಣೆ ಬಳಿಕ ನೀಟ್ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳನ್ನು ಪರೀಕ್ಷಾ ಕೇಂದ್ರದ ಒಳಗೆ ಬಿಡಲಾಯಿತು — ಪ್ರಜಾವಾಣಿ ಚಿತ್ರ

ಮುಖ್ಯಮಂತ್ರಿ ಯಾರು?: ಅಶೋಕ

ಬೆಂಗಳೂರು: ‘ಮೇ 15ಕ್ಕೆ ಸಿದ್ದರಾಮಯ್ಯನವರ ಕತೆ ಮುಗಿಯುತ್ತದೆ ಎಂದು ಡಿ.ಕೆ.ಶಿವಕುಮಾರ್ ತಂಡ ಹೇಳುತ್ತಿದೆ. ಆದರೆ, ಮೂರು ವರ್ಷಗಳ ಸಂಭ್ರಮಾಚರಣೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ ಹೇಳುತ್ತಿದ್ದಾರೆ. ಇದು ಮುಕ್ತಾಯದ ಸಮಾರಂಭವೂ ಆಗಿರಬಹುದು’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಲೇವಡಿ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಮಾರಂಭದ ನಂತರ ಯಾರು ಮುಖ್ಯಮಂತ್ರಿ ಆಗುತ್ತಾರೆ ಎಂಬುದು ಯಾರಿಗೂ ಗೊತ್ತಿಲ್ಲ. ಈ ಸಮಾವೇಶ ಮಾಡುವ ಮುನ್ನ ಯಾರ ನೇತೃತ್ವದಲ್ಲಿ ಮಾಡುತ್ತೀರೆಂದು ತಿಳಿಸಿ’ ಎಂದು ಅವರು ಹೇಳಿದರು.

ಭೂಗರ್ಭ ರಹಸ್ಯ ಶೋಧಕ್ಕೆ ಮ್ಯಾಪಿಂಗ್ ಕಾರ್ಯಾಚರಣೆ?

ಘಟ್ಟದ ಮೇಲೆ ‘ಸೆಸ್ನಾ’ ಹಾರಾಟ

ಪ್ರಜಾವಾಣಿ ವಾರ್ತೆ

ಶಿರಸಿ: ಶಿರಸಿ, ಸಿದ್ದಾಪುರ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಆಗಸದಲ್ಲಿ ಕೆಲ ದಿನಗಳಿಂದ ಅತಿ ಕಡಿಮೆ ಎತ್ತರದಲ್ಲಿ ವಿಮಾನ ಹಾರಾಟ ನಡೆಸುತ್ತಿದ್ದು, ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಪದೇ ಪದೇ ಸುತ್ತು ಹಾಕುತ್ತಿರುವುದು ಸಾರ್ವಜನಿಕರ ಚರ್ಚೆಗೆ ಗ್ರಾಸವಾಗಿದೆ.

100–150 ಮೀಟರ್ ಎತ್ತರದಲ್ಲಿ ವಿಮಾನ ಹಾರಾಟ ನಡೆದಿದೆ. ಸಿದ್ದಾಪುರ ತಾಲ್ಲೂಕಿನ ಹೆಗ್ಗರಣಿ, ಹೇರೂರು, ಗೋಳಿಮಕ್ಕಿ, ಕಾನಸೂರ, ಶಿರಸಿಯ ಕುಳವೆ ಹಾಗೂ ಬನವಾಸಿ ಹೋಬಳಿಯ ಗ್ರಾಮಗಳ ಜನರ ನಿದ್ದೆಗೆಡಿಸಿದೆ.

‘ಪ್ರಸ್ತುತ ಹಾರಾಟ ನಡೆಸುತ್ತಿರುವ ವಿಮಾನ ಆಸ್ಟ್ರೇಲಿಯಾದಲ್ಲಿ ನೋಂದಾಯಿತ ಸೆಸ್ನಾ 208ಬಿ ಗ್ರ್ಯಾಂಡ್ ಕಾರವಾನ್ ಮಾದರಿಯ ವೈಜ್ಞಾನಿಕ ಭೂಭೌತಿಕ ಸಮೀಕ್ಷೆಗೆ ಬಳಸುವ ವಿಮಾನವಾಗಿದೆ. ಭೂಮಿಯ ಚುಂಬಕ ವ್ಯತ್ಯಾಸಗಳನ್ನು ಪತ್ತೆಹಚ್ಚುವ ಸಾಮರ್ಥ್ಯವುಳ್ಳ ಮ್ಯಾಗ್ನೆಟೋ ಮೀಟರ್ ಸ್ಟಿಂಗರ್ ಸಾಧನ ಅಳವಡಿಸಿದೆ. ಎಕ್ಸ್‌ಕ್ಯಾಲಿಬರ್ ಏರ್‌ಬೋರ್ನ್ ಜಿಯೋಫಿಸಿಕ್ಸ್ ಸಂಸ್ಥೆಯು ಭೂಮಿಯ ಅಂತರಾಳದ ಮ್ಯಾಪಿಂಗ್‌ಗಾಗಿ ಕಾರ್ಯಾಚರಣೆ ನಡೆಸುತ್ತಿರುವ ಸಾಧ್ಯತೆಯಿದೆ’ ಎಂಬುದು ನಿವೃತ್ತ ಗಣಿತಜ್ಞ ಜಿ.ಎನ್.ಹೆಗಡೆ ಅಭಿಪ್ರಾಯ.

‘ಈ ಮೂಲಕ ಚಿಕ್ಕಮಗಳೂರು ಸೇರಿ ಪಶ್ಚಿಮ ಘಟ್ಟದ ವಿವಿಧ ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸುತ್ತಿರುವ ಮಾಹಿತಿಯಿದೆ. ಖನಿಜ ಸಂಪತ್ತು, ನೀರಿನ ಸೆಲೆ ಪತ್ತೆಗೆ ಸಮೀಕ್ಷೆ ನಡೆಯುತ್ತಿರುವ ಸಾಧ್ಯತೆ ಇದೆ’ ಎನ್ನುತ್ತಾರೆ ಅವರು. ಆದರೆ ಈ ಬಗ್ಗೆ ಸ್ಥಳೀಯ ಆಡಳಿತಕ್ಕೆ ಮಾಹಿತಿ ಇಲ್ಲದಿರುವುದು ಸಾರ್ವಜನಿಕರಲ್ಲಿ ಗೊಂದಲ ಮುಂದುವರಿಯಲು ಕಾರಣವಾಗಿದೆ.



ಶಿರಸಿಯ ಗ್ರಾಮೀಣ ಭಾಗದಲ್ಲಿ ಅತಿ ಕಡಿಮೆ ಎತ್ತರದಲ್ಲಿ ಹಾರಾಡಿದ ವಿಮಾನ

ಹಾನಗಲ್: 31ರ ವರೆಗೆ ಸಮೀಕ್ಷೆ

ಹಾನಗಲ್ (ಹಾವೇರಿ): ಹಾನಗಲ್ ಪಟ್ಟಣ ವಾಯುಪ್ರದೇಶದಲ್ಲೂ ಸೆಸ್ನಾ 208ಬಿ ಏರ್ ಕ್ರಾಫ್ಟ್ ಹಾರಾಟ ನಡೆಸುತ್ತಿದೆ. ಭಾನುವಾರ 4–5 ಬಾರಿ ಕೆಳಮಟ್ಟದಲ್ಲಿ ಹಾರಾಟ ನಡೆಸಿದ್ದರಿಂದ ಜನರು ಆತಂಕಕ್ಕೆ ಒಳಗಾದರು.

‘ಭಾರತೀಯ ಭೂವಿಜ್ಞಾನ ಸರ್ವೇಕ್ಷಣಾ ಸಂಸ್ಥೆ ನೇತೃತ್ವದಲ್ಲಿ ಹಿಮಾಲಯನ್ ಹೆಲಿ ಸರ್ವಿಸಸ್, ಆಸ್ಟ್ರೇಲಿಯದ ಎಕ್ಸ್ ಕ್ಯಾಲಿಬರ್ ಏವಿಯೇಶನ್ ಸಹಯೋಗದಲ್ಲಿ ಸಮೀಕ್ಷೆ ನಡೆಯುತ್ತಿದೆ’ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು.

‘ಸೆಸ್ನಾ ಕಾರವಾನ್ ಮಾದರಿಯ ಎರಡು ವಿಮಾನಗಳು ಮಂಗಳೂರು, ಶಿವಮೊಗ್ಗ ವಿಮಾನ ನಿಲ್ದಾಣಗಳಿಂದ ಕಾರ್ಯಾಚರಣೆ ನಡೆಸಿವೆ. ಜುಲೈ 31ರ ವರೆಗೆ ಸಮೀಕ್ಷೆ ನಡೆಯಲಿದೆ. ಜನರು ಆತಂಕಕ್ಕೆ ಒಳಗಾಗಬಾರದು ಎಂದು ಹಾನಗಲ್ ಪಿಎಸ್‌ಐ ಸಂಪತ್ ಆನಿಕಿವಿ ತಿಳಿಸಿದ್ದಾರೆ.

ಅಣೆಕಟ್ಟೆ ಎತ್ತರ ಹೆಚ್ಚಳ ಅಸಾಧ್ಯ: ಶಿವಕುಮಾರ್



ಹೊಸಪೇಟೆಯ ತುಂಗಭದ್ರಾ ಅಣೆಕಟ್ಟೆಗೆ ಭಾನುವಾರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿ ನೀಡಿ ನೂತನ ಕ್ರೆಸ್ಟ್‌ಗೇಟ್‌ಗಳನ್ನು ಪರಿಶೀಲಿಸಿದರು. ಸಚಿವರಾದ ಶಿವರಾಜ ಎಸ್‌.ತಂಗಡಗಿ, ಈಶ್ವರ ಖಂಡ್ರೆ ಇದ್ದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ತುಂಗಭದ್ರಾ ಅಣೆಕಟ್ಟೆಗೆ ಎಲ್ಲ 33 ಕ್ರೆಸ್ಟ್‌ಗೇಟ್‌ಗಳ ಅಳವಡಿಕೆ ಮುಗಿದಿದೆ. ಮೇ 15ರ ವೇಳೆಗೆ ನವೀಕೃತ ಅಣೆಕಟ್ಟೆ ಉದ್ಘಾಟನೆಗೆ ಸಜ್ಜಾಗಲು ಸೂಚಿಸಲಾಗಿದೆ’ ಎಂದು ಜಲಸಂಪನ್ಮೂಲ ಸಚಿವ, ಡಿಸಿಎಂ ಡಿ.ಕೆ.ಶಿವಕುಮಾರ್ ಇಲ್ಲಿ ಹೇಳಿದರು.

ಭಾನುವಾರ ಅಣೆಕಟ್ಟೆಗೆ ಭೇಟಿ ನೀಡಿ, ಕ್ರೆಸ್ಟ್‌ಗೇಟ್ ಅಳವಡಿಕೆ ಕಾಮಗಾರಿ ವೀಕ್ಷಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ‘ಸದ್ಯ, ಅಣೆಕಟ್ಟೆ ಎತ್ತರ ಎತ್ತರಿಸುವ ಪ್ರಶ್ನೆ ಇಲ್ಲ’ ಹೂಳು ತೆಗೆಯಲು ಚೀನಾ ತಂತ್ರಜ್ಞಾನ ಬಳಕೆಯ ಬಗ್ಗೆ ಚರ್ಚೆ ನಡೆಯುತ್ತಿದೆ’ ಎಂದು ತಿಳಿಸಿದರು.

‘ಸದ್ಯ ಅಣೆಕಟ್ಟೆಯಲ್ಲಿ 33 ಟಿಎಂಸಿ ಅಡಿ ಹೂಳು ತುಂಬಿದೆ. ಇದನ್ನು ಸರಿದೂಗಿಸಲು ನವಲಿ ಸಮಾನಾಂತರ ಜಲಾಶಯ, ಹೂಳು ತೆಗೆಸುವುದು ಹಾಗೂ ಅಣೆಕಟ್ಟೆಯ ಕೆಳಭಾಗದಲ್ಲಿ ಪ್ರವಾಹ ನೀರು ಪಂಪ್ ಮಾಡುವ ಪ್ರತ್ಯೇಕ ಯೋಜನೆಗಳಿವೆ. ನವಲಿ ಜಲಾಶಯದ ಯೋಜನೆ ಸಂಬಂಧಿಸಿ ಆಂಧ್ರ ಸಿಎಂ ಜತೆಗೆ ಚರ್ಚೆಗೆ ಸರ್ಕಾರ ಸಿದ್ಧವಿದೆ’ ಎಂದು ತಿಳಿಸಿದರು.

‘ಹೂಳು ತೆಗೆಯುವ ಯೋಜನೆಯಲ್ಲಿ ಕೆಲ ಖಾಸಗಿಯವರಿಗೆ ಲಾಭವಾದರೆ ಚಿಂತೆಯಿಲ್ಲ. ಸರ್ಕಾರ ಇದಕ್ಕಾಗಿ ದೊಡ್ಡ ಮೊತ್ತ ವ್ಯಯಿಸಲು ಸಾಧ್ಯವಿಲ್ಲ. ಪ್ರವಾಹದ ನೀರನ್ನು ಪಂಪ್ ಮಾಡಿ ಸಂಗ್ರಹಿಸುವ ಸ್ಥಳದ ಬಗ್ಗೆ ಈಗಲೇ ತಿಳಿಸಲಾಗದು’ ಎಂದು ಹೇಳಿದರು.

ಸವಾಲು ಗೆದ್ದಿದ್ದೇವೆ: ‘33 ಕ್ರೆಸ್ಟ್‌ಗೇಟ್ ಅಳವಡಿಕೆ ಕುರಿತು ದೊಡ್ಡ ಸವಾಲು ಗೆದ್ದಿದ್ದೇವೆ. ₹54 ಕೋಟಿ ವೆಚ್ಚವಾಗಿದೆ. ಕಾಲುವೆಗಳ ದುರಸ್ತಿ, ಇತರೆ ಕಾಮಗಾರಿಗಳಿಗೆ ₹315 ಕೋಟಿ ವ್ಯಯಿಸಲಾಗಿದೆ. ತಜ್ಞರ ವರದಿಯಂತೆ ದುರಸ್ತಿಯಿಂದಾಗಿ ಅಣೆಕಟ್ಟೆಯ ಬಾಳಿಕೆ ಅವಧಿ 50 ವರ್ಷ ಮುಂದುವರಿದಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸನ್ಮಾನ: ‘ಕ್ರೆಸ್ಟ್‌ಗೇಟ್ ಕಳಚಿದ್ದರಿಂದಾಗಿ ನಾಲ್ಕು ಜಿಲ್ಲೆಗಳ ರೈತರು ಒಂದು ಬೆಳೆಯನ್ನು ತ್ಯಾಗ ಮಾಡಿ ಗೇಟ್ ಅಳವಡಿಕೆಗೆ ಸಹಕರಿಸಿದ್ದಾರೆ. ಕಾಮಗಾರಿ ಪೂರ್ಣಗೊಂಡ ನಂತರ ಈ ಭಾಗದ ರೈತರನ್ನು ಆಹ್ವಾನಿಸಿ ಸನ್ಮಾನಿಸಲಾಗುವುದು’ ಎಂದರು.

ಸಚಿವರಾದ ಕೆ.ಎಚ್.ಮುನಿಯಪ್ಪ, ಈಶ್ವರ ಖಂಡ್ರೆ, ಶಿವರಾಜ ಎಸ್. ತಂಗಡಗಿ, ಸಂಸದರಾದ ಇ.ತುಕಾರಾಂ, ರಾಜಶೇಖರ ಹಿಟ್ನಾಳ, ಶಾಸಕರಾದ ಎಚ್.ಆರ್.ಗವಿಯಪ್ಪ, ಡಾ.ಎನ್. ಟಿ.ಶ್ರೀನಿವಾಸ್, ಲತಾ ಮಲ್ಲಿಕಾರ್ಜುನ, ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪುರ, ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಒ.ಆರ್.ಕೆ.ರೆಡ್ಡಿ ಇದ್ದರು.

ಕಡತ ವಿಲೇವಾರಿಗೆ ಸೂಚನೆ

‘ನಾನಾ ಇಲಾಖೆಗಳಲ್ಲಿ 86 ಸಾವಿರ ಕಡತಗಳ ವಿಲೇವಾರಿಗೆ ಬಾಕಿ ಇರುವ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಆಗಿದೆ. ಇಲಾಖಾವಾರು ವರದಿ ತರಿಸಿಕೊಂಡು ಕಡತ ವಿಲೇವಾರಿ ಮಾಡಲಾಗುವುದು’ ಎಂದು ಡಿಸಿಎಂ ಹೇಳಿದರು.

ಕಾರ್ಖಾನೆಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಕಬ್ಬಿಗೆ ಪ್ರೋತ್ಸಾಹ ಧನ ನಿರಾಕರಣೆ : ದಿನೇಶ್ ಗೂಳಿಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರ ಕಬ್ಬು ಬೆಳೆಗಾರರಿಗೆ ಘೋಷಿಸಿರುವ ಪ್ರೋತ್ಸಾಹಧನ ಪಾವತಿಸಲು ಏಳು ಖಾಸಗಿ ಸಕ್ಕರೆ ಕಾರ್ಖಾನೆಗಳು ನಿರಾಕರಿಸುತ್ತಿದ್ದು, ಈ ಕಾರ್ಖಾನೆಗಳ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿ ಗ್ಯಾರಂಟಿ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷರೂ ಆಗಿರುವ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಕ್ಕರೆ ಸಚಿವ ಶಿವಾನಂದ ಪಾಟೀಲ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೂ ಈ ಮನವಿಯನ್ನು ನೀಡಿರುವ ದಿನೇಶ್, ‘ರೈತರಿಗೆ ಸೇರಬೇಕಾದ ಬಾಕಿ ಹಣವನ್ನು ಕೊಡಿಸದಿದ್ದರೆ ಮುಂಬರುವ ಹಂಗಾಮಿನಲ್ಲಿ ಈ ಕಾರ್ಖಾನೆಗಳ ಪರವಾನಗಿ ರದ್ದುಗೊಳಿಸಬೇಕು’ ಎಂದು ಆಗ್ರಹಿಸಿದ್ದಾರೆ.

‘2025-26ನೇ ಸಾಲಿನ ಹಂಗಾಮಿನಲ್ಲಿ ಕಬ್ಬು ಬೆಳೆಗಾರರ ಆರ್ಥಿಕ ಹಿತದೃಷ್ಟಿಯಿಂದ ಸಕ್ಕರೆ ಕಾರ್ಖಾನೆಗಳು ಸರ್ಕಾರದ ₹50 ಮತ್ತು ಕಾರ್ಖಾನೆಯ ₹50 ಸೇರಿಸಿ ಒಟ್ಟು ₹100 ನ್ನು ರೈತರಿಗೆ ತಲುಪಿಸಬೇಕಿದೆ. ಆದರೆ, ಕೊಳ್ಳೇಗಾಲ ತಾಲ್ಲೂಕಿನ ಕುಂತೂರಿನಲ್ಲಿರುವ ಬನ್ನಾರಿ ಅಮ್ಮನ್ ಶುಗರ್ಸ್, ಚನ್ನರಾಯಪಟ್ಟಣದ ಚಾಮುಂಡೇಶ್ವರಿ ಶುಗರ್ಸ್, ಕೆ.ಆರ್. ಪೇಟೆ ತಾಲ್ಲೂಕಿನಲ್ಲಿರುವ ಕೋರಮಂಡಲ ಶುಗರ್ಸ್, ಮದ್ದೂರು ತಾಲ್ಲೂಕಿನಲ್ಲಿರುವ ಚಾಮುಂಡೇಶ್ವರಿ ಶುಗರ್ಸ್, ಪಾಂಡವಪುರ ತಾಲ್ಲೂಕಿನಲ್ಲಿರುವ ಎಂಆರ್‌ಎನ್ ಕೇನ್ ಪವರ್ ಆ್ಯಂಡ್ ಬೈಯೋರಿಫೈನರಿಸ್ ಪ್ರೈ.ಲಿ, ಮದ್ದೂರು ತಾಲ್ಲೂಕಿನಲ್ಲಿರುವ ಎನ್‌ಎಸ್‌ಎಲ್ ಶುಗರ್ಸ್, ನಂಜನಗೂಡು ತಾಲ್ಲೂಕಿನಲ್ಲಿರುವ ಬನ್ನಾರಿ ಅಮ್ಮನ್ ಶುಗರ್ಸ್ ಈ ಕಾರ್ಖಾನೆಗಳು ತಮ್ಮ ಪಾಲಿನ ₹50 ಅನ್ನು ಕಬ್ಬು ರೈತರಿಗೆ ಪಾವತಿಸಲು ಹಿಂದೇಟು ಹಾಕುತ್ತಿವೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಈ ಕಾರ್ಖಾನೆಗಳ ಮೇಲೆ ಜಿಲ್ಲಾಧಿಕಾರಿಗಳು ಒತ್ತಡ ಹೇರಿದರೂ, ಮಾಲೀಕರು ಸರ್ಕಾರದ ಆದೇಶಕ್ಕೆ ಬೆಲೆ ನೀಡುತ್ತಿಲ್ಲ. ಇಂಥ ಕಾರ್ಖಾನೆಗಳ ವಿರುದ್ಧ ಕಠಿಣ ಕ್ರಮ ಅನಿವಾರ್ಯವಾಗಿದೆ ಎಂದೂ ಅವರು ಆಗ್ರಹಿಸಿದ್ದಾರೆ.

ಅಭಿಮಾನೋತ್ಸವ; 10 ಲಕ್ಷ ಜನರಿಗೆ ಮೈಸೂರು ಪಾಕ್ ಊಟ, ಬೇಸಿಗೆ ಎದುರಿಸಲು ‘ಮಿಸ್ಟ್ ಫ್ಯಾನ್’ ಅಳವಡಿಕೆ

ಸಾವಿರ ಸ್ವಾಮೀಜಿಗಳಿಗೆ ಪ್ರತ್ಯೇಕ ವೇದಿಕೆ

• ಎಂ.ಎನ್.ಯೋಗೇಶ್

ಚಿತ್ರದುರ್ಗ: ರಾಜಕಾರಣದಲ್ಲಿ 50 ವರ್ಷ ಪೂರೈಸಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಸತ್ಕರಿಸಲು ಮೇ 9ರಂದು ಆಯೋಜಿಸಿರುವ ‘ಬಿಎಸ್‌ವೈ ಅಭಿಮಾನೋತ್ಸವ’ಕ್ಕೆ ವಿವಿಧೆಡೆಯಿಂದ 1,000 ಸ್ವಾಮೀಜಿಗಳು ಭಾಗವಹಿಸುವ ನಿರೀಕ್ಷೆ ಇದ್ದು, ಅವರಿಗಾಗಿ ಪ್ರತ್ಯೇಕ ವೇದಿಕೆ ಸಿದ್ಧವಾಗುತ್ತಿದೆ.

ನಗರ ಹೊರವಲಯದ ಹಳೇ ರಾಷ್ಟ್ರೀಯ ಹೆದ್ದಾರಿ ಬದಿಯ ವಿಶಾಲ ಮೈದಾನದಲ್ಲಿ ವೇದಿಕೆ ನಿರ್ಮಾಣ ಕಾರ್ಯ ವಾರದಿಂದ ದಿನದ 24 ಗಂಟೆಯೂ ನಡೆಯುತ್ತಿದೆ. ಕೇಂದ್ರ ಗೃಹಸಚಿವ ಅಮಿತ್ ಶಾ ಪಾಲ್ಗೊಳ್ಳುವ ಮುಖ್ಯ ವೇದಿಕೆಯ ಬಲಭಾಗದಲ್ಲಿ ಸ್ವಾಮೀಜಿಗಳಿಗಾಗಿಯೇ ಮತ್ತೊಂದು ವೇದಿಕೆ ಸಿದ್ಧಗೊಳ್ಳುತ್ತಿದೆ. ಎಡಭಾಗದಲ್ಲಿ ಶಾಸಕರು ಹಾಗೂ ಸಂಸದರಿಗಾಗಿ ವೇದಿಕೆ ನಿರ್ಮಾಣಗೊಳ್ಳುತ್ತಿದೆ.

ಸ್ವಾಮೀಜಿಗಳನ್ನು ಆಹ್ವಾನಿಸಿ ಕಾರ್ಯಕ್ರಮಕ್ಕೆ ಕರೆತರುವ ಜವಾಬ್ದಾರಿಯನ್ನು ಶಾಸಕರು, ಸಂಸದರು ಹಾಗೂ ಪ್ರಮುಖ ಮುಖಂಡರಿಗೆ ನೀಡಲಾಗಿದೆ. ಅವರು ನಿರಂತರವಾಗಿ ಮಠಗಳ ಸಂಪರ್ಕದಲ್ಲಿದ್ದಾರೆ. ಈಗಾಗಲೇ ಮಠಗಳಿಗೆ ತೆರಳಿ ಸ್ವಾಮೀಜಿಗಳಿಗೆ ಆಹ್ವಾನ ನೀಡಲಾಗಿದೆ. ಆಹ್ವಾನ ಪತ್ರಿಕೆಯೊಂದಿಗೆ ಮತ್ತೊಮ್ಮೆ ಭೇಟಿ ನೀಡಿ ಶ್ರೀಗಳನ್ನು ಕರೆತರಲಾಗುತ್ತದೆ ಎಂದು ಸ್ವಾಗತ ಸಮಿತಿಯ ಪದಾಧಿಕಾರಿಗಳು ತಿಳಿಸಿದರು.

‘ಬಹುತೇಕ ಎಲ್ಲಾ ಸಮಾಜಗಳ ಮೂಲ ಮಠಗಳು ಚಿತ್ರದುರ್ಗದಲ್ಲೇ ಇವೆ. ಎಲ್ಲಾ ಪೀಠಾಧಿಪತಿಗಳು ಬಿಎಸ್‌ವೈ ಅಭಿಮಾನೋತ್ಸವಕ್ಕೆ ಸಹಕಾರ ನೀಡಿದ್ದಾರೆ. ರಾಜ್ಯ, ಹೊರರಾಜ್ಯಗಳಿಂದ 1,000 ಸ್ವಾಮೀಜಿಗಳು ಪಾಲ್ಗೊಳ್ಳಲಿದ್ದಾರೆ’ ಎಂದು ಸ್ವಾಗತ ಸಮಿತಿ ಸದಸ್ಯರಾದ ನಾಗರಾಜ ಬೇದ್ರೆ ಹೇಳಿದರು.

ರಾಜ್ಯದ ಮೂಲೆಮೂಲೆಯಿಂದ 10 ಲಕ್ಷ ಜನ ಸಮಾರಂಭಕ್ಕೆ ಬರುವ ನಿರೀಕ್ಷೆ ಇದೆ. ಎಲ್ಲರಿಗೂ ಮೈಸೂರು ಪಾಕ್, ಚಪಾತಿ, ರೈಸ್‌ಬಾತ್, ಬಿಸಿಬೇಳೆ ಬಾತ್ ವಿತರಿಸಲು ನಿರ್ಧರಿಸಲಾಗಿದೆ. ಬೇಸಿಗೆ ಕಾರಣಕ್ಕೆ ಮೊಸರನ್ನ ವಿತರಿಸಲಾಗುತ್ತದೆ. ವೇದಿಕೆಯಾದ್ಯಂತ 32 ಕಡೆ ಮಜ್ಜಿಗೆ ಹಾಗೂ ಕುಡಿಯುವ ನೀರಿನ ಘಟಕ ತೆರೆಯಲಾಗುತ್ತಿದೆ.

5 ಕಡೆ ಊಟದ ವಿಭಾಗ ನಿರ್ಮಾಣಗೊಳ್ಳುತ್ತಿದ್ದು, ತಲಾ ಒಂದು ವಿಭಾಗಕ್ಕೆ ಇಬ್ಬರು ಶಾಸಕರನ್ನು ನಿರ್ವಹಣೆಗೆ ನಿಯೋಜಿಸಲಾಗಿದೆ. ಕೋಟೆನಗರಿಯಲ್ಲಿ ಗರಿಷ್ಠ ಉಷ್ಣಾಂಶ 39 ಡಿಗ್ರಿ ಸೆಲ್ಸಿಯಸ್ ಸಮೀಪಿಸುತ್ತಿರುವ ಕಾರಣ ಸಭಾಂಗಣದಾದ್ಯಂತ ಹೈದರಾಬಾದ್‌ನಿಂದ ತರಿಸಿರುವ ಮಂಜಿನ (ಮಿಸ್ಟ್) ಫ್ಯಾನ್ ಅಳವಡಿಸಲಾಗುತ್ತಿದೆ.

ವೇದಿಕೆ ನಿರ್ವಹಣೆಗಾಗಿ 2,000 ಬಿಜೆಪಿ ಕಾರ್ಯಕರ್ತರು, ಸ್ವಚ್ಛತೆ ನಿರ್ವಹಣೆಗಾಗಿ 500 ಕಾರ್ಯಕರ್ತರನ್ನು ನಿಯೋಜಿಸಲಾಗಿದೆ. ಸಭಿಕರ ಆರೋಗ್ಯದ ಮೇಲೆ ನಿಗಾ ವಹಿಸಲು 100 ವೈದ್ಯರ ತಂಡವನ್ನು ನೇಮಕ ಮಾಡಲಾಗಿದೆ. 50X480 ಅಳತೆಯ ಪ್ರವೇಶ ದ್ವಾರ ಸಿದ್ಧಗೊಳ್ಳುತ್ತಿದ್ದು, ಅದರ ಅಲಂಕಾರಕ್ಕಾಗಿ ತಮಿಳುನಾಡಿನಿಂದ 100 ಮಂದಿ ಕಲಾವಿದರನ್ನು ಕರೆಸಲಾಗಿದೆ.

ಅಭಿನಂದನಾ ಗ್ರಂಥ ಸಮರ್ಪಣೆ

‘ಬಿ.ಎಸ್.ಯಡಿಯೂರಪ್ಪ ಅವರ ಹೋರಾಟದ ಬದುಕು, ಬಿಜೆಪಿ ಕಟ್ಟಿದ ಬಗೆ, ಮುಖ್ಯಮಂತ್ರಿಯಾಗಿ ಸಾಧನೆ ಕುರಿತ ಅಭಿನಂದನಾ ಗ್ರಂಥ ಲೋಕಾರ್ಪಣೆಗೊಳ್ಳಲಿದೆ. ಅಮಿತ್ ಶಾ ಅವರು ಇದನ್ನು ಬಿಡುಗಡೆ ಮಾಡುವರು. ಗ್ರಂಥದಲ್ಲಿ ರಾಷ್ಟ್ರ, ರಾಜ್ಯ ನಾಯಕರು, ಸ್ವಾಮೀಜಿಗಳ ಲೇಖನಗಳಿವೆ. ಶೀಘ್ರ ಅದಕ್ಕೊಂದು ಶೀರ್ಷಿಕೆ ಇಡಲಾಗುವುದು’ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ತಮ್ಮೇಶ್‌ಗೌಡ ಹೇಳಿದರು.



ಬಿ.ವೈ.ವಿಜಯೇಂದ್ರ, ಬಸವರಾಜ ಬೊಮ್ಮಾಯಿ, ಗೋವಿಂದ ಕಾರಜೋಳ ಮುಂತಾದವರು ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಅವರನ್ನು ಆಹ್ವಾನಿಸಿದರು

8ಕ್ಕೆ ಪುರ ಪ್ರವೇಶ; ದಸರಾ ಮಾದರಿ ಮೆರವಣಿಗೆ

ಮೇ 8ರಂದು ಸಂಜೆ 5 ಗಂಟೆಗೆ ಬಿ.ಎಸ್.ಯಡಿಯೂರಪ್ಪ ಅವರು ಪುರ ಪ್ರವೇಶ ಮಾಡುವರು. 20,000ಕ್ಕೂ ಹೆಚ್ಚು ಜನ ಸ್ವಾಗತ ಕೋರುವರು. ಕನಕ ವೃತ್ತದಿಂದ ಮದಕರಿ ವೃತ್ತದವರೆಗೂ ಇರುವ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಲಿದ್ದಾರೆ. ದಸರಾ ಮಾದರಿ ಮೆರವಣಿಗೆ ನಡೆಯಲಿದ್ದು, 100 ಕಲಾ ತಂಡಗಳು ಭಾಗವಹಿಸಲಿವೆ. ನೇಗಿಲು ಹೊತ್ತ 1,000 ರೈತರು, ಪೂರ್ಣಕುಂಭ ಹೊತ್ತ 1,008 ಮಹಿಳೆಯರು ಪಾಲ್ಗೊಳ್ಳಲಿದ್ದಾರೆ ಎಂದು ಬಿಜೆಪಿ ಮುಖಂಡರು ತಿಳಿಸಿದರು.



ವರುಣ್ ಕೈಚಳಕ
ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವರುಣ್ ಚಕ್ರವರ್ತಿ ಭಾನುವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಮೂರು ವಿಕೆಟ್ ಪಡೆದರು. ಕೆಕೆಆರ್ ತಂಡ 7 ವಿಕೆಟ್ ಜಯ ಸಾಧಿಸಿತು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸರ್ಕಾರಕ್ಕೆ ಸಾಲ ನೀಡಿ, ಬಡ್ಡಿ ಗಳಿಸಿ 8

ರಾಜೇಗೌಡ ಶಾಸಕ ಸ್ಥಾನಕ್ಕೆ ಕುತ್ತು

ಶೃಂಗೇರಿ: ಜೀವರಾಜ್ ಗೆಲುವನ್ನು ಘೋಷಿಸಿದ ಚುನಾವಣಾಧಿಕಾರಿ


ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರುಎಣಿಕೆಯಲ್ಲಿ ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ ಅವರು ಶಾಸಕ ಸ್ಥಾನ ಕಳೆದುಕೊಂಡಿದ್ದು, ಡಿ.ಎನ್. ಜೀವರಾಜ್ ಅವರಿಗೆ ಗೆಲುವು ಸಂದಿದೆ ಎಂದು ಚುನಾವಣಾಧಿಕಾರಿ ಭಾನುವಾರ ರಾತ್ರಿ ಘೋಷಿಸಿದ್ದಾರೆ.

2023ರಲ್ಲಿ ಸಿಂಧುವಾಗಿದ್ದ 1,540 ಮತಗಳಲ್ಲಿ ಶನಿವಾರ ಮರುಎಣಿಕೆ ವೇಳೆ 255 ಮತಗಳು ಅಸಿಂಧುವಾಗಿವೆ. ತಾಂತ್ರಿಕವಾಗಿ ಬಿಜೆಪಿಯ ಡಿ.ಎನ್. ಜೀವರಾಜ್ ಅವರು 52 ಮತಗಳ ಮುನ್ನಡೆ ಸಾಧಿಸಿದ್ದಾರೆ.

ಶನಿವಾರ ದಿನವಿಡೀ ನಡೆದ ಗೊಂದಲಗಳ ನಡುವೆ ಭಾನುವಾರ ಬೆಳಗಿನ ಜಾವ 3 ಗಂಟೆ ಸುಮಾರಿಗೆ ಮತ ಎಣಿಕೆ ಪ್ರಕ್ರಿಯೆಯನ್ನು ಅಧಿಕಾರಿಗಳು ಪೂರ್ಣಗೊಳಿಸಿದರು. '2023ರ ಎಣಿಕೆ ವೇಳೆ ಮಾನ್ಯವಾಗಿದ್ದ ಮತಗಳ ಪೈಕಿ ಟಿ.ಡಿ. ರಾಜೇಗೌಡ ಅವರ 255 ಮತಗಳು ಈಗ ಅಮಾನ್ಯಗೊಂಡವು. ಡಿ.ಎನ್.ಜೀವರಾಜ್ ಅವರಿಗೆ ಬಂದಿದ್ದ ಮತಗಳ ಪೈಕಿ 2 ಮತಗಳು ಅಮಾನ್ಯಗೊಂಡವು. ಇದರಿಂದಾಗಿ 52 ಮತಗಳ ಅಂತರದಲ್ಲಿ ಜೀವರಾಜ್ ಜಯ ಸಾಧಿಸಿದ್ದಾರೆ' ಎಂದು ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.

4


ಟಿ.ಡಿ. ರಾಜೇಗೌಡ


ಡಿ.ಎನ್. ಜೀವರಾಜ್

ಚುನಾವಣಾ ಅಧಿಕಾರಿಗೆ ನೋಟಿಸ್

ಮತ ಎಣಿಕೆ ಮುಕ್ತಾಯಗೊಂಡರೂ ಫಲಿತಾಂಶ ಪ್ರಕಟ ಮಾಡದಿರುವುದನ್ನು ಪ್ರಶ್ನಿಸಿ ಬಿಜೆಪಿ ಪರ ವಕೀಲರು ಚುನಾವಣಾ ಅಧಿಕಾರಿಗೆ ನೋಟಿಸ್ ನೀಡಿದ್ದರು.

ಚುನಾವಣಾಧಿಕಾರಿ ಗೌರವ ಕುಮಾರ್ ಶೆಟ್ಟಿ ಅವರಿಗೆ ನೋಟಿಸ್ ನೀಡಿದ ವಕೀಲರಾದ ವಂದನಾ, 'ನ್ಯಾಯಾಲಯದ ಆದೇಶ ಪ್ರಕಾರ ಫಲಿತಾಂಶ ಪ್ರಕಟ ಮಾಡಬೇಕು. ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು' ಎಂದು ಆಗ್ರಹಿಸಿದ್ದರು.

4

ಮರು ಮತ ಎಣಿಕೆಯಲ್ಲಿ ಕುತಂತ್ರ: ಡಿ.ಕೆ.ಶಿವಕುಮಾರ್



ಹೊಸಪೇಟೆ (ವಿಜಯನಗರ): 'ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ವಿಚಾರದಲ್ಲಿ ದೊಡ್ಡ ಅಪರಾಧ ನಡೆದಿದೆ. 200ಕ್ಕೂ ಅಧಿಕ ಮತಗಳನ್ನು ಅಧಿಕಾರಿಗಳೇ ತಿದ್ದಿದ್ದಾರೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ದೊಡ್ಡ ಕಳಂಕ. ಇದನ್ನು ನಾವು ಕೋರ್ಟ್‌ನಲ್ಲಿ ಪ್ರಶ್ನಿಸಲಿದ್ದೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸಮೀಪದ ತುಂಗಭದ್ರಾ ಅಣೆಕಟ್ಟೆಗೆ ಭಾನುವಾರ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ಶೃಂಗೇರಿ ಕ್ಷೇತ್ರದಲ್ಲಿ ಅಧಿಕಾರಿಗಳನ್ನು ಬಳಸಿಕೊಂಡು ಮತಪತ್ರಗಳಲ್ಲಿ ಹಸ್ತಕ್ಷೇಪ ನಡೆದಿದೆ. ಮಾಜಿ ಶಾಸಕರಿಗೆ ನಿಷ್ಠರಾದ ಕೆಲ ಅಧಿಕಾರಿಗಳಿಂದಲೇ ಈ ಕೆಲಸ ಮಾಡಿಸಲಾಗಿದೆ. ಜಯನಗರ ಕ್ಷೇತ್ರದಲ್ಲೂ ಇಂತಹದೇ ಘಟನೆ ನಡೆದಿತ್ತು' ಎಂದರು.

ಶಾಸಕ ಟಿ.ಡಿ.ರಾಜೇಗೌಡ ಮತ್ತು ಡಿ.ಎನ್.ಜೀವರಾಜ್ ಇಬ್ಬರ ಕಡೆಯವರೂ ಸರಿಯಾಗಿ ಸಹಿ ಹಾಕಿಲ್ಲ ಎಂದು ಗೃಹ ಸಚಿವರೇ ಹೇಳಿದ್ದಾರಲ್ಲ ಎಂದು ಕೇಳಿದಾಗ, 'ಸಹಿ ಸರಿಯಾಗಿಯೇ ಮಾಡಿದ್ದಕ್ಕೆ ದಾಖಲೆ ಇದೆ. ನಾನೂ ವರದಿ ತರಿಸಿಕೊಂಡಿದ್ದೇನೆ' ಎಂದರು.

ಫಲಿತಾಂಶ ಘೋಷಿಸದಂತೆ ಕಾಂಗ್ರೆಸ್ ಒತ್ತಡ: ಬಿವೈವಿ



ತುಮಕೂರು: ಶೃಂಗೇರಿ ಕ್ಷೇತ್ರದ ಮತಗಳ ಮರುಎಣಿಕೆಯ ಫಲಿತಾಂಶ ಘೋಷಿಸದಂತೆ ಕಾಂಗ್ರೆಸ್ ನಾಯಕರು ಅಧಿಕಾರಿಗಳ ಮೇಲೆ ಒತ್ತಡ ಹೇರಿದ್ದರು ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದ್ದಾರೆ.

ಸಿದ್ಧಗಂಗಾ ಮಠದಲ್ಲಿ ಭಾನುವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮರು ಮತಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ಗೆದ್ದಿದ್ದಾರೆ ಎಂಬ ಮಾಹಿತಿ ಇದೆ. ಫಲಿತಾಂಶ ಘೋಷಿಸದೆ, ಕಾಂಗ್ರೆಸ್ ಅಭ್ಯರ್ಥಿಗೆ ಹೈಕೋರ್ಟ್‌ಗೆ ಹೋಗಲು ಕಾಲಾವಕಾಶ ಕೊಡಬೇಕು ಎಂಬ ಕುತಂತ್ರ ನಡೆದಿತ್ತು' ಎಂದರು.

ಜನರ ಆಶೀರ್ವಾದದಿಂದ ಗೆದ್ದಿರುವ ಜೀವರಾಜ್ ಅವರಿಗೆ ಮೂರು ವರ್ಷದಿಂದ ಅನ್ಯಾಯವಾಗಿದೆ. ಅನ್ಯಾಯ ಮುಂದುವರಿಸದೆ ಜನರ ತೀರ್ಪು ಒಪ್ಪಿ ಶಾಸಕರಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಬೇಕು ಎಂದರು. ಚಿತ್ರದುರ್ಗದಲ್ಲಿ ಇದೇ ವಿಷಯ ಕುರಿತು ಪ್ರತಿಕ್ರಿಯಿಸಿದ ವಿಜಯೇಂದ್ರ ಅವರು, 'ಮತ ಕಳ್ಳತನದ ಆರೋಪ ಮಾಡುತ್ತಿದ್ದ ಕಾಂಗ್ರೆಸ್ ನಾಯಕರ ಅಕ್ರಮ ಶೃಂಗೇರಿ ಕ್ಷೇತ್ರದಲ್ಲಿ ಬಯಲಾಗಿದೆ. ಆ ಪಕ್ಷದ ಮುಖಂಡರು ರಾಜ್ಯದ ಜನರ ಕ್ಷಮೆ ಕೇಳಬೇಕು' ಎಂದು ಒತ್ತಾಯಿಸಿದರು.



ಮತಗಳ್ಳತನ ಎಂದು ಪದೇ–ಪದೇ ಆರೋಪಿಸುವ ರಾಹುಲ್ ಗಾಂಧಿ ಈಗ ಎಲ್ಲಿದ್ದಾರೆ? ರಾಜ್ಯ ಸರ್ಕಾರವು ಅಧಿಕಾರ ದುರುಪಯೋಗ ಮಾಡಿಕೊಂಡು ಫಲಿತಾಂಶ ತಡೆಹಿಡಿದಿದ್ದು ಮತಗಳ್ಳತನವಲ್ಲವೇ?

ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಎಣಿಕೆಯಲ್ಲಿ ಗೊಂದಲ –ಗೃಹ ಸಚಿವ



ತುಮಕೂರು: 'ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಮತಎಣಿಕೆಯಲ್ಲಿ ಬಹಳಷ್ಟು ಗೊಂದಲ ಆಗಿದೆ. ಹೀಗಾಗಿಯೇ ಫಲಿತಾಂಶ ಘೋಷಿಸಲು ಆಗಿಲ್ಲ' ಎಂದು ಗೃಹ ಸಚಿವ ಜಿ.ಪರಮೇಶ್ವರ ಭಾನುವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ್ದರು.

4

ಗಂಧದ ಮೆರವಣಿಗೆ ವೈಭವ

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



14ನೇ ಶತಮಾನದ ಪ್ರಸಿದ್ಧ ಸೂಫಿ ಸಂತ ಖಾಜಾ ಬಂದಾನವಾಜ್‌ರ 622ನೇ ಉರುಸ್ ಅಂಗವಾಗಿ ಕಲಬುರಗಿಯಲ್ಲಿ ಭಾನುವಾರ ಸಂದಲ್ ಮೆರವಣಿಗೆ ಅದ್ದೂರಿಯಾಗಿ ಜರುಗಿತು. ಸಾವಿರಾರು ಭಕ್ತರು ಈ ಮೆರವಣಿಗೆಗೆ ಸಾಕ್ಷಿಯಾದರು

ಬೆಂಕಿ ಅವಘಡ: 9 ಮಂದಿ ಸಾವು

ನವದೆಹಲಿ (ಪಿಟಿಐ): ಪೂರ್ವ ದೆಹಲಿಯ ವಿವೇಕ್ ವಿಹಾರದಲ್ಲಿನ ವಸತಿ ಕಟ್ಟಡವೊಂದರಲ್ಲಿ ಭಾನುವಾರ ಸಂಭವಿಸಿದ ಬೆಂಕಿ ಅವಘಡದಲ್ಲಿ ಹಸುಗೂಸು ಸೇರಿದಂತೆ ಒಂಬತ್ತು ಮಂದಿ ಮೃತಪಟ್ಟಿದ್ದಾರೆ.

ನಾಲ್ಕು ಮಹಡಿಯ ಕಟ್ಟಡದಲ್ಲಿ ಮುಂಜಾನೆ 3:48ಕ್ಕೆ ಈ ಅವಘಡ ಸಂಭವಿಸಿದೆ. ಕಟ್ಟಡದ ಎರಡನೇ, ಮೂರನೇ ಮತ್ತು ನಾಲ್ಕನೇ ಮಹಡಿಯಲ್ಲಿ ಬೆಂಕಿಯ ಜ್ವಾಲೆ ವ್ಯಾಪಿಸಿತ್ತು.

ಕಟ್ಟಡದಿಂದ ಹೊರಗೆ ಬರಲು ಸಾಧ್ಯವಾಗದೆ ಎರಡು ಕುಟುಂಬಗಳ ಒಂಬತ್ತು ಮಂದಿ ಮೃತಪಟ್ಟಿದ್ದಾರೆ. 10ರಿಂದ 15 ಜನರನ್ನು ರಕ್ಷಿಸಲಾಗಿದ್ದು, ಗಾಯಗೊಂಡಿದ್ದ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.



ಹವಾನಿಯಂತ್ರಕವು ಸ್ಫೋಟಗೊಂಡಿದ್ದರಿಂದ ಕಟ್ಟಡಕ್ಕೆ ಬೆಂಕಿ ಹತ್ತಿಕೊಂಡಿರುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಬೆಂಕಿಯಿಂದ ಸುಟ್ಟು ಕರಕಲಾದ ಮೃತದೇಹಗಳು ಕಟ್ಟಡದ ವಿವಿಧೆಡೆ ದೊರೆತಿವೆ. ಕಟ್ಟಡದ ಮೊದಲ ಮಹಡಿಯಲ್ಲಿ ಒಂದು ಮೃತದೇಹ, ಎರಡನೇ ಮಹಡಿಯಲ್ಲಿ ಐದು ಮೃತದೇಹ ಮತ್ತು ಮೆಟ್ಟಿಲುಗಳಲ್ಲಿ ಮೂರು ಮೃತದೇಹಗಳು ಸಿಕ್ಕವು ಎಂದು ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

9

ಹೆಚ್ಚಲಿದೆ ಬ್ಯಾಂಕ್‌ಗಳ ಐ.ಟಿ ಸೇವಾ ವೆಚ್ಚ

ನವದೆಹಲಿ: ಗ್ರಾಹಕರ ದತ್ತಾಂಶ ರಕ್ಷಿಸಲು, ಹಣಕಾಸಿನ ಸಂಪನ್ಮೂಲವನ್ನು ಕಾಪಾಡಿಕೊಳ್ಳಲು ಐ.ಟಿ. ಸೇವೆಗಳ ಮೇಲಿನ ವೆಚ್ಚವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಮುಂದಾಗಿವೆ.

ವಿವರ 8

ಗಡಿ ವಿದ್ಯಾರ್ಥಿಗಳಿಗೆ ವಿದ್ಯೆ ಗಗನಕುಸುಮ

● ಹರಿಶಂಕರ್ ಆರ್.

ಬಳ್ಳಾರಿ: ನೆರೆಯ ಆಂಧ್ರ ಪ್ರದೇಶ, ತೆಲಂಗಾಣ ರಾಜ್ಯಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳಿಗೆ 'ಹೊರನಾಡು ಕನ್ನಡಿಗರು' ಅಥವಾ 'ಕರ್ನಾಟಕೇತರರು' ಎಂಬ ಹಣೆಪಟ್ಟಿ ಬಿದ್ದಿದ್ದು, ಇವರಿಗೆ ಕರ್ನಾಟಕದಲ್ಲಿ ಕಾಲೇಜು ಶಿಕ್ಷಣ ಗಗನ ಕುಸುಮವಾಗಿದೆ.

ಎಸ್ಎಸ್ಎಲ್‌ಸಿ ಬಳಿಕ ಕರ್ನಾಟಕದ ಕಾಲೇಜುಗಳಲ್ಲಿ ಸೀಟು ಸಿಗುತ್ತಿಲ್ಲ. ಕಲಾ ವಿಭಾಗದಲ್ಲಿ ಸೀಟು ಉಳಿದಿದ್ದರೆ ಮಾತ್ರ ಗಡಿನಾಡ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಲಾಗುತ್ತದೆಯೇ ಹೊರತು, ವಿಜ್ಞಾನ, ವಾಣಿಜ್ಯ ವಿಭಾಗಕ್ಕೆ ಸೀಟು ಸಿಗದಂತಾಗಿದೆ. ಶೈಕ್ಷಣಿಕ ಭದ್ರತೆ ಇಲ್ಲದೇ, ವಿದ್ಯಾರ್ಥಿಗಳು ಕ್ರಮೇಣ ಬೇರೆ ಭಾಷಾ ಶಿಕ್ಷಣದತ್ತ ಮುಖ ಮಾಡುವಂತಾಗಿದೆ.

1956ರ ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಸಂದರ್ಭದಲ್ಲಿ ಕರ್ನೂಲು ಹಾಗೂ ಅನಂತಪುರ ಜಿಲ್ಲೆಯ ಆಲೂರು, ಆದೋನಿ, ರಾಯದುರ್ಗ ಹಾಗೂ ಮಡಕಶಿರದಂಥ ಅಚ್ಚಕನ್ನಡ ಮಾತನಾಡುವ ಪ್ರದೇಶಗಳು ಆಂಧ್ರ ಪ್ರದೇಶದ ಪಾಲಾದವು.

8



ಕರ್ನೂಲು ಜಿಲ್ಲೆಯ ನದಿಬಾಗಿಯಲ್ಲಿರುವ ಜಿಲ್ಲಾ ಪರಿಷತ್‌ನ ಕನ್ನಡ ಉನ್ನತ ಪಾಠಶಾಲೆ

ಮೀಸಲು ಕಲ್ಪಿಸಲು ಆಗ್ರಹ

'ಆಂಧ್ರದಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ಘೋಷಿಸಬೇಕು. ಆಂಧ್ರದಲ್ಲಿ ನೀಡುವ ಜಾತಿ, ಆದಾಯ ಪ್ರಮಾಣಪತ್ರಗಳಿಗೆ ಮಾನ್ಯತೆ ನೀಡಬೇಕು. ಗಡಿ ಭಾಗದ ಕನ್ನಡ ಶಾಲೆಗಳಲ್ಲಿ ಗಣಿತ, ವಿಜ್ಞಾನ, ಕನ್ನಡ ಶಿಕ್ಷಕರನ್ನು ಸರ್ಕಾರ ನೇಮಿಸಬೇಕು' ಎಂದು ಆಂಧ್ರಪ್ರದೇಶ ಕನ್ನಡ ಶಿಕ್ಷಕ ಸಂಘ ಒತ್ತಾಯಿಸಿದೆ.

ತಮಿಳುನಾಡು, ಕೇರಳ, ಅಸ್ಸಾಂ, ಪುದುಚೆರಿಯಲ್ಲಿಯೂ ಇಂದು ಮತ ಎಣಿಕೆ

ಬಂಗಾಳ ಅಂಗಳದಲಿ ಗೋಲು ಯಾರಿಗೆ?

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್), ದಾಖಲೆ ಪ್ರಮಾಣದ ಮತದಾನದಿಂದಾಗಿ ಗಮನ ಸೆಳೆದಿದ್ದ ನಾಲ್ಕು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶ ಪುದುಚೆರಿ ವಿಧಾನಸಭೆಗಳ ಚುನಾವಣೆಯ ಮತ ಎಣಿಕೆ ಸೋಮವಾರ (ಮೇ 4) ನಡೆಯಲಿದ್ದು, ದೇಶವೇ ಕುತೂಹಲದಿಂದ ಫಲಿತಾಂಶವನ್ನು ಎದುರು ನೋಡುತ್ತಿದೆ.

ಈ ಫಲಿತಾಂಶವು ಆಯಾ ರಾಜ್ಯಗಳಲ್ಲಿನ ಆಡಳಿತಾರೂಢ ಪಕ್ಷ ಹಾಗೂ ವಿಪಕ್ಷಗಳ ಮುಂದಿನ ನಡೆಗಳ ಮೇಲೆ ಪರಿಣಾಮ ಬೀರಲಿದೆ. ಆಯಾ ರಾಜ್ಯಗಳಲ್ಲಿ ರಾಜಕೀಯ ಸಮೀಕರಣಗಳ ಮರುವ್ಯಾಖ್ಯಾನಕ್ಕೂ ದಾರಿ ಮಾಡಿಕೊಡಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ತಿಂಗಳುಗಟ್ಟಲೆ ಕಾವೇರಿದ ಪ್ರಚಾರ ನಡೆದು, ಮತದಾನಕ್ಕೆ ವ್ಯಾಪಕ ಬಿಗಿಭದ್ರತೆ ಹಾಕಲಾಗಿದ್ದ ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ಟಿಎಂಸಿ ಮತ್ತೆ ಅಧಿಕಾರಕ್ಕೆ ಬರಲಿದೆಯೇ ಅಥವಾ ಐತಿಹಾಸಿಕ ಗೆಲುವು ಸಾಧಿಸುವ ಮೂಲಕ ರಾಜ್ಯದಲ್ಲಿ ಬಿಜೆಪಿ ಮೊದಲ ಬಾರಿಗೆ ಆಡಳಿತದ ಚುಕ್ಕಾಣಿ ಹಿಡಿಯಲಿದೆಯೇ ಎಂಬುದನ್ನು ಕಾದು ನೋಡಬೇಕು.

4

ಚುನಾವಣಾ ಕಣ ವಿವರ

ರಾಜ್ಯ	ಒಟ್ಟು ಸ್ಥಾನ	ಬಹುಮತ	ಆಡಳಿತ ಪಕ್ಷ	ವಿರೋಧ ಪಕ್ಷ
ಪಶ್ಚಿಮ ಬಂಗಾಳ	294	148	ಟಿಎಂಸಿ	ಬಿಜೆಪಿ
ತಮಿಳುನಾಡು	234	118	ಡಿಎಂಕೆ	ಎಐಎಡಿಎಂಕೆ
ಕೇರಳ	140	71	ಸಿಪಿಎಂ+	ಕಾಂಗ್ರೆಸ್+
ಅಸ್ಸಾಂ	126	64	ಬಿಜೆಪಿ	ಕಾಂಗ್ರೆಸ್
ಪುದುಚೆರಿ	30	16	ಎಐಎನ್‌ಆರ್‌ಸಿ	ಕಾಂಗ್ರೆಸ್

ಪ್ರಮುಖ ಅಭ್ಯರ್ಥಿಗಳು

- ಮಮತಾ ಬ್ಯಾನರ್ಜಿ, ಸುವೇಂದು ಅಧಿಕಾರಿ
- ಎಂ.ಕೆ.ಸ್ಟಾಲಿನ್, ಇ.ಕೆ. ಪಳನಿಸ್ವಾಮಿ, ವಿಜಯ್
- ಪಿಣರಾಯಿ ವಿಜಯನ್, ವಿ.ಡಿ.ಸತೀಶನ್
- ಹಿಮಂತ ಬಿಸ್ವಾ ಶರ್ಮಾ, ಗೌರವ್ ಗೊಗೋಯ್



ಉಪ ಚುನಾವಣೆ ಮತ ಎಣಿಕೆ ಇಂದು

ರಾಜ್ಯದ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಮತಎಣಿಕೆ ಪ್ರಕ್ರಿಯೆ ಸೋಮವಾರ ನಡೆಯಲಿದ್ದು, ಮಧ್ಯಾಹ್ನದ ವೇಳೆಗೆ ಫಲಿತಾಂಶ ಪ್ರಕಟವಾಗುವ ನಿರೀಕ್ಷೆ ಇದೆ.

ವಿವರ 4

ಬಹು– ಹಂತದ ಪ್ರಸ್ತಾವ ಸಲ್ಲಿಸಿದ ಇರಾನ್

ಲಾಹೋರ್ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವನ್ನು ಅಂತ್ಯಗೊಳಿಸುವ ಪ್ರಯತ್ನದ ಭಾಗವಾಗಿ ಇರಾನ್ ಬಹು– ಹಂತದ ಪ್ರಸ್ತಾವವನ್ನು ಅಮೆರಿಕಕ್ಕೆ ರವಾನಿಸಿದೆ.

ಆದರೆ, ಪಶ್ಚಿಮ ಏಷ್ಯಾ ಸಂಘರ್ಷ ಅಂತ್ಯಗೊಳಿಸಲು ಇರಾನ್ ಕಳೆದ ವಾರದ ಸಲ್ಲಿಸಿದ್ದ ಹೊಸ ಪ್ರಸ್ತಾವ ತೃಪ್ತಿ ತಂದಿಲ್ಲ ಎಂದಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಣ್ವಸ್ತ್ರ ಯೋಜನೆಯನ್ನು ಕೈಬಿಡುವ ಖಾತರಿ ನೀಡದ ಹೊರತು ಯಾವುದೇ ಪ್ರಸ್ತಾವವನ್ನು ಅಮೆರಿಕ ಒಪ್ಪಿಕೊಳ್ಳುವ ಸಾಧ್ಯತೆ ಇಲ್ಲ ಎನ್ನುವ ಸುಳಿವು ನೀಡಿದ್ದರು.



ಇರಾನ್‌ನ ಈ ಹೊಸ ಪ್ರಸ್ತಾವವು ಉದ್ವಿಗ್ನ ಪರಿಸ್ಥಿತಿಯನ್ನು ಹಂತ–ಹಂತವಾಗಿ ಕಡಿಮೆ ಮಾಡುವ ಉದ್ದೇಶ ಹೊಂದಿದೆ. ಇದು ತಕ್ಷಣದ ಸಂಘರ್ಷ ನಿರ್ವಹಣೆಯನ್ನು ಇರಾನ್‌ನ ಅಣ್ವಸ್ತ್ರ ಕಾರ್ಯಕ್ರಮದ ಕುರಿತ ಹಳೆಯ ಹಾಗೂ ಸಂಕೀರ್ಣವಾದ ವಿವಾದದಿಂದ ಬೇರ್ಪಡಿಸಲು ಪ್ರಯತ್ನಿಸುತ್ತಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಈ ಪ್ರಸ್ತಾವವು ಮೂರು ಅಂಶಗಳನ್ನು ಒಳಗೊಂಡಿದೆ. ಮೊದಲನೇ ಅಂಶವು ಸಂಘರ್ಷವನ್ನು ಕಡಿಮೆ ಮಾಡುವ ಕ್ರಮಗಳ ಮೇಲೆ ಗಮನ ಕೇಂದ್ರೀಕರಿಸುತ್ತದೆ. ಹೊರ್ಮುಜ್ ಜಲಸಂಧಿ ಹಾಗೂ ಅದರ ಸುತ್ತಲಿನ ಉದ್ವಿಗ್ನತೆಯನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತದೆ.

8

'ಅನುಚಿತವಾಗಿ ವರ್ತಿಸಿದರೆ ಮತ್ತೆ ದಾಳಿ'



ವಾಷಿಂಗ್ಟನ್ (ಪಿಟಿಐ): 'ಯುದ್ಧವನ್ನು ಅಂತ್ಯಗೊಳಿಸಲು ಇರಾನ್ ಮುಂದಿಟ್ಟಿರುವ ಹೊಸ ಪ್ರಸ್ತಾವವನ್ನು ಪರಿಶೀಲಿಸಲಾಗುತ್ತಿದೆ. ಒಂದು ವೇಳೆ, ಇರಾನ್ ಅನುಚಿತವಾಗಿ ವರ್ತಿಸಿದರೆ ಅದರ ವಿರುದ್ಧ ಸೇನಾ ದಾಳಿ ಮತ್ತೆ ಆರಂಭವಾಗಬಹುದು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ಹೇಳಿದ್ದಾರೆ.

8

ಚಿನಕುರುಳಿ ಪ್ರಕಾಶ್ ಶೆಟ್ಟಿ



ಆರ್‌ಟಿಐ: ಸಂಗಾತಿಯ ಆದಾಯ ವಿವರ ಬಹಿರಂಗ ಸಲ್ಲ

ನವದೆಹಲಿ (ಪಿಟಿಐ): ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಅರ್ಜಿ ಸಲ್ಲಿಸುವ ಮೂಲಕ ಯಾವುದೇ ವ್ಯಕ್ತಿಯು ತನ್ನ ಸಂಗಾತಿಯ ಆದಾಯದ ವಿವರಗಳನ್ನು ಪಡೆಯಲು ಸಾಧ್ಯವಿಲ್ಲ ಎಂದು ದೆಹಲಿ ಹೈಕೋರ್ಟ್ ತೀರ್ಪು ನೀಡಿದೆ. ಕಾಯ್ದೆಯ ಸೆಕ್ಷನ್ 8(1)(ಜೆ) ಅಡಿಯಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸದ ಹೊರತು, ವೈಯಕ್ತಿಕ ಮಾಹಿತಿ ಬಹಿರಂಗಪಡಿಸುವುದಕ್ಕೆ ವಿನಾಯಿತಿಯಿದೆ ಎಂದು ನ್ಯಾಯಮೂರ್ತಿ ಪುರುಷೇಂದ್ರ ಕುಮಾರ್ ಕೌರವ್ ತಿಳಿಸಿದ್ದಾರೆ.

ವಿವರ 9

ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗು ಸಹಿತ ಮಳೆಯಾಗಲಿದೆ



ಮೇಖ್ರಿ ವೃತ್ತದ ಬಳಿ ಇರುವ ರಕ್ಷಣಾ ಇಲಾಖೆಯ ವಸತಿ ಗೃಹದ ಕಾಂಪೌಂಡ್ ಬೀಳುವ ಸ್ಥಿತಿಯಲ್ಲಿದೆ. ಈ ಕಾಂಪೌಂಡ್‌ನ ಅಡಿಪಾಯದ ಕಲ್ಲುಗಳು ಕುಸಿದಿದ್ದು, ಏನಾದರೂ ಅನಾಹುತ ಆಗುವ ಮುನ್ನ ಕಾಂಪೌಂಡ್ ಅನ್ನು ದುರಸ್ತಿಗೊಳಿಸಬೇಕು



ಜಯಮಹಲ್ ರಸ್ತೆಯ ಮೂರನೇ ಮೇನ್‌ನ ಏಳನೇ ಕ್ರಾಸ್‌ನಲ್ಲಿರುವ ಲೋಕೋಪಯೋಗಿ ಇಲಾಖೆಯ ವಸತಿ ಗೃಹಗಳ ಕಾಂಪೌಂಡ್ ಶಿಥಿಲಗೊಂಡಿದೆ

ಪ್ರಜಾವಾಣಿ

ಅಪಾಯದ ಸ್ಥಳಗಳಿವೆಯೇ?

ಮಳೆಯಿಂದ ಸಮಸ್ಯೆಯಾಗುವ ಪ್ರದೇಶಗಳು, ಶಿಥಿಲವಾದ ಗೋಡೆ, ಕಟ್ಟಡಗಳು ನಿಮ್ಮ ಸಮೀಪದ ಸ್ಥಳಗಳಲ್ಲಿ ಇದ್ದರೆ, ಯಾವುದಾದರೂ ಪ್ರದೇಶದಲ್ಲಿ ಮಳೆಯಿಂದ ಸಮಸ್ಯೆ ಆಗುತ್ತಿರುವ ಮಾಹಿತಿ ಇದ್ದರೆ, ಚಿತ್ರ ಸಹಿತ 'ಪ್ರಜಾವಾಣಿ'ಗೆ ಕಳುಹಿಸಿ ಕೊಡಿ.

96060 38256

ಜಲಮಂಡಳಿ: ₹12.15 ಕೋಟಿ ಸಂಗ್ರಹ

ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆಗೆ ಸಕಾರಾತ್ಮಕ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ದೀರ್ಘಕಾಲದಿಂದ ಬಿಲ್ ಬಾಕಿ ಉಳಿಸಿರುವ ಗ್ರಾಹಕರಿಗೆ ನೋಟಿಸ್
- ಏಪ್ರಿಲ್ 30ಗಳ ಎರಡು ವಾರದಲ್ಲಿ 56,765 ಗ್ರಾಹಕರಿಂದ ₹12.15 ಕೋಟಿ ಸಂಗ್ರಹ

ಬೆಂಗಳೂರು: ಬೆಂಗಳೂರು ಜಲಮಂಡಳಿ ಮೊದಲ ಸಲ ಜಾರಿಗೆ ತಂದಿರುವ ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆಗೆ ಗ್ರಾಹಕರಿಂದ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ದೀರ್ಘಕಾಲದಿಂದ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರನ್ನು ಗುರುತಿಸಿ ನೋಟಿಸ್ ನೀಡಲಾಗಿತ್ತು. ಏಪ್ರಿಲ್ ತಿಂಗಳ ಎರಡು ವಾರದಲ್ಲಿ 56,765 ಗ್ರಾಹಕರಿಂದ ₹12.15 ಕೋಟಿ ಸಂಗ್ರಹವಾಗಿದೆ. ಮೇ ಹಾಗೂ ಜೂನ್ ತಿಂಗಳಲ್ಲಿ ಹೆಚ್ಚಿನ ಬಾಕಿ ವಸೂಲಿಯಾಗುವ ನಿರೀಕ್ಷೆ ಇದೆ.

ಹಳೆಯ ದತ್ತಾಂಶಗಳನ್ನು ಪರಿಶೀಲಿಸಿದ ಮಂಡಳಿಯು, 3,73,883 ದಾಖಲೆಗಳ ಪೈಕಿ ಒಟಿಎಸ್‌ಗೆ ಅರ್ಹವಾದ 2,81,019 ದಾಖಲೆಗಳನ್ನು ಪ್ರತ್ಯೇಕಿಸಿದೆ. ಈಗಾಗಲೇ 2,12,359 ನೋಟಿಸ್‌ಗಳನ್ನು ಮುದ್ರಿಸಿ ಆಯಾ ಉಪ-ವಿಭಾಗಗಳಿಗೆ ವಿತರಣೆಗಾಗಿ ಕಳುಹಿಸಲಾಗಿದೆ.

ನೋಟಿಸ್ ವಿತರಣೆ ವಿಳಂಬವಾಗದಂತೆ ನೋಡಿಕೊಳ್ಳಲು, ಮಂಡಳಿಯು ಮುದ್ರಣ ಕಾರ್ಯವನ್ನು ಹೊರಗುತ್ತಿಗೆ ನೀಡಿದೆ. ನಿಯೋಜಿತ ಸಂಸ್ಥೆಯು ಪ್ರತಿ 48 ಗಂಟೆಗಳಿಗೆ 50,000ದಷ್ಟು ನೋಟಿಸ್ ಮುದ್ರಿಸುವ ಸಾಮರ್ಥ್ಯದೊಂದಿಗೆ ಕಾರ್ಯನಿರ್ವಹಿಸುತ್ತಿದೆ.

ಬಾಕಿ ಉಳಿದಿರುವ 1,17,098 ನೋಟಿಸ್‌ಗಳನ್ನು ಮೇ 10ರ ಒಳಗೆ ಮುದ್ರಿಸಿ, ಫಲಾನುಭವಿಗಳಿಗೆ ತಲುಪಿಸುವ ಗುರಿಯನ್ನು ಮಂಡಳಿ ಹೊಂದಿದೆ.

ಈ ಯೋಜನೆ ಮೂಲಕ ₹471.56 ಕೋಟಿ ಅಸಲನ್ನು ಸಂಗ್ರಹಿಸುವ ಗುರಿ ಜಲಮಂಡಳಿಯದ್ದಾಗಿದೆ. ₹252.29 ಕೋಟಿ ಬಡ್ಡಿ ಮನ್ನಾ ಸೌಲಭ್ಯವನ್ನು ಗ್ರಾಹಕರಿಗೆ ಒದಗಿಸುತ್ತಿದೆ ಎಂದು ಅಧ್ಯಕ್ಷ ಡಾ.ರಾಮಪ್ರಸಾತ್ ಮನೋಹರ್ ತಿಳಿಸಿದ್ದಾರೆ.



ಬೆಂಗಳೂರು ಜಲಮಂಡಳಿ

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256



'ಬೀದಿ ನಾಯಿಗಳ ಹಾವಳಿ ನಿಯಂತ್ರಿಸಿ'

ಕೆಂಗೇರಿ ಉಪನಗರದ ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ ಮೊದಲನೇ ಹಂತದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಇಲ್ಲಿ ಮಕ್ಕಳು, ವೃದ್ಧರು ಬೀದಿಯಲ್ಲಿ ಓಡಾಡಲು ಹೆದರುತ್ತಿದ್ದಾರೆ. ವಾಯುವಿಹಾರಕ್ಕೆ ತೆರಳುವ ವೃದ್ಧರನ್ನು, ಮಹಿಳೆಯರನ್ನು ಈ ಬೀದಿ ನಾಯಿಗಳು ಅಟ್ಟಿಸಿಕೊಂಡು ಬಂದು ದಾಳಿ ಮಾಡುತ್ತಿವೆ. ಆದ್ದರಿಂದ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಇವುಗಳ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು.

ಸಿ.ಎನ್. ಭಂಡಾರೆ, ಕೆಂಗೇರಿ ಉಪನಗರ

'ತುಕ್ಕು ಹಿಡಿದ ವ್ಯಾಯಾಮ ಪರಿಕರಗಳು'



ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಪಾಲನಹಳ್ಳಿ ಕೆರೆಯ ಉದ್ಯಾನದಲ್ಲಿರುವ ಜಿಮ್ ಪರಿಕರಗಳು ತುಕ್ಕು ಹಿಡಿದಿವೆ. ಇದರಿಂದ ವಾಯುವಿಹಾರಿಗಳಿಗೆ ವ್ಯಾಯಾಮ ಮಾಡಲು ತೊಂದರೆ ಆಗುತ್ತಿದೆ. ಇಲ್ಲಿ ಅಳವಡಿಸಿರುವ ಜಿಮ್ ಪರಿಕರಗಳು ತುಂಬಾ ಹಳೆಯದಾಗಿವೆ. ಸರಿಯಾದ ನಿರ್ವಹಣೆ ಇಲ್ಲದೇ ಹಾಳಾಗಿವೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ.

ವೆಂಕಟರೆಡ್ಡಿ, ವಾಯುವಿಹಾರಿ



'ಕುಸಿದ ರಸ್ತೆ ದುರಸ್ತಿಗೊಳಿಸಿ'

ಸರ್ ಎಂ. ವಿಶ್ವೇಶ್ವರಯ್ಯ ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಕುಸಿದಿದ್ದು, ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಕುಸಿದಿರುವ ಜಾಗದಲ್ಲಿ ಕಲ್ಲುಗಳನ್ನು ಹಾಕಲಾಗಿದೆ. ಏನಾದರೂ ಅನಾಹುತಗಳು ಸಂಭವಿಸುವ ಮುನ್ನ ರಸ್ತೆಯನ್ನು ದುರಸ್ತಿಗೊಳಿಸಬೇಕು. ಸಂಬಂಧಪಟ್ಟ ಪಾಲಿಕೆ ಸಿಬ್ಬಂದಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.

ಲಿಂಗೇಶ ಟಿ., ಸರ್ ಎಂ. ವಿಶ್ವೇಶ್ವರಯ್ಯ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ

'ಮೈಸೂರು ರಸ್ತೆ ಸ್ಕೈ ವಾಕ್ ವಿಸ್ತರಿಸಿ'



ಕೆಂಗೇರಿ ಬಸ್ ನಿಲ್ದಾಣದ ಬಳಿಯ ಮೈಸೂರು ರಸ್ತೆಯಲ್ಲಿರುವ ಸ್ಕೈ ವಾಕ್ ಬಹಳ ಕಿರಿದಾಗಿದೆ. ಇದರಿಂದ ಪಾದಚಾರಿಗಳು ಎದುರು–ಬದುರು ಸಂಚರಿಸಲು ಕಷ್ಟವಾಗುತ್ತಿದೆ. ಸ್ಕೈ ವಾಕ್‌ಗೆ ಪ್ರವೇಶ ಕಲ್ಪಿಸುವ ಮೆಟ್ಟಿಲುಗಳನ್ನು ವಿಸ್ತರಿಸಿ, ಇಳಿಯಲು ಮತ್ತು ಹತ್ತಲು ಪ್ರತ್ಯೇಕ ಮಾರ್ಗದ ವ್ಯವಸ್ಥೆ ಕಲ್ಪಿಸಬೇಕು. ಮೆಟ್ಟಿಲುಗಳನ್ನು ವಿಸ್ತರಿಸಲು ಸ್ಥಳಾವಕಾಶವೂ ಇದೆ. ಈ ಸ್ಕೈ ವಾಕ್ ಮೂಲಕ ನಿತ್ಯವೂ ಸಾವಿರಾರು ಜನರು ಕೆಂಗೇರಿಯಿಂದ ಮೈಸೂರು ಕಡೆಗೆ, ಮೆಟ್ರೊ ನಿಲ್ದಾಣಗಳಿಗೆ, ಬೆಂಗಳೂರು ನಗರದ ಕಡೆಗೆ ಓಡಾಡುತ್ತಾರೆ. ಸ್ಕೈ ವಾಕ್ ಕಿರಿದಾಗಿರುವ ಕಾರಣ ನಿತ್ಯವೂ ಸಾರ್ವಜನಿಕರು ಪರದಾಡುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.

ಕೆ.ಎಸ್. ಸೋಮಶೇಖರ್ ಬಾಬು, ಕೆಂಗೇರಿ



'ರಸ್ತೆ ಗುಂಡಿ ಮುಚ್ಚಿ'

ಕೆಂಗೇರಿ ಉಪನಗರದ ಬಂಡೆ ಮಠ ಬಡಾವಣೆಯ ಕೆಂಗೇರಿ–ತಾವರೆಕೆರೆ ಮುಖ್ಯ ರಸ್ತೆಯಲ್ಲಿ ಬೆಂಗಳೂರು ಜಲಮಂಡಳಿಯ ಸಿಬ್ಬಂದಿ ರಸ್ತೆ ಅಗೆದು ಸರಿಯಾಗಿ ಮುಚ್ಚಿಲ್ಲ. ಇತ್ತೀಚೆಗೆ ಸುರಿದ ಭಾರಿ ಮಳೆಯಿಂದ ಈ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಇದರಿಂದ ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಕಳಪೆ ಕಾಮಗಾರಿಯಿಂದ ರಸ್ತೆ ಗುಂಡಿಗಳು ಹೆಚ್ಚಾಗಿದ್ದು, ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಿದೆ. ಸ್ಥಳೀಯ ಶಾಸಕರು ಈ ಬಗ್ಗೆ ಗಮನಹರಿಸಿ, ರಸ್ತೆ ದುರಸ್ತಿಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಬೇಕು.

ಶಶಿಧರ್ ಸಿ. ಆರಾಧ್ಯ, ಕೆಂಗೇರಿ ಉಪನಗರ

ಸ್ವಚ್ಛತೆ...

ಪ್ರಜಾವಾಣಿ ಚಿತ್ರ



ವಾಯ್ಸ್ ಆಫ್ ಸದಾಶಿವನಗರ ಸಾಮಾಜಿಕ ಸೇವಾ ಸಂಘಟನೆಯ ಸದಸ್ಯರು ಹಾಗೂ ಪೌರಕಾರ್ಮಿಕರು ಸದಾಶಿವನಗರದ ಸ್ಯಾಂಕಿ ಕೆರೆ ಆವರಣದಲ್ಲಿ ಮತ್ತು ಪಾದಚಾರಿ ಮಾರ್ಗದಲ್ಲಿ ಭಾನುವಾರ ಸ್ವಚ್ಛತಾ ಅಭಿಯಾನ ನಡೆಸಿದರು

ನಗರದಲ್ಲಿ ಇಂದು

ಅನ್ನಪೂರ್ಣಾಂಬ ಸಮೇತ ನಗರೇಶ್ವರಸ್ವಾಮಿಯ 142ನೇ ಬ್ರಹ್ಮ ರಥೋತ್ಸವ: ಬೆಳಿಗ್ಗೆ 8ಕ್ಕೆ ಮೂಲ ದೇವರಿಗೆ ಪಂಚಾಮೃತ ಅಭಿಷೇಕ, 10.30ಕ್ಕೆ ಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಶಯನೋತ್ಸವ ಮತ್ತು ಪೂಲಂಗಿ ಸೇವೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ಬಿ.ಎ.ಎಸ್.ವಿ. (ನಗರ್ತ) ಸಮಿತಿ, ನಗರೇಶ್ವರಸ್ವಾಮಿ ದೇವಸ್ಥಾನದ ಆವರಣ, ನಗರ್ತಪೇಟೆ.

'ಫ್ರಮ್ ಫೀಲ್ಡ್ ಟು ಪ್ಲೈಟ್' ಚಿತ್ರದ ಕುರಿತು ಸಂವಾದ: ಭಾಗವಹಿಸುವವರು: ಇಪ್ಸಿತಾ ಭಟ್ಟಾಚಾರ್ಯ, ಬಬಿತಾ, ಪೂಜಾಪಾಂಡೆ, ಆಯೋಜನೆ: ಬ್ರೇಕ್ ಥ್ರೂ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದೊಮ್ಮಲೂರು, ಮಧ್ಯಾಹ್ನ 2.30

ವಾರ್ಷಿಕೋತ್ಸವ ಸಮಾರಂಭ: 'ಕೌಟುಂಬಿಕ ಮೌಲ್ಯಗಳು' ಉಪನ್ಯಾಸ: ಕೃಷ್ಣೇಗೌಡ, ಆಯೋಜನೆ ಮತ್ತು ಸ್ಥಳ: ಶ್ರೀ ವಿನಾಯಕ ದೇವಸ್ಥಾನ ಸಮಿತಿ, ಶ್ರೀ ವಿನಾಯಕ ದೇವಸ್ಥಾನ ಒಂದನೇ ಅಡ್ಡರಸ್ತೆ, ಎರಡನೇ ವಿಭಾಗ, ಆರ್.ಟಿ. ನಗರ, ಸಂಜೆ 6



ಕೃಷ್ಣೇಗೌಡ

***

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ- ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

'ಬಸವಣ್ಣನ ವಚನ ಪಾಲಿಸಿ, ಯುದ್ಧ ದೂರವಿಡಿ'

ಬಸವ ಜಯಂತಿ: ಗೊ.ರು.ಚನ್ನಬಸಪ್ಪ ಅವರಿಗೆ ಶರಣ ಮುಕುಟ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಯೆಯೇ ಧರ್ಮದ ಮೂಲವಯ್ಯ' ಎಂದು ಸಾರಿದ ಬಸವಣ್ಣನ ವಚನಗಳನ್ನು ಅಳವಡಿಸಿಕೊಂಡರೆ ಜಗತ್ತಿನಲ್ಲಿ ಯುದ್ಧದ ಸನ್ನಿವೇಶವೇ ಸೃಷ್ಟಿಯಾಗುವುದಿಲ್ಲ' ಎಂದು ನಿವೃತ್ತ ಐಎಎಸ್ ಅಧಿಕಾರಿ ಸಿ.ಸೋಮಶೇಖರ್ ಹೇಳಿದರು.

ಜರಗನಹಳ್ಳಿಯ ವೀರಶೈವ ಸೇವಾ ಸಮಾಜ ಭಾನುವಾರ ಹಮ್ಮಿಕೊಂಡಿದ್ದ ಜಗಜ್ಯೋತಿ ಬಸವೇಶ್ವರರ ಜಯಂತಿ, ವಿದ್ವಾಂಸ ಗೊ.ರು.ಚನ್ನಬಸಪ್ಪ ಅವರಿಗೆ ಶರಣ ಮುಕುಟ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಶರಣರ ವಚನಗಳಲ್ಲಿರುವ ಸಮಾನತೆ, ಮಾನವೀಯತೆ ಸಂದೇಶಗಳು ಎಂದಿಗೂ ಸಮಾಜವನ್ನು ಬೆಸೆಯುವ ಕೆಲಸ ಮಾಡುತ್ತಾ ಬಂದಿವೆ. ಬಸವಣ್ಣ ಇದನ್ನು 12ನೇ ಶತಮಾನದಲ್ಲೇ ಪ್ರತಿಪಾದನೆ ಮಾಡಿ ಅನುಷ್ಠಾನಕ್ಕೆ ತಂದರು. ಇವುಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಸಂಘರ್ಷವೇ ಇರದು' ಎಂದು ಹೇಳಿದರು.



ಜರಗನಹಳ್ಳಿಯಲ್ಲಿ ಭಾನುವಾರ ವೀರಶೈವ ಸೇವಾ ಸಮಾಜ ಆಯೋಜಿಸಿದ್ದ ಜಗಜ್ಯೋತಿ ಬಸವೇಶ್ವರರ ಜಯಂತಿಯಲ್ಲಿ ಗೊ.ರು. ಚನ್ನಬಸಪ್ಪ ಅವರಿಗೆ ಶರಣ ಮುಕುಟ ಪ್ರಶಸ್ತಿ ನೀಡಿ ಗೌರವಿಸಲಾಯಿತು. ದಿನೇಶ್ ಎಂ.ಎನ್, ಸಿ. ಸೋಮಶೇಖರ್, ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಹಂ. ಪ. ನಾಗರಾಜಯ್ಯ , ಬಿ. ಸ್ವರ್ಣಗೌರಿ ಉಪಸ್ಥಿತರಿದ್ದರು–ಪ್ರಜಾವಾಣಿ ಚಿತ್ರ

ಗೊರುಚ ಅವರ ವಚನ ಹಾಗೂ ಜನಪದ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ದೊಡ್ಡದು. ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರು ತಮ್ಮ ಕಾಯಕ ಕ್ರಾಂತಿ ಮೂಲಕವೇ ಅಜರಾಮರರಾಗಿದ್ದಾರೆ' ಎಂದು ಸೋಮಶೇಖರ್ ಹೇಳಿದರು.

ಪ್ರಶಸ್ತಿ ಸ್ವೀಕರಿಸಿದ ಗೊರುಚ ಮಾತನಾಡಿ, 'ಸಮಾಜಕ್ಕೆ ಅಗತ್ಯವಾಗಿ ಆಗಬೇಕಾದ ಕೆಲಸಗಳನ್ನು ಹಲವರು ಮಾಡಿದ್ದಾರೆ. ಶರಣರ ಚಿಂತನೆಗಳ ಪ್ರಭಾವದಿಂದಲೇ ನಾನೂ ಇದರಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆಯಾಯಿತು. ಶರಣರ ಆದರ್ಶಗಳೇ ನಮಗೆ ಈಗಲೂ ದಾರಿದೀವಿಗೆ' ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಸಾಹಿತಿ ಹಂಪನಾ ಮಾತನಾಡಿ, 'ಕನ್ನಡವನ್ನು ಕಟ್ಟಿ ಬೆಳೆಸಿದ ಮಹಾನ್ ಪರಂಪರೆಯೇ ನಮ್ಮಲ್ಲಿದೆ. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ನಾನು, ಗೊರುಚ ಕೆಲಸ ಮಾಡಿದೆವು. ಪರಿಷತ್ತಿನ ಮೂಲಕ ಕನ್ನಡದ ಕೆಲಸ ಆಗಲು ಸಿ.ಸೋಮಶೇಖರ್ ಮುಂದಿನ ಅಧ್ಯಕ್ಷರಾಗಬೇಕು ಎಂದು ಆಶಿಸಿದರು.

₹165ರ ಗಡಿ ದಾಟಿದ ಬೀನ್ಸ್!

ತಾಪಮಾನ ಏರಿಕೆ, ಮಳೆ ಕೊರತೆಯಿಂದ ಗಗನಕ್ಕೇರಿದ ತರಕಾರಿ ದರ

• ಖಲೀಲಅಹ್ಮದ ಶೇಖ

ಬೆಂಗಳೂರು: ಮಳೆ ಕೊರತೆಯಿಂದಾಗಿ ಸೊಪ್ಪು, ತರಕಾರಿ ಬೆಳೆಯುವ ಪ್ರಮಾಣ ಕಡಿಮೆಯಾಗಿದೆ. ಅಲ್ಲದೆ ಸರಿಯಾದ ಇಳುವರಿ ಬಾರದ ಕಾರಣ ಮಾರುಕಟ್ಟೆಗೆ ಪೂರೈಕೆಯಾಗುವ ಪ್ರಮಾಣ ಕಡಿಮೆಯಾಗಿದೆ. ಕೆಲ ತರಕಾರಿ, ಸೊಪ್ಪಿನ ದರ ಹೆಚ್ಚಾಗಿದ್ದು, ಅದರಲ್ಲೂ ಬೀನ್ಸ್ ದರ ₹165ರ ಗಡಿ ದಾಟಿದೆ. ಕೊತ್ತಂಬರಿ ಒಂದು ಕಂತೆಗೆ ₹40ರಂತೆ ಮಾರಾಟ ಆಗುತ್ತಿದೆ.

ರಾಜ್ಯದ ಕೆಲವು ಭಾಗಗಳಲ್ಲಿ ಮಳೆಯಾಗಿದ್ದರೂ, ಬಿಸಿಲಿನ ತಾಪ ಕಡಿಮೆಯಾಗಿಲ್ಲ. ನೀರಿನ ಕೊರತೆ ಮುಂದುವರಿದಿದೆ. ಮಾರುಕಟ್ಟೆಯಲ್ಲಿನ ಬೇಡಿಕೆಗೆ ತಕ್ಕಂತೆ ತರಕಾರಿ ಪೂರೈಕೆಯಾಗುತ್ತಿಲ್ಲ. ಜೊತೆಗೆ, ಬೇಡಿಕೆಯೂ ಹೆಚ್ಚಾದ ಕಾರಣ ಸಹಜವಾಗಿಯೇ ಕೆಲ ತರಕಾರಿಗಳ ಬೆಲೆ ಏರಿಕೆಯಾಗಿದೆ.

‘ಚಿಕ್ಕಬಳ್ಳಾಪುರ, ಕೋಲಾರ, ಕುಣಿಗಲ್, ತುಮಕೂರು ಮತ್ತು ತಮಿಳುನಾಡಿನಿಂದ ಮಾರುಕಟ್ಟೆಗೆ ಬರುತ್ತಿದ್ದ ಬೀನ್ಸ್ ಪ್ರಮಾಣ ಕಡಿಮೆಯಾಗಿದೆ. ಇದರಿಂದ ಬೆಲೆಯೂ ಹೆಚ್ಚಾಗಿದೆ. ಗ್ರಾಹಕರಿಗೆ ಮತ್ತು ಮದುವೆ ಮತ್ತಿತರ ಸಮಾರಂಭ ಆಯೋಜಿಸುವವರಿಗೆ ಸ್ವಲ್ಪ ತೊಂದರೆಯಾಗಿದೆ. ಮತ್ತೊಂದೆಡೆ ಸಮರ್ಪಕ ಇಳುವರಿ ಬಾರದ ಕಾರಣ ರೈತರಿಗೂ ಹೆಚ್ಚಿನ ಲಾಭವಾಗುತ್ತಿಲ್ಲ’ ಎನ್ನುತ್ತಾರೆ ನಗರದ ತರಕಾರಿ ವ್ಯಾಪಾರಿಗಳು.

ಕಳೆದ ವಾರ ಕೆ.ಜಿಗೆ ₹60ರಂತೆ ಮಾರಾಟವಾಗುತ್ತಿದ್ದ ಬೀನ್ಸ್ ಈಗ ₹165ರ ಗಡಿ ದಾಟಿದ್ದು, ಗ್ರಾಹಕರ ಜೇಬಿಗೆ ಹೊರೆಯಾಗಿದೆ. ಪ್ರತಿ ಕೆ.ಜಿ ಕ್ಯಾರೆಟ್ ಹಾಗೂ ಹೀರೇಕಾಯಿ ₹70, ಕ್ಯಾಪ್ಸಿಕಮ್ ₹60, ಮೆಣಸಿನಕಾಯಿ ₹85, ಹೂಕೋಸು ₹50, ಬದನೆಕಾಯಿ ₹40ರಂತೆ ಮಾರಾಟವಾಗುತ್ತಿದೆ.

ಕಳೆದ ವಾರದಂತೆ ಅಗತ್ಯ ಪ್ರಮಾಣದ ತರಕಾರಿಗಳು ಮಾರುಕಟ್ಟೆಗೆ ಪೂರೈಕೆಯಾಗುತ್ತಿಲ್ಲ. ಸರಿಯಾಗಿ ಮಳೆಯಾಗುವವರೆಗೂ ತರಕಾರಿ ದರ ಇಳಿಯುವ ಸಾಧ್ಯತೆ ಕಡಿಮೆ’ ಎನ್ನುತ್ತಾರೆ ಗಾಯತ್ರಿನಗರದ ತರಕಾರಿ ವ್ಯಾಪಾರಿಗಳಾದ ಸಾದಿಕ್, ಸಂತೋಷ್.

‘ಮಳೆ ಕೊರತೆಯಿಂದಾಗಿ ತರಕಾರಿ ಬೆಳೆಯುವ ರೈತರ ಸಂಖ್ಯೆ ಕಡಿಮೆಯಾಗಿದೆ. ಆದ್ದರಿಂದ, ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ತರಕಾರಿ ಪೂರೈಕೆ ಆಗುತ್ತಿಲ್ಲ. ತರಕಾರಿ ಮತ್ತು ಸೊಪ್ಪಿನ ಬೆಲೆ ಏರಿಕೆಗೆ ಇದೂ ಒಂದು ಕಾರಣ. ಗ್ರಾಹಕರು ತರಕಾರಿ ದರ ಕೇಳಿ ಖರೀದಿಸಲು ಹಿಂದೇಟು ಹಾಕುವ ಪರಿಸ್ಥಿತಿ ಬಂದಿದೆ’ ಎಂದರು.

ಸೊಪ್ಪಿನ ದರ ಹೆಚ್ಚಳ: ಕಳೆದ ವಾರ ಒಂದು ಕಂತೆ ಕೊತ್ತಂಬರಿ ₹20ರಂತೆ ಮಾರಾಟವಾಗುತ್ತಿತ್ತು. ಈಗ ₹40ಕ್ಕೆ ಏರಿದೆ. ಮೆಂತೆ ₹30, ಸಬ್ಬಸಿಗೆ ₹30ರಂತೆ ಮಾರಾಟವಾಗುತ್ತಿದೆ.



ಎಲ್‌ಪಿಜಿ ಸಿಲಿಂಡರ್ ದರ ಹಾಗೂ ದಿನಬಳಕೆ ವಸ್ತುಗಳ ಏರಿಕೆಯಿಂದ ಕಂಗೆಟ್ಟಿದ್ದ ಸಾರ್ವಜನಿಕರಿಗೆ ಈಗ ತರಕಾರಿ ದರ ಹೆಚ್ಚಳವು ಗಾಯದ ಮೇಲೆ ಬರೆ ಎಳೆದಂತಾಗಿದೆ
ಗೀತಾ, ಗೃಹಿಣಿ, ಗಾಯತ್ರಿನಗರ

ತರಕಾರಿ	ಕಳೆದ ವಾರದ ದರ	ಈ ವಾರದ ದರ
(ನಗರದ ಚಿಲ್ಲರೆ ಮಾರುಕಟ್ಟೆಗಳಲ್ಲಿ ಪ್ರತಿ ಕೆ.ಜಿಗೆ ₹ಗಳಲ್ಲಿ)		
ಬೀನ್ಸ್	60	165
ಕ್ಯಾಪ್ಸಿಕಮ್	40	60
ಕ್ಯಾರೆಟ್	50	70
ಹೀರೆಕಾಯಿ	60	70
ಬೆಂಡೇಕಾಯಿ	40	50
ಚವಳಿಕಾಯಿ	45	60
ಮೆಣಸಿನಕಾಯಿ	80	85
ಆಲೂಗಡ್ಡೆ	20	30
ಟೊಮೆಟೊ	20	40
ಈರುಳ್ಳಿ	20	30
ಹೂಕೋಸು	40	50
ಬದನೆಕಾಯಿ	40	40
ಕ್ಯಾಬೇಜ್	40	40
ಸೌತೆಕಾಯಿ	40	65
ಮೂಲಂಗಿ	40	55
ಹಾಗಲಕಾಯಿ	60	75
ಸೋರೆಕಾಯಿ	40	50
ಹೀರೇಕಾಯಿ	40	60
ಸೊಪ್ಪಿನ ದರಗಳು (ಪ್ರತಿ ಕಂತೆಗೆ ₹ಗಳಲ್ಲಿ)		
ಕೊತ್ತಂಬರಿ	20	40
ಮೆಂತ್ಯ	20	30
ಸಬ್ಬಸಿಗೆ	20	30
ಪಾಲಕ್	10	20

‘ಎಳನೀರು, ಕಲ್ಲಂಗಡಿಗೆ ಹೆಚ್ಚಿದ ಬೇಡಿಕೆ’

ನಗರದಲ್ಲಿ ತಾಪಮಾನ ಹೆಚ್ಚಾಗಿರುವ ಕಾರಣ ಸಾರ್ವಜನಿಕರು ತಂಪು ಪಾನೀಯಗಳ ಮೊರೆಹೋಗಿದ್ದಾರೆ. ಇದರಿಂದ ಕಲ್ಲಂಗಡಿ ಹಣ್ಣಿನ ಬೆಲೆ ಹೆಚ್ಚಾಗಿದೆ. ಕಳೆದವಾರ ಕೆ.ಜಿಗೆ ₹30ಕ್ಕೆ ಮಾರಾಟವಾಗುತ್ತಿದ್ದ ಕಲ್ಲಂಗಡಿ ಪ್ರಸ್ತುತ ₹40ರಂತೆ ಮಾರಾಟವಾಗುತ್ತಿದೆ. ದಾಹ ತಣಿಸುವ ಹಣ್ಣಿನ ರಸಗಳ ಪೈಕಿ ಕಲ್ಲಂಗಡಿ ಗ್ರಾಹಕರ ಮೊದಲ ಆಯ್ಕೆಯಾಗಿದೆ.

ನೈಸರ್ಗಿಕ ಹಾಗೂ ಆರೋಗ್ಯಕರ ಪೇಯವಾಗಿರುವ ಎಳನೀರಿಗೆ ಭಾರಿ ಬೇಡಿಕೆ ಬಂದಿದೆ. ಒಂದು ಎಳನೀರು ₹70ರಂತೆ ಮಾರಾಟವಾಗುತ್ತಿದೆ. ಮಂಡ್ಯ, ತುಮಕೂರು ಸೇರಿದಂತೆ ವಿವಿಧ ಪ್ರದೇಶಗಳಿಂದ ನಗರಕ್ಕೆ ಎಳನೀರು ಪೂರೈಕೆ ಆಗುತ್ತಿದೆ. ಬಿಸಿಲು ಹೆಚ್ಚಾಗಿರುವ ಕಾರಣ ಬೆಲೆಯೂ ಏರಿಕೆಯಾಗಿದೆ ಎಂದು ಗಾಯತ್ರಿನಗರದ ಎಳನೀರು ವ್ಯಾಪಾರಿಯೊಬ್ಬರು ತಿಳಿಸಿದರು.

ಸಂತ್ರಸ್ತರಿಗೆ ತಲಾ ₹1 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು ಮೃತಪಟ್ಟಿದ್ದ ಪುಲಕೇಶಿ ನಗರ ವಿಧಾನಸಭಾ ಕ್ಷೇತ್ರದ ನಿವಾಸಿಯ ಕುಟುಂಬದವರಿಗೆ ಹಾಗೂ ವಿದ್ಯುತ್ ತಂತಿ ತಗುಲಿ ಸಾವನ್ನಪ್ಪಿದ್ದ ವ್ಯಕ್ತಿಯ ಸಂಬಂಧಿಕರಿಗೆ ಶಾಸಕ ಎ.ಸಿ. ಶ್ರೀನಿವಾಸ್ ಅವರು ವೈಯಕ್ತಿಕವಾಗಿ ತಲಾ ಒಂದು ಲಕ್ಷ ಪರಿಹಾರ ನೀಡಿದರು.

ಮೃತರ ಮನೆಗೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳಿ, ಅವರ ಮಕ್ಕಳ ಶಿಕ್ಷಣಕ್ಕೆ ಸಹಾಯ ಮಾಡುವುದರ ಜೊತೆಗೆ ಸರ್ಕಾರದಿಂದ ಸಿಗುವ ಎಲ್ಲ ಸೌಲಭ್ಯಗಳನ್ನು ದೊರಕಿಸಿ ಕೊಡುವುದಾಗಿ ಭರವಸೆ ನೀಡಿದರು. ‘ಸರ್ಕಾರ ನಿಮ್ಮ ಜೊತೆ ಇರಲಿದೆ. ₹5 ಲಕ್ಷ ಪರಿಹಾರ ನೀಡಿ, ಗಾಯಾಳುಗಳ ಚಿಕಿತ್ಸೆಗೂ ಕ್ರಮ ಕೈಗೊಂಡಿದೆ’ ಎಂದರು.



ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು ಮೃತಪಟ್ಟ ವ್ಯಕ್ತಿಯ ಮನೆಗೆ ಶಾಸಕ ಎ.ಸಿ. ಶ್ರೀನಿವಾಸ್ ಭೇಟಿ ನೀಡಿ, ಕುಟುಂಬದವರಿಗೆ ₹1 ಲಕ್ಷ ಪರಿಹಾರ ನೀಡಿದರು

‘ಸ್ವತಂತ್ರ ಪತ್ರಿಕೋದ್ಯಮಕ್ಕೆ ಶಿಕ್ಷೆ’

ನವದೆಹಲಿ (ಪಿಟಿಐ): ಪತ್ರಿಕಾ ಸ್ವಾತಂತ್ರ್ಯದ ವಿಚಾರದಲ್ಲಿ ಬಿಜೆಪಿ–ಆರ್‌ಎಸ್‌ಎಸ್ ವಿರುದ್ಧ ಟೀಕಾ ಪ್ರಹಾರ ನಡೆಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ಸ್ವತಂತ್ರ ಪತ್ರಿಕೋದ್ಯಮ ನಡೆಸುತ್ತಿರುವರನ್ನು ದಂಡಿಸಲಾಗುತ್ತಿದ್ದು, ವಿಧೇಯತೆ ತೋರುವವರಿಗೆ ಬಹುಮಾನ ನೀಡಲಾಗುತ್ತಿದೆ’ ಎಂದು ತಿಳಿಸಿದ್ದಾರೆ.



ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನದ ಅಂಗವಾಗಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ ಅವರು, ‘ವಿಶ್ವ ಪತ್ರಿಕಾ ಸೂಚ್ಯಂಕದಲ್ಲಿ 2014ರಿಂದಲೂ ಭಾರತದ ಸ್ಥಾನ ಕುಸಿಯುತ್ತಿದೆ. ಸಂಘ ಪರಿವಾರ ಸುದ್ದಿ ಮನೆಗಳನ್ನು ಮೌನವಾಗಿಸಲು ಕಾನೂನು ಚೌಕಟ್ಟನ್ನು ಬಳಸಿಕೊಳ್ಳುತ್ತಿದೆ’ ಎಂದು ದೂರಿದ್ದಾರೆ.

ಡಬಲ್ ಡೆಕರ್: ಮುಗಿಯದ ಸಮಸ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಗಿಗುಡ್ಡ–ಸೆಂಟ್ರಲ್ ಸಿಲ್ಕ್ ಬೋರ್ಡ್‌ ನಡುವಿನ ಡಬಲ್ ಡೆಕರ್ ರಸ್ತೆ ಸಂಚಾರಕ್ಕೆ ಮುಕ್ತವಾಗಿದ್ದರೂ ಕೆಲವು ಸಮಸ್ಯೆಗಳಿಂದ ಮುಕ್ತವಾಗಿಲ್ಲ.

ಪ್ರಾಯೋಗಿಕವಾಗಿ ಸಂಚಾರ ಆರಂಭವಾಗಿದ್ದ ಡಬಲ್ ಡೆಕರ್ ರಸ್ತೆಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇತ್ತೀಚೆಗೆ ಹಸಿರು ನಿಶಾನೆ ತೋರುವ ಮೂಲಕ ಸಂಚಾರ ಅಧಿಕೃತಗೊಳಿಸಿದ್ದರು. ಸಂಚಾರ ಸಮಸ್ಯೆಯನ್ನು ಸರಿಪಡಿಸುವ ಉದ್ದೇಶ ಹೊಂದಿರುವ ಈ ಯೋಜನೆ ಪ್ರಯಾಣಿಕರಿಗೆ ಅನುಕೂಲವನ್ನೂ, ನಿರಾಸೆಯನ್ನೂ ಏಕಕಾಲಕ್ಕೆ ಮೂಡಿಸಿದೆ.

ಕುವೆಂಪು ನಗರ, ಉಡುಪಿ ಗಾರ್ಡನ್, ಜಯದೇವ ಮತ್ತು ಈಸ್ಟ್ ಎಂಡ್ ಜಂಕ್ಷನ್‌ಗಳಲ್ಲಿ ಉಂಟಾಗುತ್ತಿದ್ದ ವಾಹನದಟ್ಟಣೆ ಸಮಸ್ಯೆಯನ್ನು ಡಬಲ್ ಡೆಕರ್ ರಸ್ತೆ ಪರಿಹರಿಸಿದೆ. ಆದರೆ, ಈ ಮೇಲ್ಸೇತುವೆ ಯನ್ನು ಪ್ರವೇಶಿಸುವ ಮತ್ತು ನಿರ್ಗಮಿಸುವ ಸ್ಥಳದಲ್ಲಿ ಒಮ್ಮೆಲೆ ದಟ್ಟಣೆ ಉಂಟಾಗುತ್ತಿದೆ.

ಸಿಲ್ಕ್ ಬೋರ್ಡ್‌ನಿಂದ ಬರುವ ವಾಹನಗಳು ರಾಗಿಗುಡ್ಡದ ಕಡೆಗೆ ಬರುವಾಗ ರಸ್ತೆ ಮೇಲ್ಸೇತುವೆ ಕೊನೆ ಗೊಂಡು ಹಳೇ ರಸ್ತೆಗೆ ಸಂಪರ್ಕಿಸುವಲ್ಲಿ ರಸ್ತೆ ಕಿರಿದಾಗಿರುವುದು ಸಮಸ್ಯೆ ಬಿಗಡಾಯಿಸುವಂತೆ ಮಾಡಿದೆ. ವಾಹನಗಳು ಟ್ರಾಫಿಕ್ ಸಿಗ್ನಲ್‌ಗಳಿಗೇ ಬಂದು ಇಳಿಯುತ್ತಿರುವುದರಿಂದ ಕೆಂಪು ದೀಪ ಉರಿದಾಗ ಮೇಲ್ಸೇತುವೆಯಲ್ಲೇ ವಾಹನಗಳು ನಿಲ್ಲುವಂತಾಗಿದೆ. ಡಬಲ್ ಡೆಕರ್ ಮೇಲ್ಸೇತುವೆಯು ಕೆಂಪು ದೀಪದಲ್ಲಿ ಕೊನೆಗೊಂಡರೆ ವಿಶ್ವದರ್ಜೆಗೆ ಅರ್ಥವಿಲ್ಲ. ವಾಹನ ದಟ್ಟಣೆಯನ್ನು ಎಂಜಿನಿಯರ್‌ಗಳು ದೂರಕ್ಕೆ ವಿಸ್ತರಿಸಿದಂತೆ ತೋರುತ್ತಿದೆ ಎಂದು ಪ್ರಯಾಣಿಕ ರವಿಕುಮಾರ್ ಎಸ್. ದೂರಿದ್ದಾರೆ.

ಈಗ ಮೊದಲಿಗಿಂತ ಚೆನ್ನಾಗಿದೆ. ಆದರೂ ಮೇಲ್ಸೇತುವೆಯಲ್ಲಿ 3 ಕಿ.ಮೀ. ಸಂಚರಿಸಿದ ಬಳಿಕ ಮತ್ತೆ ಸಮಸ್ಯೆ ಉಂಟಾಗುತ್ತಿದೆ ಎಂದು ಪ್ರಯಾಣಿಕ ಸುನಿಲ್ ಬೇಸರ ವ್ಯಕ್ತಪಡಿಸಿದ್ದಾರೆ.

ಶೇ 22.8ರಷ್ಟು ವಯಸ್ಕರಲ್ಲಿ ತಂಬಾಕು ಸೇವನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಒಟ್ಟು ವಯಸ್ಕರಲ್ಲಿ ಶೇ 22.8ರಷ್ಟು ಮಂದಿ ಯಾವುದಾದರೊಂದು ರೂಪದಲ್ಲಿ ತಂಬಾಕು ಉತ್ಪನ್ನಗಳನ್ನು ಸೇವಿಸುತ್ತಿದ್ದಾರೆ. ಈ ರೀತಿ ತಂಬಾಕು ಉತ್ಪನ್ನ ಸೇವಿಸುವವರಿಗೆ ಕ್ಷಯ ರೋಗ ಬರುವ ಸಾಧ್ಯತೆ ಎರಡು ಪಟ್ಟು ಹೆಚ್ಚಿರಲಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಆರೋಗ್ಯ ಇಲಾಖೆಯ ರಾಷ್ಟ್ರೀಯ ತಂಬಾಕು ನಿಯಂತ್ರಣ ಕೋಶವು ನಗರದಲ್ಲಿ ಹಮ್ಮಿಕೊಂಡಿದ್ದ ವಿಭಾಗೀಯ ಮಟ್ಟದ ಕಾರ್ಯಾಗಾರದಲ್ಲಿ ಕ್ಷಯ ಮತ್ತು ತಂಬಾಕು ಉತ್ಪನ್ನಗಳ ಸೇವನೆಯ ನಿಯಂತ್ರಣದ ಬಗ್ಗೆ ವಿಷಯ ತಜ್ಞರು ಚರ್ಚಿಸಿದರು. ಬೆಂಗಳೂರು ವಿಭಾಗದಡಿ ಕಾರ್ಯನಿರ್ವಹಿಸುತ್ತಿರುವ 80 ಸಾರ್ವಜನಿಕ ಆರೋಗ್ಯಾಧಿಕಾರಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ರಾಷ್ಟ್ರೀಯ ಕ್ಷಯ ನಿರ್ಮೂಲನೆ ಕಾರ್ಯಕ್ರಮ ಹಾಗೂ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮವನ್ನು ಏಕೀಕರಿಸುವ ಬಗ್ಗೆ ಈ ಕಾರ್ಯಾಗಾರದಲ್ಲಿ ಚರ್ಚಿಸಲಾಯಿತು.

‘ರಾಜ್ಯದ ವಯಸ್ಕರಲ್ಲಿ 94 ಲಕ್ಷದಷ್ಟು ಜನರು ಯಾವುದಾದರೊಂದು ರೂಪದಲ್ಲಿ ತಂಬಾಕು ಉತ್ಪನ್ನವನ್ನು ಸೇವಿಸುತ್ತಿದ್ದಾರೆ. ಇದು ಕ್ಷಯ ಪ್ರಕರಣಗಳ ಹೆಚ್ಚಳಕ್ಕೆ ಕಾರಣವಾಗುತ್ತಿದೆ’ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದರು.

‘ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ 2025–26ನೇ ಸಾಲಿನಲ್ಲಿ 8.5 ಲಕ್ಷ ಜನರಿಗೆ ಆರೋಗ್ಯ ತಪಾಸಣೆ ಮಾಡಲಾಗಿದ್ದು, 3.8 ಲಕ್ಷ ಜನರಿಗೆ ತಂಬಾಕು ಉತ್ಪನ್ನಗಳ ಸೇವನೆಯನ್ನು ತ್ಯಜಿಸುವಂತೆ ಸಲಹೆ ನೀಡಲಾಗಿದೆ. ತಂಬಾಕು ಉತ್ಪನ್ನಗಳ ಸೇವನೆ ಆರೋಗ್ಯದ ಮೇಲೆ ಬೀರುವ ಪರಿಣಾಮದ ಬಗ್ಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಂಕ್ಷಿಪ್ತ ಸಲಹಾ ಸೇವೆ ಸ್ಥಾಪಿಸಲಾಗಿದೆ’ ಎಂದು ಇಲಾಖೆಯ ಹೆಚ್ಚುವರಿ ನಿರ್ದೇಶಕಿ ಡಾ.ರಜನಿ ಹೇಳಿದರು.

ಪ್ರತಿಭಾ ಪ್ರಹ್ಲಾದ್, ಬಿ.ಜಯಶ್ರೀ ಅವರಿಗೆ ರಾಷ್ಟ್ರೀಯ ಪ್ರಶಸ್ತಿ ಪ್ರದಾನ

‘ಕಲಾವಿದರು ಸಾಂಸ್ಕೃತಿಕ ರಾಯಭಾರಿಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನರನ್ನು ಖುಷಿಯಾಗಿ ಇಡಬಲ್ಲ ಕಲಾವಿದರು ದೇಶದ ಸಾಂಸ್ಕೃತಿಕ ರಾಯಭಾರಿಗಳು’ ಎಂದು ಮಾಜಿ ಸಚಿವೆ ರಾಣಿ ಸತೀಶ್ ಹೇಳಿದರು.

ಸೃಷ್ಟಿ ಸಂಸ್ಥೆ ಹಾಗೂ ರೋಟರಿ ಡಿಸ್ಟ್ರಿಕ್ಟ್ 3191 ಭಾನುವಾರ ರವೀಂದ್ರ ಕಲಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ನೃತ್ಯ ದಿನಾಚರಣೆಯಲ್ಲಿ ಸೃಷ್ಟಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

‘ಸಂಸ್ಕೃತಿ ಎನ್ನುವುದು ಯಾವುದೇ ದೇಶದ ಹಿರಿಮೆ. ಕಲೆ ಎಲ್ಲಿ ಎತ್ತರದ ಸ್ಥಾನದಲ್ಲಿ ಇರುತ್ತದೆಯೋ ಅಲ್ಲಿ ಕಲಾವಿದರು ಗೌರವ ಪಡೆಯುತ್ತಾರೆ. ಅಂತಹ ದೇಶವು ಉನ್ನತವಾಗಿ ಬೆಳೆಯುತ್ತದೆ. ಕಲಾವಿದರನ್ನು ಪ್ರೋತ್ಸಾಹಿಸೋಣ’ ಎಂದು ಹೇಳಿದರು.

ಸಾಹಿತಿ ಚಂದ್ರಶೇಖರ ಕಂಬಾರ ಮಾತನಾಡಿ, ‘ಕಲಾವಿದರಿಗೆ ಹೆಚ್ಚು ಸನ್ಮಾನಗಳು ಆಗಬೇಕು. ಅವರನ್ನು ಗೌರವಿಸುವುದು ಕಲೆಯನ್ನು ಗೌರವಿಸಿದಂತಾಗಲಿದೆ. ಕರ್ನಾಟಕದಲ್ಲೂ ಒಳ್ಳೆಯ ಕಲಾವಿದರನ್ನು ಗೌರವಿಸುವ ಪರಂಪರೆ ಗಟ್ಟಿಯಾಗಿದೆ’ ಎಂದು ನುಡಿದರು.

ರಂಗ ಸಂಘಟಕ ಶ್ರೀನಿವಾಸ ಕಪ್ಪಣ್ಣ ಮಾತನಾಡಿ, ‘ಪ್ರತಿಭಾ ಪ್ರಹ್ಲಾದ್ ಹಾಗೂ ಬಿ.ಜಯಶ್ರೀ ಅವರು ತಮ್ಮ ಕಲೆಯ ಮೂಲಕ ಕರ್ನಾಟಕದ ಹಿರಿಮೆಯನ್ನು ವಿಶ್ವ ಮಟ್ಟದಲ್ಲಿ ಹೆಚ್ಚಿಸಿದ್ದಾರೆ. ನಾಲ್ಕು ದಶಕಕ್ಕೂ ಹೆಚ್ಚು ಕಾಲ ಕಲೆಯೊಂದಿಗೆ ನಂಟು ಇಟ್ಟುಕೊಂಡು ಈಗಲೂ ಸಕ್ರಿಯರಾಗಿದ್ದಾರೆ’ ಎಂದು ಹೇಳಿದರು.

ಪ್ರಶಸ್ತಿ ಸ್ವೀಕರಿಸಿದ ನೃತ್ಯ ಕಲಾವಿದೆ ಪ್ರತಿಭಾ ಪ್ರಹ್ಲಾದ್, ‘ಕಲಾವಿದರು ಜನಿಸಿರುವುದೇ ಜನರನ್ನು ಖುಷಿಯಾಗಿ ಇಡಲು. ಜನ ಕಲೆಯನ್ನು ಖುಷಿಪಟ್ಟಾಗ ಕಲಾವಿದರ ಆ ಕ್ಷಣವನ್ನು ವರ್ಣಿಸಲು ಆಗದು. ಅಂತಹ ಅಪಾರ ಪ್ರೀತಿಯನ್ನು ಜನ ನಮಗೆ ಕೊಟ್ಟಿದ್ದಾರೆ. ಜೀವ ಇರುವ ಕೊನೆ ಕ್ಷಣದವರೆಗೂ ಕಲೆಯನ್ನು ಪಸರಿಸುವ ಕೆಲಸ ಮಾಡುತ್ತೇವೆ’ ಎಂದು ತಿಳಿಸಿದರು.

ರಂಗ ಕಲಾವಿದೆ ಬಿ.ಜಯಶ್ರೀ ಹಾಗೂ ನೃತ್ಯ ಪಟು ಪ್ರತಿಭಾ ಪ್ರಹ್ಲಾದ್ ಅವರು ಸೃಷ್ಟಿ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿದರು. ಪ್ರತಿಭಾ ಪ್ರಹ್ಲಾದ್ ಅವರು ನೃತ್ಯ ಕಾರ್ಯಕ್ರಮ ನಡೆಸಿಕೊಟ್ಟರೆ, ಬಿ.ಜಯಶ್ರೀ ಹಾಗೂ ತಂಡದವರು 'ಕರಿಮಾಯಿ' ನಾಟಕ ಪ್ರದರ್ಶಿಸಿದರು.

ಸೃಷ್ಟಿ ಸಂಸ್ಥೆಯ ಎ.ವಿ. ಸತ್ಯನಾರಾಯಣ, ರೋಟರಿ ಅಧ್ಯಕ್ಷ ರವೀಂದ್ರ ಉಪಸ್ಥಿತರಿದ್ದರು. ವಿವಿಧ ತಂಡಗಳಿಂದ ನೃತ್ಯ ಕಾರ್ಯಕ್ರಮಗಳು ನಡೆದವು.





‘ಸೃಷ್ಟಿ ಸಂಸ್ಥೆ’ ಮತ್ತು ‘ರೋಟರಿ ಡಿಸ್ಟ್ರಿಕ್ಟ್ 3191’ ಜಂಟಿಯಾಗಿ ಆಯೋಜಿಸಿದ್ದ ಅಂತರರಾಷ್ಟ್ರೀಯ ನೃತ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರತಿಭಾ ಪ್ರಹ್ಲಾದ್ ಮತ್ತು ಬಿ. ಜಯಶ್ರೀ ಅವರಿಗೆ ‘ಸೃಷ್ಟಿ ರಾಷ್ಟ್ರೀಯ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. (ಎಡದಿಂದ) ಮಾಜಿ ಸಚಿವೆ ರಾಣಿ ಸತೀಶ್, ಸಾಹಿತಿ ಚಂದ್ರಶೇಖರ ಕಂಬಾರ, ಶ್ರೀನಿವಾಸ್ ಜಿ. ಕಪ್ಪಣ್ಣ, ಸಂಸ್ಥೆಯ ಸಹನಿರ್ದೇಶಕಿ ಶಾರದಾ ಮತ್ತು ಸಂಸ್ಥೆಯ ನಿರ್ದೇಶಕ ಎ.ವಿ ಸತ್ಯನಾರಾಯಣ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಹಳೇ ಫಲಕಕ್ಕೆ ಮರಳಿದ ಬಿಎಂಟಿಸಿ

ಮೆಜೆಸ್ಟಿಕ್ ನಿಲ್ದಾಣದಲ್ಲಿ ಅಳವಡಿಸಿದ್ದ ಹೊಸ ಫಲಕಗಳಲ್ಲಿ ಅಕ್ಷರ ದೋಷ

• ಬಾಲಕೃಷ್ಣಪಿ.ಎಚ್.

ವರದಿ ಪರಿಣಾಮ

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿರುವ ಬಿಎಂಟಿಸಿಯ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಹೊಸದಾಗಿ ಅಳವಡಿಸಲಾಗಿದ್ದ ಮಾರ್ಗ ಸೂಚಿ ಫಲಕಗಳಲ್ಲಿ ಮಾಹಿತಿಯ ಗೊಂದಲ, ಅಕ್ಷರಗಳಲ್ಲಿ ತಪ್ಪುಗಳು ಇದ್ದ ಕಾರಣ ಮತ್ತೆ ಹಳೇ ಫಲಕಗಳನ್ನು ಅಳವಡಿಸಲಾಗಿದೆ. ಇದರಿಂದಾಗಿ ಪ್ರಯಾಣಿಕರು ಕಿರಿಕಿರಿಯಿಂದ ಪಾರಾಗುವಂತಾಗಿದೆ.


ಬಸ್ ನಿಲ್ದಾಣದಲ್ಲಿದ್ದ ಹಳೇ ಫಲಕಗಳಲ್ಲಿ ಪ್ಲಾಟ್‌ಫಾರ್ಮ್ ಸಂಖ್ಯೆ, ಬಸ್ ಮಾರ್ಗಗಳ ಸಂಖ್ಯೆ ದೊಡ್ಡದಾಗಿ ಮತ್ತು ದಪ್ಪ ಅಕ್ಷರಗಳಲ್ಲಿ ಇತ್ತು. ಪ್ರಯಾಣಿಕರಿಗೆ ಸರಿಯಾದ ಮಾರ್ಗ-ಸೂಚಿಯಾಗಿತ್ತು. ಸುಸ್ಥಿರ ನಗರ ಅಭಿವೃದ್ಧಿ, ಇಂಧನ ಮತ್ತು ಹವಾಮಾನ ಕ್ರಿಯೆಯ ಮೇಲೆ ಕೇಂದ್ರೀಕರಿಸುವ ಸ್ವತಂತ್ರ ಸಂಶೋಧನಾ ಸಂಸ್ಥೆ ಡಬ್ಲ್ಯುಆರ್‌ಐ ಮತ್ತು ಸಾರ್ವಜನಿಕ ಸಾರಿಗೆ ಸುಧಾರಣೆಗಾಗಿ ಕೆಲಸ ಮಾಡುವ ಬೆಂಗವಾಕ್ ಸಂಸ್ಥೆಗಳು ಪ್ರಾಯೋಗಿಕ ಅಧ್ಯಯನ ಮಾಡಿ, ಬಸ್ ಮಾರ್ಗಗಳ ನಕ್ಷೆಯನ್ನು ಒಂದು ಬದಿಯಲ್ಲಿ ನೀಡುವ, ಇನ್ನೊಂದು ಬದಿಯಲ್ಲಿ ಮಾರ್ಗಗಳ ಸಂಖ್ಯೆ ಮತ್ತು ಹೆಸರನ್ನು ನೀಡುವ ಫಲಕವನ್ನು ತಯಾರಿಸಿ ಅಳವಡಿಸಿದ್ದವು.

ಬಸ್‌ಗಳು ನಿಲ್ದಾಣಕ್ಕೆ ಪ್ರವೇಶಿಸುವ ಕಡೆಯಿಂದ ಫಲಕಗಳನ್ನು ವೀಕ್ಷಿಸಿದರೆ ಬಸ್ ವಿವರಗಳು ಇದ್ದವು. ಆದರೆ, ಮೊದಲಿನಿಂದ ದೂರದಿಂದಲೇ ನೋಡಿದರೆ ಗೊತ್ತಾಗುವಷ್ಟು ಅಕ್ಷರಗಳು ಕಡುಬಣ್ಣದಿಂದ ಅಥವಾ ದಪ್ಪವಾಗಿ ಇರಲಿಲ್ಲ. ಅಲ್ಲದೇ ಕೆಲವು ಬಸ್ ಮಾರ್ಗಗಳ ಸಂಖ್ಯೆ ತಪ್ಪಿಹೋಗಿತ್ತು.

5ನೇ ಪ್ಲಾಟ್‌ಫಾರ್ಮ್‌ನಿಂದ ಶಾರದಾ ಕಾಲೊನಿಗೆ '89 ಬಿ' ಬಸ್ ಹೋಗುತ್ತದೆ. ಆದರೆ, ಈ ನಂಬರ್ ಫಲಕದಲ್ಲಿರಲಿಲ್ಲ. ಬಸ್‌ಗಳು ಸುಜಾತಾ ಟಾಕೀಸ್ ಕಡೆಯಿಂದ ಸಾಗುವುದನ್ನು ನಕ್ಷೆಯಲ್ಲಿ ತೋರಿಸಲಾಗಿದೆ. ಇಂಗ್ಲಿಷ್‌ನಲ್ಲಿ 'ಸುಜಾತಾ ಟಾಕೀಸ್' ಎಂದಿದ್ದರೂ ಕನ್ನಡದಲ್ಲಿ 'ಸೂಪರ್ ಟಾಕೀಸ್' ಎಂದು ತಪ್ಪಾಗಿ ನಮೂದಿಸಲಾಗಿತ್ತು. ಕಮಲಾನಗರ ಹೆಸರನ್ನು 'ಕಮಲನಗರ', 'ಕಮಲಾನಗರ' ಎಂದು ಎರಡೂ ರೀತಿಯಲ್ಲಿ ಬರೆಯಲಾಗಿತ್ತು. ಬಸ್‌ಗಳು ನಿರ್ಗಮಿಸುವ ಕಡೆಯಿಂದ ಅಂದರೆ ರೈಲು ನಿಲ್ದಾಣ ಕಡೆಯಿಂದ ಪ್ರಯಾಣಿಕರು ಬಂದರೆ ಫಲಕಗಳು ಜನಸಾಮಾನ್ಯರಿಗೆ ಅರ್ಥವಾಗುವಂತೆ ಇರಲಿಲ್ಲ. ಅಲ್ಲದೇ ಅಕ್ಷರಗಳು ಚಿಕ್ಕದಾಗಿದ್ದವು.

ಈ ಬಗ್ಗೆ 'ಪ್ರಜಾವಾಣಿ' ಬೆಳಕು ಚೆಲ್ಲಿತ್ತು. ಸಾರ್ವಜನಿಕರೂ ಆಕ್ರೋಶ ವ್ಯಕ್ತಪಡಿಸಿದ್ದರು. ಇದರಿಂದ ಎಚ್ಚೆತ್ತುಕೊಂಡ ಬಿಎಂಟಿಸಿ ಅಧಿಕಾರಿಗಳು ಹೊಸ ಫಲಕಗಳನ್ನು ತೆರವುಗೊಳಿಸಲು ಕ್ರಮ ಕೈಗೊಂಡಿದ್ದು, ಹಳೇ ಫಲಕಗಳನ್ನು ಮರುಸ್ಥಾಪನೆ ಮಾಡಿದ್ದಾರೆ.

'ಹೊಸ ಬೋರ್ಡ್‌ನಲ್ಲಿನ ನಕ್ಷೆಗಳೆಲ್ಲ ಎಂಜಿನಿಯರ್‌ಗಳಿಗಷ್ಟೇ ಅರ್ಥವಾಗುವಂತಿದ್ದವು. ಈ ಬಗ್ಗೆ ನಾವೆಲ್ಲ ಆಕ್ಷೇಪಿಸಿದ್ದೆವು. ಇದೀಗ ಬದಲಾಯಿಸುವ ಮೂಲಕ ಬಿಎಂಟಿಸಿಯವರು ಸಾಮಾನ್ಯ ಪ್ರಯಾಣಿಕರಿಗೆ ಅನುಕೂಲ ಮಾಡಿ-ಕೊಟ್ಟಿದ್ದಾರೆ' ಎಂದು ರಾಜಾಜಿನಗರದ ವಿಶ್ವಾಸ್ ತಿಳಿಸಿದರು.



ಮೆಜೆಸ್ಟಿಕ್‌ನ ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಅಳವಡಿಸಲಾಗಿದ್ದ ಹೊಸ ಫಲಕ



ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಮತ್ತೆ ಅಳವಡಿಸಲಾಗಿರುವ ಹಳೇ ಫಲಕ

ಪ್ರಾಯೋಗಿಕ ಫಲಕ

'ಸರ್ಕಾರೇತರ ಸಂಸ್ಥೆಗಳಾದ ಡಬ್ಲ್ಯುಆರ್‌ಐ ಮತ್ತು ಬೆಂಗವಾಕ್ ಸಂಸ್ಥೆಗಳು ಅಧ್ಯಯನ ಮಾಡಿ ಪ್ರಾಯೋಗಿಕವಾಗಿ ಫಲಕಗಳನ್ನು ಅಳವಡಿಸಿದ್ದವು. ಹೊಸ ಫಲಕಗಳು ಸಾರ್ವಜನಿಕರಿಗೆ ಹಿಂದಿನ ಫಲಕಗಳಷ್ಟು ಅನುಕೂಲ ಆಗದೇ ಇದ್ದಿದ್ದರಿಂದ ತೆರವುಗೊಳಿಸಲು ಸೂಚನೆ ನೀಡಲಾಗಿತ್ತು. ಅದರಂತೆ ಆ ಸಂಸ್ಥೆಗಳು ಹೊಸ ಫಲಕಗಳನ್ನು ತೆರವುಗೊಳಿಸಿ, ಹಳೇ ಫಲಕಗಳನ್ನು ಮರು ಅಳವಡಿಕೆ ಮಾಡಿವೆ' ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಲಿಡ್ಕರ್ ಉತ್ಪನ್ನಗಳ ಮೇಲೆ ಶೇ 15ರಷ್ಟು ರಿಯಾಯಿತಿ

ಬೆಂಗಳೂರು: ಕಾರ್ಮಿಕ ದಿನಾಚರಣೆ ಅಂಗವಾಗಿ ಡಾ. ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ (ಲಿಡ್ಕರ್) ಉತ್ಪನ್ನಗಳ ಮೇಲೆ ಶೇಕಡ 15ರಷ್ಟು ರಿಯಾಯಿತಿ ಘೋಷಿಸಲಾಗಿದೆ.

ರಾಜಾಜಿನಗರದಲ್ಲಿರುವ ಲಿಡ್ಕರ್ ಮಾರಾಟ ಮಳಿಗೆಯಲ್ಲಿ ಮೇ 31ರವರೆಗೆ ಚರ್ಮದ ಎಲ್ಲ ಉತ್ಪನ್ನಗಳ ಮೇಲೆ ಶೇ 15ರಷ್ಟು ರಿಯಾಯಿತಿ ಇರಲಿದೆ. ಚರ್ಮದ ಶೂಗಳು, ಚಪ್ಪಲಿಗಳು, ಮಹಿಳೆಯರ ವ್ಯಾನಿಟಿ ಬ್ಯಾಗ್ ಹಾಗೂ ಇತರೆ ಚರ್ಮದ ವಸ್ತುಗಳು ಲಭ್ಯವಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕು ಎಂದು ಲಿಡ್ಕರ್ ಮಾರಾಟ ಮಳಿಗೆಯ ವ್ಯವಸ್ಥಾಪಕ ಟಿ.ಲೋಕೇಶ್ ತಿಳಿಸಿದ್ದಾರೆ.

ಮಾಹಿತಿಗೆ: ಲಿಡ್ಕರ್ ಮಾರಾಟ ಮಳಿಗೆ, ಓಲ್ಡ್ ಪೊಲೀಸ್ ಸ್ಟೇಷನ್ ಬಸ್ ತಂಗುದಾಣದ ಹತ್ತಿರ, ವಿಶಾಲ್ ಮಾರ್ಟ್ ಎದುರು, ಮೂರನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010, ಮೊಬೈಲ್ ಸಂಖ್ಯೆ: 86604 12905

ಆರ್.ವಿ ವಿಶ್ವವಿದ್ಯಾಲಯ: ಡೀನ್‌ಗಳ ನೇಮಕ

ಬೆಂಗಳೂರು: ಆರ್.ವಿ ವಿಶ್ವವಿದ್ಯಾಲಯವು ವಿವಿಧ ವಿಭಾಗಗಳಿಗೆ ಇಬ್ಬರು ಡೀನ್‌ಗಳು ಹಾಗೂ ಹಣಕಾಸು ಅಧಿಕಾರಿಯೊಬ್ಬರನ್ನು ನೇಮಕ ಮಾಡಿದೆ.

ಔಷಧೀಯ ಉದ್ಯಮ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ 26 ವರ್ಷ ಅನುಭವ ಹೊಂದಿರುವ ಸಂಶೋಧಕ ಪ್ರೊ. ಪ್ರಕಾಶ್ ಗೌಡನವರ ಅವರನ್ನು ಮೈಸೂರು ಕ್ಯಾಂಪಸ್‌ನ ಸ್ಕೂಲ್ ಆಫ್ ಫಾರ್ಮಸಿ ವಿಭಾಗದ ಡೀನ್ ಆಗಿ ನೇಮಿಸಲಾಗಿದೆ.

ಬೆಂಗಳೂರು ಕ್ಯಾಂಪಸ್‌ನ ಸ್ಕೂಲ್ ಆಫ್ ಬ್ಯುಸಿನೆಸ್ ವಿಭಾಗದ ಡೀನ್ ಆಗಿ ಪ್ರೊ.ಮಾಧವಿ ಸೇಠಿ ಅಧಿಕಾರ ವಹಿಸಿಕೊಂಡಿದ್ದಾರೆ. ಆರ್ಥಿಕ ವ್ಯವಹಾರಗಳ ಉಸ್ತುವಾರಿಗೆ ಸಿ.ಎ. ಕಲ್ಪನಾ ಶ್ರೀನಿವಾಸ್ ಅವರನ್ನು ಹಣಕಾಸು ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ಕುಲಪತಿ ಪ್ರೊ.ರಾಮ್ ಕುಮಾರ್ ಕಾಕಾನಿ ಮಾತನಾಡಿ, 'ಹೊಸ ನೇಮಕಾತಿಯು ಶೈಕ್ಷಣಿಕ ಚಟುವಟಿಕೆಗಳಿಗೆ ಹೆಚ್ಚಿನ ವೇಗ ನೀಡಲಿದೆ' ಎಂದರು.

ಎಲ್‌ಪಿಜಿ ಏರಿಕೆ ಪ್ರಶ್ನೆ: ಮುಗುಳ್ನಕ್ಕು ತೆರಳಿದ ಸಚಿವೆ!

ದೊಡ್ಡಬಳ್ಳಾಪುರ: ಬಾಶೆಟ್ಟಿಹಳ್ಳಿಯಲ್ಲಿ ಶನಿವಾರ ಇಎಸ್‌ಐ ಆಸ್ಪತ್ರೆ ಉದ್ಘಾಟನೆಗೆ ಬಂದಿದ್ದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಪತ್ರಕರ್ತರು ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆ ಕುರಿತು ಕೇಳಿದ ಪ್ರಶ್ನೆಗೆ ಯಾವುದೇ ಪ್ರತಿಕ್ರಿಯೆ ನೀಡದೆ ಮುಗಳ್ನಕ್ಕು ತೆರಳಿದರು.

ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆ ಮುಗಿಯುತ್ತಿದ್ದಂತೆಯೇ ಕೇಂದ್ರ ಸರ್ಕಾರ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಏಕಾಏಕಿ ₹993 ಹೆಚ್ಚಳ ಮಾಡಿದೆಯಲ್ಲ ಎಂದು ಪತ್ರಕರ್ತರು ಪ್ರಶ್ನೆ ಕೇಳಿದರು. ಈ ಪ್ರಶ್ನೆಯನ್ನು ಕೇಳಿಸಿಕೊಳ್ಳದಂತೆ ಅವರು ಅಲ್ಲಿಂದ ತೆರಳಿದರು.

ಇದಕ್ಕೂ ಮುನ್ನ, ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರು ಉತ್ಸಾಹದಿಂದಲೇ ಉತ್ತರಿಸಿದ್ದರು.



ಎಲ್.ಪಿ.ಜಿ ಬೆಲೆ ಏರಿಕೆ ಪ್ರಶ್ನೆಗೆ ಶೋಭಾ ಕರಂದ್ಲಾಜೆ ನಗುವೆ ಉತ್ತರ

ಕೈಲಾಸ ಮಾನಸ ಸರೋವರ ಯಾತ್ರೆ: ನೇಪಾಳ ಆಕ್ಷೇಪ

ಕಠ್ಮಂಡು (ಪಿಟಿಐ): ಮುಂಬರುವ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಭಾರತ 'ಲಿಪುಲೇಖ್ ಪಾಸ್' ಮೂಲಕ ನಡೆಸಲು ಯೋಜಿಸುತ್ತಿರು-ವುದಕ್ಕೆ ನೇಪಾಳ ಭಾನುವಾರ ಆಕ್ಷೇಪ ವ್ಯಕ್ತಪಡಿಸಿದ್ದು, ಅದು ನೇಪಾಳದ ಪ್ರದೇಶ ಎಂದು ಪ್ರತಿಪಾದಿಸಿದೆ.

ತೀರ್ಥಯಾತ್ರೆಗೆ ಮಾರ್ಗವನ್ನು ಅಂತಿಮಗೊಳಿಸುವ ಮುನ್ನ ಕಠ್ಮಂಡುವನ್ನು ಸಂಪರ್ಕಿಸಿಲ್ಲ ಎಂದು ನೇಪಾಳ ವಿದೇಶಾಂಗ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ. ಯಾತ್ರೆ ಜೂನ್ ಮತ್ತು ಆಗಸ್ಟ್ ನಡುವೆ ನಡೆಯಲಿದೆ ಎಂದು ಭಾರತ ಘೋಷಿಸಿದ ಕೆಲ ದಿನಗಳಲ್ಲಿಯೇ ನೇಪಾಳದಿಂದ ಆಕ್ಷೇಪಣೆ ಬಂದಿದೆ.

ಭಾರತದ ಪ್ರತಿಕ್ರಿಯೆ: ಉತ್ತಾರಾಖಂಡದ ಲಿಪುಲೇಖ್ ಪಾಸ್ ಮೂಲಕ ದಶಕಗಳ (1954) ಹಿಂದಿನಿಂದಲೂ ಕೈಲಾಸ ಮಾನಸ ಸರೋವರ ಯಾತ್ರೆ ನಡೆದುಕೊಂಡು ಬಂದಿದೆ. ಇದು ಅತ್ಯಂತ ಹಳೆಯ ಮಾರ್ಗ ಎಂದು ಹೇಳುವ ಮೂಲಕ ಭಾರತವು ನೇಪಾಳದ ಆಕ್ಷೇಪಣೆಯನ್ನು ತಳ್ಳಿಹಾಕಿದೆ. ಅಲ್ಲದೆ ಈ ವಿಷಯದಲ್ಲಿ ಭಾರತದ ನಿಲುವು ಸ್ಥಿರ ಮತ್ತು ಸ್ಪಷ್ಟವಾಗಿದೆ ಎಂದು ಹೇಳಿದೆ.

ನೇಪಾಳದ ಪ್ರತಿಪಾದನೆಯು ಪುರಾವೆಗಳನ್ನು ಆಧರಿಸಿಲ್ಲ ಎಂದು ಭಾರತ ಸಮರ್ಥಿಸಿಕೊಂಡು ಬಂದಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಕಡಲಾಳದಲ್ಲಿ ಬೃಹತ್ ತ್ರಿವರ್ಣ ಧ್ವಜ ಅನಾವರಣ

ಪ್ರಜಾವಾಣಿ ವಾರ್ತೆ

ಗಿನ್ನಿಸ್ ದಾಖಲೆ

ಬೆಂಗಳೂರು: ಬೆಂಗಳೂರಿನ ಸಾಹಸ ಕ್ರೀಡಾ ತಜ್ಞ ಶರತ್ ಆರ್.ಅಶೋಕ ನೇತೃತ್ವದ 200 ಸಾಹಸಿಗರ ತಂಡ ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹದ 'ಸ್ವರಾಜ್ ದ್ವೀಪ'ದ ಸಮುದ್ರದ ಆಳದಲ್ಲಿ ಭಾರತದ ಅತಿ ದೊಡ್ಡ ತ್ರಿವರ್ಣ ಧ್ವಜವನ್ನು ಅನಾವರಣಗೊಳಿಸುವ ಮೂಲಕ 'ಗಿನ್ನಿಸ್ ವರ್ಲ್ಡ್ ರೆಕಾರ್ಡ್' ನಿರ್ಮಿಸಿದೆ.

ಸ್ವರಾಜ್ ದ್ವೀಪದಲ್ಲಿ ಮೇ 2ರಂದು ನಡೆದ ಈ ಬೃಹತ್ ಕಾರ್ಯಾಚರಣೆಯಲ್ಲಿ ದೇಶದ ವಿವಿಧ ಭಾಗಗಳ ಸುಮಾರು 200 ಕ್ಕೂ ಹೆಚ್ಚು ಸ್ಕೂಬಾ ಡೈವರ್‌ಗಳು ಭಾಗವಹಿಸಿದ್ದರು.

ಅಂಡಮಾನ್ ಆಡಳಿತ ಮತ್ತು ಭಾರತೀಯ ರಕ್ಷಣಾ ಪಡೆಗಳ ಸಹಯೋಗದೊಂದಿಗೆ ನಡೆದ ಈ ಅಭಿಯಾನದಲ್ಲಿ 60x40 ಮೀಟರ್ (2,400 ಚದರ ಮೀಟರ್) ವಿಸ್ತೀರ್ಣದ ಬೃಹತ್ ರಾಷ್ಟ್ರ ಧ್ವಜವನ್ನು ಅಲೆಗಳ ಅಬ್ಬರ ಮತ್ತು ನೀರಿನ ಒತ್ತಡದ ನಡುವೆ ಸಮು-ದ್ರದಾಳಕ್ಕೆ ಒಯ್ದು ಅನಾವರಣಗೊಳಿಸಲಾಯಿತು. ಆ ಬಳಿಕ ಅಂಡಮಾನ್ ಮತ್ತು ನಿಕೋಬಾರ್‌ನ ಲೆಫ್ಟಿನೆಂಟ್ ಗವರ್ನರ್ ಡಿ.ಕೆ. ಜೋಶಿ ಅವರು ಗಿನ್ನಿಸ್ ವಿಶ್ವ ದಾಖಲೆಯ ಪ್ರಮಾಣಪತ್ರ ನೀಡಿ ಗೌರವಿಸಿದರು.

ಶರತ್ ಜಲ ಸಾಹಸ ಮಾತ್ರವಲ್ಲದೇ, ಪ್ಯಾರಾಗ್ಲೈಡಿಂಗ್ ಮತ್ತು ಪ್ಯಾರಾಮೋಟರ್ ಪೈಲಟ್ ಆಗಿ ಸಾಹಸಗಳನ್ನು ಮೆರೆದಿದ್ದಾರೆ. ಮೋಟೊ ಕ್ರಾಸ್ ಮತ್ತು ಪರ್ವತಾರೋಹಣದಲ್ಲೂ ತೊಡಗಿಸಿಕೊಂಡಿದ್ದಾರೆ.



ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹದ 'ಸ್ವರಾಜ್ ದ್ವೀಪ'ದ ಸಮುದ್ರದ ಆಳದಲ್ಲಿ ಅನಾವರಣ ಮಾಡಲಾದ ಭಾರತದ ಧ್ವಜ

ಈ ಕುರಿತು ಪ್ರತಿಕ್ರಿಯಿಸಿರುವ ಶರತ್, 'ನಮ್ಮ ತ್ರಿವರ್ಣ ಧ್ವಜವು 140 ಕೋಟಿ ಭಾರತೀಯರ ಶಕ್ತಿ ಮತ್ತು ಏಕತೆಯ ಪ್ರತೀಕ. ಅಲೆಗಳ ಅಂತರಾಳದಲ್ಲಿ ರಾಷ್ಟ್ರಧ್ವಜವನ್ನು ಅರಳಿಸಿದ ಕ್ಷಣ ನನ್ನ ಬದುಕಿನ ಅತ್ಯಂತ ಗೌರವದ ಸಂದರ್ಭ' ಎಂದಿದ್ದಾರೆ. ಇವರು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಪುತ್ರ.

ರೈತನ ಹೊಟ್ಟೆ ಹೊಕ್ಕಿದ್ದ ಆನೆ ದಂತ • ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೊನೆಯುಸಿರು

ಕಾಡಾನೆ ದಾಳಿ: ಗಾಯಗೊಂಡಿದ್ದ ರೈತ ಸಾವು

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಕಾಡಾನೆ ದಾಳಿಯಿಂದ ಗಂಭೀರವಾಗಿ ಗಾಯಗೊಂಡು ಕಳೆದ 13 ದಿನಗಳಿಂದ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ-ಯಲ್ಲಿ ಸಾವು, ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದ ತಾಲ್ಲೂಕಿನ ಮಂಗಾಡಹಳ್ಳಿಯ ರೈತ ಕಾಂತರಾಜು (55) ಭಾನುವಾರ ಕೊನೆಯುಸಿರೆಳೆ-ದಿದ್ದಾರೆ. ಕಾಂತರಾಜು ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರಿದ್ದಾರೆ.



ಕಾಂತರಾಜು

ತಾಲ್ಲೂಕಿನ ಸುಣ್ಣಘಟ್ಟ ಗ್ರಾಮದ ತೋಟದಲ್ಲಿ ಏ.19ರಂದು ಮೂರು ಕಾಡಾನೆಗಳು ಕಾಣಿಸಿಕೊಂಡಿ-ದ್ದವು. ಅಂದು ರಾತ್ರಿ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಆನೆ ಕಾರ್ಯಪಡೆ (ಇಟಿಎಫ್) ಸಿಬ್ಬಂದಿ ಕರಿಕಲ್ಲುಗುಡ್ಡೆ ಮೂಲಕ ಆನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ಕೈಗೊಂಡಿದ್ದರು. ಕಾರ್ಯಾಚರಣೆಯ ಪರಿವಿಲ್ಲದ ಕಾಂತರಾಜು ತಮ್ಮ ಜಮೀನಿಗೆ ನೀರು ಹಾಯಿಸಲು ಹೋಗಿದ್ದರು.

ಆನೆ ಕಾರ್ಯಾಚರಣೆ ವೇಳೆ ಮೂರು ಆನೆಗಳ ಪೈಕಿ ಗಂಡಾನೆಯೊಂದು ಗುಂಪಿನಿಂದ ಬೇರ್ಪಟ್ಟು, ಮಂಗಾಡಹಳ್ಳಿಯಲ್ಲಿರುವ ಕಾಂತರಾಜು ಅವರ ಜಮೀನಿನ ಕಡೆಗೆ ಬಂದಿತ್ತು. ಜಮೀನಿನಲ್ಲಿ ನೀರು ಹಾಯಿಸುತ್ತಿದ್ದ ಕಾಂತರಾಜು ಅವರ ಮೇಲೆ ಏಕಾಏಕಿ ದಾಳಿ ನಡೆಸಿತ್ತು. ಹೊಟ್ಟೆ ಸೇರಿದಂತೆ ದೇಹದ ಇತರ ಭಾಗಗಳಿಗೆ ದಂತದಿಂದ ತಿವಿದು ಹೋಗಿತ್ತು. ಇದರಿಂದಾಗಿ ಕಾಂತರಾಜು ಗಂಭೀರವಾಗಿ ಗಾಯಗೊಂಡಿದ್ದರು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಕೂಡಲೇ ಅರಣ್ಯ ಇಲಾಖೆ ಸಿಬ್ಬಂದಿ ಅಧಿಕಾರಿಗಳು ಕಾಂತರಾಜು ಅವರನ್ನು ಚನ್ನಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದರು. ನಂತರ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ದಾಳಿಯ ತೀವ್ರತೆಗೆ ಕಾಂತರಾಜು ಅವರ ಕರುಳುಗಳಿಗೆ ಹಾನಿಯಾಗಿತ್ತು. ತೀವ್ರ ನಿಗಾ ಘಟಕದಲ್ಲಿದ್ದ (ಐಸಿಯು) ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು ಎಂದು ಹೇಳಿದರು.

ಶಸ್ತ್ರಚಿಕಿತ್ಸೆ ಬಳಿಕ ಸ್ವಲ್ಪ ಚೇತರಿಸಿಕೊಂಡಿದ್ದ ಕಾಂತರಾಜು ಅವರ ಆರೋಗ್ಯದಲ್ಲಿ ಶನಿವಾರ ರಾತ್ರಿ ಏರು-ಪೇರಾಗಿದ್ದರಿಂದ, ಮತ್ತೆ ತೀವ್ರ ನಿಗಾ ಘಟಕಕ್ಕೆ ಸ್ಥಳಾಂತರಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಶನಿವಾರ ಬೆಳಿಗ್ಗೆ ಕೊನೆಯುಸಿರೆಳೆದರು. ಮರಣೋತ್ತರ ಪರೀಕ್ಷೆ ಬಳಿಕ ಕುಟುಂಬದವರಿಗೆ ಶವ ಹಸ್ತಾಂತರಿಸಲಾಯಿತು ಎಂದು ತಿಳಿಸಿದರು.

ಆಕ್ರೋಶ–ಪರಿಹಾರ ವಿತರಣೆ

ಆಸ್ಪತ್ರೆಯಿಂದ ಮಧ್ಯಾಹ್ನ ಗ್ರಾಮಕ್ಕೆ ಕಾಂತರಾಜು ಅವರ ಶವವನ್ನು ತಂದಾಗ ಗ್ರಾಮಸ್ಥರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಕಾಡಾನೆ ಹಾವಳಿ ನಿಯಂತ್ರಿಸುವಲ್ಲಿ ಅರಣ್ಯ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆಗ ಡಿಸಿಎಫ್ ಎಂ. ರಾಮಕೃಷ್ಣಪ್ಪ, ಎಸಿಎಫ್ ಪುಟ್ಟಮ್ಮ, ಆರ್‌ಎಫ್‌ಒ ಮಲ್ಲೇಶ್ ಸೇರಿದಂತೆ ಇತರ ಅಧಿಕಾರಿಗಳು ಹಾಗೂ ಪೊಲೀಸರು ಗ್ರಾಮಸ್ಥರನ್ನು ಸಮಾಧಾನಪಡಿಸಿದರು. ಬಳಿಕ ಅಂತ್ಯಕ್ರಿಯೆ ನಡೆಯಿತು.

ಇದೇ ಸಂದರ್ಭದಲ್ಲಿ ಕಾಂತರಾಜು ಅವರ ಕುಟುಂಬಕ್ಕೆ ಸಿಗಬೇಕಾದ ₹20 ಲಕ್ಷ ಪರಿಹಾರದ ಪೈಕಿ ₹5 ಲಕ್ಷದ ಚೆಕ್ ಅನ್ನು ಅವರ ಪತ್ನಿ ಕೋಮಲ ಅವರಿಗೆ ಡಿಸಿಎಫ್ ವಿತರಿಸಿದರು. ಉಳಿದ ಮೊತ್ತವನ್ನು ಕೆಲ ಪ್ರಕ್ರಿಯೆ ಮುಗಿದ ಬಳಿಕ ನೀಡಲಾಗುವುದು ಎಂದು ಭರವಸೆ ನೀಡಿದರು.

'ರೈತ ಕಾಂತರಾಜು ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿ ಸೂಕ್ತ ಚಿಕಿತ್ಸೆ ಕೊಡಿಸಲಾಗಿತ್ತು. ಚಿಕಿತ್ಸೆ ವೆಚ್ಚವನ್ನು ಇಲಾಖೆಯೇ ಭರಿಸಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರು. ಇಲಾಖೆಯಿಂದ ಅವರ ಕುಟುಂಬಕ್ಕೆ ಸರ್ಕಾರದ ಎಲ್ಲ ಸವಲತ್ತುಗಳನ್ನು ಒದಗಿಸಲಾಗುವುದು' ಎಂದು ಚನ್ನಪಟ್ಟಣ ಆರ್‌ಎಫ್‌ಒ ಮಲ್ಲೇಶ್ ಮಾಧ್ಯಮದವರಿಗೆ ತಿಳಿಸಿದರು.

ಮಕ್ಕಳ ಕೊಂದು ಆತ್ಮಹತ್ಯೆಗೆ ಯತ್ನ

ಪತಿ ಜತೆಗಿನ ಕಲಹ: ಮಕ್ಕಳಿಗೆ ವಿಷ ಕುಡಿಸಿ ಕೊಲೆ • ತಾಯಿ ಸ್ಥಿತಿಯೂ ಗಂಭೀರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ಕಲಹದಿಂದ ಮನನೊಂದು ಮಹಿಳೆಯೊಬ್ಬರು ತನ್ನ ಇಬ್ಬರು ಮಕ್ಕಳಿಗೆ ವಿಷ ಕುಡಿಸಿ ಕೊಲೆ ಮಾಡಿದ ನಂತರ ತಾನೂ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಯಶವಂತಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಠಾಣಾ ವ್ಯಾಪ್ತಿಯ ಮತ್ತಿಕೆರೆಯಲ್ಲಿ ಶನಿವಾರ ತಡರಾತ್ರಿ ತಾಯಿ ಪವಿತ್ರಾ (26) ಅವರು ಮಕ್ಕಳಾದ 4 ವರ್ಷದ ನಿವೇದ್ ಹಾಗೂ ಒಂದೂವರೆ ವರ್ಷದ ನಿರ್ಮಲ್‌ಗೆ ವಿಷ ಕುಡಿಸಿ ಕೊಲೆ ಮಾಡಿದ್ದಾರೆ. ಬಳಿಕ ಆತ್ಮಹತ್ಯೆಗೆ ಯತ್ನಿಸಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.

ಪಾವಗಡದ ಪ್ರಶಾಂತ್ ಹಾಗೂ ಪವಿತ್ರಾ ದಂಪತಿ ಆರು ವರ್ಷಗಳ ಹಿಂದೆ ನಗರಕ್ಕೆ ಬಂದು ನೆಲಸಿದ್ದರು. ಪ್ರಶಾಂತ್, ಮೊಬೈಲ್ ಶೋರೂಂನಲ್ಲಿ ಮಾರಾಟ ಪ್ರತಿನಿಧಿಯಾಗಿ ಕೆಲಸ ಮಾಡುತ್ತಾರೆ. ಪವಿತ್ರಾ ಗೃಹಿಣಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಾಧ ಸುದ್ದಿ

ದಂಪತಿ ಮಧ್ಯೆ ಕೌಟುಂಬಿಕ ವಿಚಾರಕ್ಕೆ ಆಗಾಗ್ಗೆ ಗಲಾಟೆಯಾಗಿತ್ತು. ಅದೇ ರೀತಿ ಶನಿವಾರವೂ ಜಗಳವಾಗಿತ್ತು. ಇದರಿಂದ ಮನನೊಂದ ಪವಿತ್ರಾ, ಮನೆಯಲ್ಲಿದ್ದ ಇಲಿ ಪಾಷಾಣವನ್ನು ನೀರಿಗೆ ಬೆರೆಸಿ ಮಕ್ಕಳಿಗೆ ಕುಡಿಸಿದ್ದಾರೆ. ನಂತರ ಅವರೂ ಕುಡಿದಿದ್ದಾರೆ. ಪ್ರಶಾಂತ್, ಭಾನುವಾರ ನಿದ್ದೆಯಿಂದ ಎಚ್ಚರಗೊಂಡಾಗ ಅಸ್ವಸ್ಥರಾಗಿದ್ದ ಪತ್ನಿಯನ್ನು ವಿಚಾರಿಸಿದಾಗ ಕೃತ್ಯ ಬಯಲಾಗಿದೆ.

ತಕ್ಷಣ ಸ್ಥಳೀಯರ ಸಹಾಯದಿಂದ ಮೂವರನ್ನೂ ಪ್ರಶಾಂತ್ ಯಶವಂತಪುರ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ, ಮಕ್ಕಳಿಬ್ಬರೂ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು. ಪವಿತ್ರಾ ಸ್ಥಿತಿ ಗಂಭೀರವಾಗಿದ್ದು, ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಯಶವಂತಪುರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪತಿ ಪ್ರಶಾಂತ್ ಅವರಿಂದ ಮಾಹಿತಿ ಪಡೆದು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಮರದ ಪಟ್ಟಿಯಿಂದ ಹಲ್ಲೆ: ಚಾಲಕನ ಕೊಲೆ

ಆಟೊ ಸೀಟು ವಿಚಾರಕ್ಕೆ ನಡೆದ ಜಗಳದ ವೇಳೆ ಪಕ್ಕದ ಮನೆಯ ನಿವಾಸಿ ಮರದ ಪಟ್ಟಿಯಿಂದ ಹಲ್ಲೆ ನಡೆಸಿ, ಆಟೊ ಚಾಲಕನನ್ನು ಕೊಲೆ ಮಾಡಿರುವ ಘಟನೆ ನಡೆದಿದೆ.

ಜೆಜೆ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಜೆಜೆ ನಗರದ 9ನೇ ಮುಖ್ಯ ರಸ್ತೆ ನಿವಾಸಿ ಮುಬಾರಕ್ (26) ಕೊಲೆಯಾದ ಆಟೊ ಚಾಲಕ. ಘಟನೆ ಸಂಬಂಧ ತಬ್ರೇಜ್ ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

ಮುಬಾರಕ್ ಅವರ ಕುಟುಂಬ ಪಾದರಾಯನಪುರದಲ್ಲಿ ವಾಸವಾಗಿದ್ದು, ಆಟೊ ಓಡಿಸಿಕೊಂಡು ಜೀವನ ನಡೆಸುತ್ತಿದ್ದರು. 9ನೇ ಮೇನ್ ಬಳಿಯ ರೆಹಮಾನಿಯ ಮಸೀದಿ ಹತ್ತಿರದ ಶಾಲೆ ಬಳಿ ಮುಬಾರಕ್ ಆಟೊ ನಿಲ್ಲಿಸಿದ್ದರು. ಅದೇ ಜಾಗದಲ್ಲಿ ತಬ್ರೇಜ್ ಸಹ ನಿಲುಗಡೆ ಮಾಡಿದ್ದರು. ಶುಕ್ರವಾರ ರಾತ್ರಿ 10 ಗಂಟೆ ಸುಮಾರಿನಲ್ಲಿ ಆಟೊ ಸೀಟು ತೆಗೆದುಕೊಂಡ ವಿಚಾರಕ್ಕೆ ತಬ್ರೇಜ್ ಹಾಗೂ ಮುಬಾರಕ್ ನಡುವೆ ಜಗಳವಾಗಿದೆ.

ಕೋಪದಲ್ಲಿ ತಬ್ರೇಜ್ ಅವರು ಮರದ ಪಟ್ಟಿಯಿಂದ ಮುಬಾರಕ್ ತಲೆಗೆ ಹೊಡೆದಾಗ ಕುಸಿದು ಬಿದ್ದಿದ್ದಾರೆ. ತಲೆಯಿಂದ ರಕ್ತಸ್ರಾವವಾಗಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ.

ಮೃತನ ತಂದೆ ಫೈರೋಜ್ ಅವರು ಆರೋಪಿ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದು, ಜೆಜೆ ನಗರ ಠಾಣೆ ಪೊಲೀಸರು ಆರೋಪಿ ತಬ್ರೇಜ್‌ನನ್ನು ಬಂಧಿಸಿ, ತನಿಖೆ ಕೈಗೊಂಡಿದ್ದಾರೆ.

ತುಮಕೂರಿಗೆ ಮೆಟ್ರೊ: ವಾರದಲ್ಲಿ ಡಿಪಿಆರ್ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ತುಮಕೂರು: ಬೆಂಗಳೂರಿನ ಮಾದಾವರದಿಂದ ತುಮಕೂರಿಗೆ ಮೆಟ್ರೊ ವಿಸ್ತರಿಸುವ ಸಂಬಂಧ ಒಂದು ವಾರದಲ್ಲಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಲ್ಲಿಕೆಯಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಇಲ್ಲಿ ಭಾನುವಾರ ಹೇಳಿದರು.

ಈಗಾಗಲೇ ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ. ನಗರಕ್ಕೆ ಮೆಟ್ರೊ ಬಂದರೆ ಬೆಂಗಳೂರು–ತುಮಕೂರು ಮಧ್ಯೆ ಸಂಚಾರ ಸುಲಭವಾಗುತ್ತದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಗರದಲ್ಲಿ ಕಳೆದ ವಾರ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಕ್ರೀಡಾಕೂಟ ಆಯೋಜಿಸಲಾಗಿತ್ತು. ಈಗ ವಿಶ್ವ ಮಹಿಳಾ ಟೆನಿಸ್ ಟೂರ್ನಿ ನಡೆಯುತ್ತಿದೆ. ತಾಲ್ಲೂಕಿನ ಪಿ.ಗೊಲ್ಲಹಳ್ಳಿ ಬಳಿ ಅಂತರ ರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ 42 ಎಕರೆ ಜಾಗ ನೀಡಿದ್ದು, ಸದ್ಯದಲ್ಲಿಯೇ ಕೆಲಸ ಆರಂಭವಾಗಲಿದೆ. ಕಾಮಗಾರಿ ಪೂರ್ಣಗೊಂಡರೆ ಅಂತರ ರಾಷ್ಟ್ರೀಯ ಮಟ್ಟದ ಪಂದ್ಯ ಆಯೋಜಿಸಲಾಗುತ್ತದೆ. ಈ ಎಲ್ಲ ಕಾರ್ಯಗಳಿಂದ ತುಮಕೂರು 'ಕ್ರೀಡಾ ನಗರ'ವಾಗಿ ಗುರುತಿಸಿಕೊಳ್ಳುತ್ತಿದೆ ಎಂದರು.

ವಿಶ್ವ ಮಟ್ಟದ ಹಾಕಿ, ಈಜುಕೊಳ ನಿರ್ಮಾಣಕ್ಕೆ ಸರ್ಕಾರದಿಂದ ₹3 ಕೋಟಿ ಬಿಡುಗಡೆಯಾಗಿದೆ. ಇನ್ನೂ ಹೆಚ್ಚಿನ ಅನುದಾನ ತರಲು ಕ್ರಮ ವಹಿಸಲಾಗುತ್ತಿದೆ. ಪ್ರಾಯೋಜಕತ್ವದಡಿ ದಾನಿಗಳಿಂದ ಹಣ ಪಡೆಯಲಾಗುವುದು ಎಂದು ಹೇಳಿದರು.

ಜಿಲ್ಲಾ ಕ್ರೀಡಾಂಗಣದ ವಾಣಿಜ್ಯ ಸಂಕೀರ್ಣ ಕಟ್ಟಡದಲ್ಲಿ ಶೂಟಿಂಗ್ ತರಬೇತಿ ಕೇಂದ್ರ ಪ್ರಾರಂಭಿಸಲಾಗಿದೆ. ತರಬೇತುದಾರರನ್ನು ನೇಮಿಸಿದ್ದು, ಶೀಘ್ರದಲ್ಲಿಯೇ ಮಕ್ಕಳಿಗೆ ತರಬೇತಿ ಶುರು ಮಾಡಲಾಗುತ್ತದೆ. ಜಿಲ್ಲೆಯ ಕ್ರೀಡಾಪಟುಗಳು ರಾಷ್ಟ್ರ, ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡಲಾಗುತ್ತಿದೆ ಎಂದರು.

ಸಾ.ರಾ.ಗೋವಿಂದು ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗೆ ನುಗ್ಗಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದು ವಿರುದ್ಧ ನಟ ಚೇತನ್ ಅಹಿಂಸಾ ಶೇಷಾದ್ರಿಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಜನಪರ ಹಾಗೂ ದಲಿತ ಸಂಘಟನೆಗಳ ಪದಾಧಿಕಾರಿಗಳ ಜತೆ ತೆರಳಿ ಚೇತನ್ ದೂರು ನೀಡಿದ್ದು, ಪರಿಶೀಲಿಸಿ ಕಾನೂನು ಕ್ರಮ ಜರುಗಿಸುವುದಾಗಿ ಪೊಲೀಸರು ಭರವಸೆ ನೀಡಿದ್ದಾರೆ.

ದೂರು ನೀಡಿದ ಬಳಿಕ ಮಾತನಾಡಿದ ಚೇತನ್, 'ಡಾ.ರಾಜ್‌ಕುಮಾರ್ ಅವರ ಹೆಸರಿಗೆ ಮಸಿ ಬಳಿಯುವ ಕೆಲಸವನ್ನು ಗೋವಿಂದು ಮಾಡುತ್ತಿದ್ದಾರೆ. ಸಿನಿಮಾ ರಂಗದ ಬೆಳವಣಿಗೆಗೂ ಅಡ್ಡಿಯಾಗಿದ್ದಾರೆ. ಪೊಲೀಸರ ಸಮ್ಮುಖದಲ್ಲೇ ನನಗೆ ಧಮ್ಕಿ ಹಾಕಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ರಾಜ್ ಅಭಿಮಾನಿ ಅಂತ ಹೇಳಿಕೊಳ್ಳುವ ಯೋಗ್ಯತೆಯೂ ಅವರಿಗಿಲ್ಲ' ಎಂದು ಆರೋಪಿಸಿದರು.

'ಈ ಹಿಂದೆ ಲಂಕೇಶ್ ಪತ್ರಿಕೆಯ ಪತ್ರಕರ್ತರ ಮೇಲೆ ಗೋವಿಂದು ಹಲ್ಲೆ ಮಾಡಿದ್ದರು. ಫಿಲ್ಮ್ ಚೇಂಬರ್‌ನಲ್ಲಿ ಹಣ ಕಳ್ಳತನ ಮಾಡಿರುವ ಆರೋಪ ಸಹ ಅವರ ಮೇಲಿದೆ' ಎಂದು ದೂರಿದರು.

ನಗರದ ಕಂಠೀರವ ಸ್ಟುಡಿಯೊದಲ್ಲಿ ಡಾ.ರಾಜ್‌ಕುಮಾರ್ ಅವರ ಸಮಾಧಿಗೆ 2.5 ಎಕರೆ ಭೂಮಿ ಮಂಜೂರು ಮಾಡಿರುವ ರಾಜ್ಯ ಸರ್ಕಾರದ ನಿರ್ಧಾರದ ಬಗ್ಗೆ ಚೇತನ್ ಆಕ್ಷೇಪಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದರು. ಈ ವಿಚಾರ ಪರ–ವಿರೋಧ ಚರ್ಚೆಗೆ ಗ್ರಾಸವಾಗಿತ್ತು.

ಏಪ್ರಿಲ್ 25ರಂದು ಸಾ.ರಾ. ಗೋವಿಂದು ನೇತೃತ್ವದಲ್ಲಿ ಕೆಲವರು ಚೇತನ್ ಮನೆ ಮುಂದೆ ಪ್ರತಿಭಟನೆ ನಡೆಸಿದ್ದರು.

ಮನೆಯಿಂದ ಹೊರ ಹಾಕಿದ ಪತಿ: ದೂರು

ಪೀಣ್ಯ ದಾಸರಹಳ್ಳಿ: ಮಹಿಳೆ ಜತೆಗಿನ ಸಲುಗೆ ಪ್ರಶ್ನಿಸಿದ ಪತ್ನಿಯನ್ನು ಮನೆಯಿಂದ ಹೊರಗೆ ಹಾಕಿರುವ ಘಟನೆ ದಾಸರಹಳ್ಳಿಯ ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಈ ಸಂಬಂಧ ಪತ್ನಿ ಶ್ವೇತಾ ಅವರು ಪತಿ ವಿರುದ್ಧ ಕಾನೂನು ಕ್ರಮ ಕೈಗೊಂಡು, ನ್ಯಾಯ ದೊರಕಿಸಿಕೊಡುವಂತೆ ಠಾಣೆಗೆ ದೂರು ನೀಡಿದ್ದಾರೆ.

ಬಿಎಂಟಿಸಿ ಭದ್ರತಾ ವಿಭಾಗದ ಮುಖ್ಯಸ್ಥರಾಗಿರುವ ಜಗದೀಪ್ (42) ಹಾಗೂ ಪತ್ನಿ ಶ್ವೇತಾ (32) ಅವರು ಜಯನಗರದ ಸರ್ಕಾರಿ ಕ್ವಾರ್ಟರ್ಸ್‌ನಲ್ಲಿ ವಾಸವಿದ್ದರು. 14 ವರ್ಷಗಳ ಹಿಂದೆ ವಿವಾಹವಾಗಿತ್ತು.

'ಆರು ತಿಂಗಳ ಗರ್ಭಿಣಿಯಾಗಿದ್ದು, ಮಗು ತೆಗೆಸುವಂತೆ ಜಗದೀಪ್ ಕಿರುಕುಳ ನೀಡಿ, ದೈಹಿಕ ಹಲ್ಲೆ ನಡೆಸಿದ್ದಾರೆ. ಪತಿ ವರ್ತನೆಯಲ್ಲಿ ಬದಲಾವಣೆ ಆಗಿದ್ದರಿಂದ ಅನುಮಾನಗೊಂಡು ವಾಟ್ಸ್‌ಆ್ಯಪ್ ಸಂದೇಶಗಳನ್ನು ಪರಿಶೀಲಿಸಿದಾಗ ಬೇರೆ ಮಹಿಳೆ ಜತೆ ಸಲುಗೆ ಹೊಂದಿರುವುದು ಗೊತ್ತಾಗಿದೆ. ಈ ಬಗ್ಗೆ ಪ್ರಶ್ನಿಸಿದಾಗ ನನ್ನ ಮೇಲೆ ಹಲ್ಲೆ ನಡೆಸಿ, ಮನೆಯಿಂದ ಹೊರಗೆ ಹಾಕಿದ್ದಾರೆ. ಪತಿ ವಿರುದ್ಧ ಕ್ರಮ ಕೈಗೊಂಡು, ನ್ಯಾಯ ಒದಗಿಸಬೇಕು' ಎಂದು ಶ್ವೇತಾ ಕೋರಿದ್ದಾರೆ.

ಚಿನ್ನದ ಸರ ಕದ್ದವನ ಬಂಧನ

ಬೆಂಗಳೂರು: ವಾಯುವಿಹಾರ ಮಾಡುತ್ತಿದ್ದ ಮಹಿಳೆಯೊಬ್ಬರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಿ, 25 ಗ್ರಾಂ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ.

ಬಾಣಸವಾಡಿ ಠಾಣಾ ವ್ಯಾಪ್ತಿಯ ಎಚ್.ಆರ್.ಬಿ.ಆರ್. ಲೇಔಟ್‌ನಲ್ಲಿ ವಾಸವಿರುವ ಮಹಿಳೆ ಸಂಜೆ ವಾಯು ವಿಹಾರ ಮಾಡುವ ವೇಳೆ ಮಾಸ್ಕ್ ಧರಿಸಿಕೊಂಡು ಬಂದ ವ್ಯಕ್ತಿ, ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದ.

ಈ ಸಂಬಂಧ ದೂರು ದಾಖಲಿಸಿಕೊಂಡ ಪೊಲೀಸರು, ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ಆರೋಪಿಯು ಸರ ಅಪಹರಣ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಕದ್ದ ಸರವನ್ನು ವ್ಯಕ್ತಿಯೊಬ್ಬನಿಗೆ ಮಾರಾಟ ಮಾಡಲಾಗಿತ್ತು. ಆರೋಪಿ ನೀಡಿದ ಮಾಹಿತಿ ಮೇರೆಗೆ ಖರೀದಿ ಮಾಡಿದ್ದ ವ್ಯಕ್ತಿಯಿಂದ ₹3.50 ಲಕ್ಷ ಮೌಲ್ಯದ 25 ಗ್ರಾಂ ಚಿನ್ನದ ಸರ ವಶಪಡಿಸಿಕೊಳ್ಳಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಹೂಡಿ: ಲಕ್ಷ್ಮೀನಾರಾಯಣ ಬ್ರಹ್ಮರಥೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಹೂಡಿ ಗ್ರಾಮದಲ್ಲಿ ಶ್ರೀಲಕ್ಷ್ಮೀನಾರಾಯಣ ಸ್ವಾಮಿ ಬ್ರಹ್ಮರಥೋತ್ಸವ ವಿಜೃಂಭಣೆ, ಭಕ್ತಿಭಾವದಿಂದ ನೆರವೇರಿತು.

ಬ್ರಹ್ಮ ರಥೋತ್ಸವದ ಅಂಗವಾಗಿ ಗುರುವಾರ ಸಂಜೆಯಿಂದ ದೇವಾಲಯದಲ್ಲಿ ವಿಶೇಷ ಪೂಜೆಗಳು, ಹೋಮ-ಹವನಗಳು ನಡೆದವು. ಉತ್ಸವ ಮೂರ್ತಿಗೆ ವಿವಿಧ ಬಗೆಯ ಹೂವಿನ ಅಲಂಕಾರ ಮಾಡಲಾಗಿತ್ತು,

ಭಕ್ತರ ಜಯಘೋಷಗಳ ಮಧ್ಯೆ ದೇವರನ್ನು ಅಲಂಕೃತ ರಥದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ರಥದ ಮುಂದೆ ಸಿಂಗಾರಗೊಂಡ ಎತ್ತುಗಳ ಬಂಡಿ, ಗಾರುಡಿ ಗೊಂಬೆ ನೃತ್ಯ, ಡೊಳ್ಳು ಕುಣಿತ, ತಮಟೆ ವಿವಿಧ ಕಲಾ ತಂಡಗಳ ನೃತ್ಯ ಪ್ರದರ್ಶನಗಳು ಸೂರೆಗೊಂಡವು.

ಹೂಡಿ, ತಿಗಳರಪಾಳ್ಯ, ರಾಜಪಾಳ್ಯ, ಅಯ್ಯಪ್ಪನಗರ, ಕಾವೇರಿ ನಗರ, ಗರುಡಾಚಾರ್ ಪಾಳ್ಯ, ಮಹದೇವಪುರ ಸುತ್ತಮುತ್ತಲಿನ ಊರುಗಳಿಂದ ಸಾವಿರಾರು ಭಕ್ತರು ರಥೋತ್ಸವದಲ್ಲಿ ಭಾಗವಹಿಸಿ ಭಕ್ತಿ ಸಮರ್ಪಿಸಿದರು.

ವಿಶೇಷವಾಗಿ ಮಹಿಳೆಯರು ಮತ್ತು ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಉತ್ಸವಕ್ಕೆ ಮತ್ತಷ್ಟು ಚೈತನ್ಯ ತುಂಬಿದರು. ಭಕ್ತರಿಗಾಗಿ ಅನ್ನದಾಸೋಹ, ಪಾನಕ ಹಾಗೂ ಮಜ್ಜಿಗೆ ವಿತರಣೆ ವ್ಯವಸ್ಥೆ ಮಾಡಲಾಗಿತ್ತು.

ಮಹದೇವಪುರ ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಹೂಡಿ ಎಚ್.ಎಸ್.ಪಿಳ್ಳಪ್ಪ, ಎಚ್.ಡಿ ಶ್ರೀನಿವಾಸ್ ರೆಡ್ಡಿ ಎಚ್.ವಿ.ಮಂಜುನಾಥ್, ಎಚ್.ಬಿ.ಅನೂಪ್ ಕುಮಾರ್, ವಿಶ್ವನಾಥ್, ಎಚ್.ಎನ್.ಮೋಹನ್, ಎಚ್.ಎಸ್. ನರೇಂದ್ರಬಾಬು, ಎಚ್.ಜೆ ಮಹೇಂದ್ರ ಬಾಬು, ಎಲ್.ಟಿ.ಶ್ರೀನಿವಾಸ್, ಎಚ್.ಎಸ್.ಪವನ್ ರೆಡ್ಡಿ ಉಪಸ್ಥಿತರಿದ್ದರು.



ಹೂಡಿ ಶ್ರೀಲಕ್ಷ್ಮೀನಾರಾಯಣ ಸ್ವಾಮಿಯ ಬ್ರಹ್ಮರಥೋತ್ಸವ ನಡೆಯಿತು

ಜಾತ್ರೆಯಲ್ಲಿ ಅವಘಡ: 18 ಮಂದಿಗೆ ಗಾಯ

ಗದಗ: ಇಲ್ಲಿನ ತೋಂಟದಾರ್ಯ ಮಠದ ಆವರಣದಲ್ಲಿ ನಡೆಯುತ್ತಿರುವ ಜಾತ್ರೆಯಲ್ಲಿ ಭಾನುವಾರ 'ಡಾನ್ಸಿಂಗ್ ಫ್ಲೈ' ಆಟ ಆಡುವಾಗ ಸಂಭವಿಸಿದ ಅವಘಡದಲ್ಲಿ 18 ಮಂದಿ ಗಾಯಗೊಂಡಿದ್ದು, ನಾಲ್ವರ ಸ್ಥಿತಿ ಗಂಭೀರವಾಗಿದೆ.

ಭಾನುವಾರ ರಾತ್ರಿ 9ರ ಸುಮಾರಿಗೆ ಈ ದುರ್ಘಟನೆ ನಡೆದಿದೆ. ಗಾಯಾಳುಗಳನ್ನು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿಯ ಕೆಎಂಸಿಆರ್‌ಐಗೆ ದಾಖಲಿಸಲಾಗಿದೆ. ಗಾಯಗೊಂಡವರ ಪೈಕಿ ಇಬ್ಬರು ಕೊಪ್ಪಳ ಜಿಲ್ಲೆ, ಒಬ್ಬರು ತುಮಕೂರು ಜಿಲ್ಲೆ, ಉಳಿದವರು ಗದಗ ಜಿಲ್ಲೆಯವರು ಎಂದು ಗೊತ್ತಾಗಿದೆ. ಗಾಯಾಳುಗಳ ವೈಯಕ್ತಿಕ ವಿವರವನ್ನು ಪೊಲೀಸರು ಸಂಗ್ರಹಿಸುತ್ತಿದ್ದಾರೆ.

ಪೂಜೆಯ ನೆಪದಲ್ಲಿ ಲೈಂಗಿಕ ದೌರ್ಜನ್ಯ

ಜ್ಯೋತಿಷಿ ವಿರುದ್ಧ ದೂರು ನೀಡಿದ ಬ್ಯೂಟಿಷಿಯನ್

ಬೆಂಗಳೂರು: ಪೂಜೆ ಹಾಗೂ ದೀಕ್ಷೆಯ ನೆಪದಲ್ಲಿ ಬ್ಯೂಟಿಷಿಯನ್ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಕೇಳಿಬಂದಿದ್ದು, ಈ ಸಂಬಂಧ ಸಂತ್ರಸ್ತೆ ನೀಡಿದ ದೂರಿನ ಮೇಲೆ ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕಗ್ಗಲಿಪುರದ ಬಳಿಯ ಕುಂಬಳಗೋಡಿನ ಜ್ಯೋತಿಷಿ ಮೋಹನ್ ಕುಮಾರ್ (35) ಎಂಬವರು ದುಷ್ಕೃತ್ಯ ಎಸಗಿದ್ದು, ದೂರು ದಾಖಲಾದ ಬೆನ್ನಲ್ಲೇ ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಸಂತ್ರಸ್ತೆಯು ರಾಜಾಜಿನಗರದಲ್ಲಿ ಬ್ಯೂಟಿಷಿಯನ್ ತರಬೇತಿ ಕೇಂದ್ರ ನಡೆಸುತ್ತಿದ್ದಾರೆ. ಆರೋಪಿಯು, ತನ್ನ ಸಹೋದರಿಗೆ ಬ್ಯೂಟಿಷಿಯನ್ ತರಬೇತಿ ಕೊಡಿಸುವ ನೆಪದಲ್ಲಿ ಸಂತ್ರಸ್ತೆಯನ್ನು ಪರಿಚಯ ಮಾಡಿಕೊಂಡು, ಅವರ ಆರ್ಥಿಕ ಸ್ಥಿತಿ ಸುಧಾರಣೆಗೆ ಪೂಜೆ ಮಾಡಿಸಬೇಕೆಂದು ಸುಳ್ಳು ಹೇಳಿ ನಂಬಿಸಿದ್ದ.

ನಂತರ ಪೂಜೆಯ ನೆಪದಲ್ಲಿ 2025ರಲ್ಲಿ ರಾಮನಗರದ ಪಿರಮಿಡ್ ವ್ಯಾಲಿ ಬಳಿಯ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಮತ್ತೊಮ್ಮೆ ಮೈಸೂರಿನ ಚಾಮುಂಡಿ ಬೆಟ್ಟದ ಬಳಿ ಕರೆದೊಯ್ದು ಕಾರಿನಲ್ಲಿ ದೌರ್ಜನ್ಯ ಎಸಗಿದ್ದಾನೆ' ಎಂದು ಪೊಲೀಸರು ಹೇಳಿದ್ದಾರೆ.

'ಆರೋಪಿಯು ಲೈಂಗಿಕ ದೌರ್ಜನ್ಯದ ಸಂಗತಿಯನ್ನು ಯಾರಿಗೂ ತಿಳಿಸದಂತೆ ಸಂತ್ರಸ್ತೆಗೆ ಪ್ರಾಣ ಬೆದರಿಕೆ ಹಾಕಿದ್ದ. ದೀಕ್ಷೆ ನೀಡುವ ನೆಪದಲ್ಲಿ ಫೆಬ್ರುವರಿ 10ರಂದು ಸಂತ್ರಸ್ತೆಯ ಮನೆಗೆ ಹೋಗಿ ಮತ್ತೊಮ್ಮೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ' ಎಂದರು.

'ಈ ವಿಚಾರವನ್ನು ಬಹಿರಂಗಪಡಿಸಿದರೆ ಸಂತ್ರಸ್ತೆಯ ಪತಿ ಮತ್ತು ಮಗನ ಮೇಲೆ ವಾಮಾಚಾರ ಮಾಡಿಸಿ ಅವರು ರಕ್ತಕಾರಿ ಸಾಯುವಂತೆ ಮಾಡುವುದಾಗಿ ಹೆದರಿಸಿ ಹಲವು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದ. ದೌರ್ಜನ್ಯ ಸಹಿಸದೆ ಸಂತ್ರಸ್ತೆ ದೂರು ಕೊಟ್ಟಿದ್ದಾರೆ. ಈ ಮಧ್ಯೆ ಮೋಹನ್ ಕುಮಾರ್, ಸಂತ್ರಸ್ತೆಯು ಹಣಕ್ಕಾಗಿ ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿ ಕಗ್ಗಲಿಪುರ ಠಾಣೆಯಲ್ಲಿ ಪ್ರತಿ ದೂರು ದಾಖಲಿಸಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ರಾಜಧಾನಿ ಕುಣಿತ ಭಜನಾ ಸ್ಪರ್ಧೆಯ ಸಮಾರೋಪದಲ್ಲಿ ಮಾಣಿಲ ಸ್ವಾಮೀಜಿ

ಭಜನೆಯು ಭಕ್ತಿ ಪಂಥದ ಶಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಜನೆ ಎನ್ನುವುದು ಸ್ಪರ್ಧೆಯಲ್ಲ. ಭಜನೆ ಉತ್ಸಾಹದ ಪ್ರಭೆಗಾಗಿ ಇರುವುದು, ಭಕ್ತಿ ಪಂಥದ ಶಕ್ತಿಯನ್ನು ಪ್ರಭಾವಗೊಳಿಸಲು ಇರುವುದು ಎಂದು ಮಾಣಿಲ ಶ್ರೀಧಾಮದ ಮೋಹನದಾಸ ಪರಮಹಂಸ ಸ್ವಾಮೀಜಿ ಹೇಳಿದರು.

ರಾಜಧಾನಿ ಕುಣಿತ ಭಜನಾ ಪರಿಷತ್ ಭಾನುವಾರ ಹಮ್ಮಿಕೊಂಡಿದ್ದ ರಾಜಧಾನಿ ಕುಣಿತ ಭಜನಾ ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಭಜನಾ ಸಂಕೀರ್ತನೆಯು ಧರ್ಮಶಿಕ್ಷಣ. ಸಂಕೀರ್ತನೆ ಮೂಲಕ ಭಕ್ತಿ ಪಂಥಕ್ಕೆ ಶಕ್ತಿ ತುಂಬಬೇಕು. ಮುಂದಿನ ಪೀಳಿಗೆಯಲ್ಲಿ ಅದರ ಪ್ರಭಾವ ಬೆಳೆಯಬೇಕು ಎಂದು ಆಶಿಸಿದರು.

ಭಜನೆಯ ಶಕ್ತಿ ಏನು ಎಂಬುದು ಅರಿವಾಗಬೇಕಿದ್ದರೆ ಮಹಾರಾಷ್ಟ್ರದ ಪಂಡರಾಪುರಕ್ಕೆ ಆಷಾಢದ ಏಕಾದಶಿಯಂದು ಹೋಗಬೇಕು. ಅಲ್ಲಿ ಭಜನೆ ಮಾಡುವವರನ್ನು ದಾಸಸಂತರನ್ನಾಗಿ ನೋಡುತ್ತಾರೆ. ದೇವರನ್ನೇ, ವಿಠಲನನ್ನೇ ಅವರಲ್ಲಿ ಕಾಣುತ್ತಾರೆ ಎಂದು ವಿವರಿಸಿದರು.

ಭಜನೆಯಲ್ಲಿ ಭಾವನೆ ಇಲ್ಲದೇ ಇದ್ದರೆ ವ್ಯರ್ಥ. ಭಾವನಾತ್ಮಕವಾಗಿ ಇದ್ದಾಗ ಮಾತ್ರ ಆಂತರ್ಯದಿಂದ ಶಕ್ತಿ ಉದ್ದೀಪನವಾಗುತ್ತದೆ. ಭಜನಾ ಸಾಹಿತ್ಯವನ್ನು ಮನನ ಮಾಡಿಕೊಳ್ಳಬೇಕು. ಭಗವಂತ ಮತ್ತು ನೀವು ಕುಣಿಯುತ್ತಿದ್ದೀರಿ, ಭಗವಂತ ನಿಮ್ಮ ಜೊತೆಗೆ ಇದ್ದಾನೆ ಎಂಬ ಭಾವ ಇರಬೇಕು ಎಂದು ಹೇಳಿದರು.

ಭಾರತೀಯ ಜೈನ್ ಮಿಲನ್ ಕಾರ್ಯಾಧ್ಯಕ್ಷ ಡಿ. ಸುರೇಂದ್ರ ಕುಮಾರ್, ವಿಧಾನ ಪರಿಷತ್ ಸದಸ್ಯೆ ಭಾರತೀ ಶೆಟ್ಟಿ, ತುಳುಕೂಟದ ಅಧ್ಯಕ್ಷ ದಿನೇಶ್ ಹೆಗ್ಡೆ ಬಿ. ಉಪಸ್ಥಿತರಿದ್ದರು.



ತುಳುಕೂಟ ಬೆಂಗಳೂರು ಭಾನುವಾರ ನಗರದ ಬಂಟರ ಸಂಘದಲ್ಲಿ ಆಯೋಜಿಸಿದ್ದ ರಾಜಧಾನಿ ಭಜನೋತ್ಸವದ ಸಮಾರೋಪ ಸಮಾರಂಭದಲ್ಲಿ ಹಣತೆ ಹಿಡಿದು ಪ್ರಾರ್ಥಿಸಲಾಯಿತು ಪ್ರಜಾವಾಣಿ ಚಿತ್ರ

ಎಸ್‌ಐಆರ್ ವಿರುದ್ಧ ಹೋರಾಟದ ಎಚ್ಚರಿಕೆ

ಅರ್ಹ ಮತದಾರರನ್ನು ಪ್ರಜಾಸತ್ತಾತ್ಮಕ ವ್ಯವಸ್ಥೆಯಿಂದ ಹೊರಗಟ್ಟುವ ಸಂಚು: ಸಾಮಾಜಿಕ ಕಾರ್ಯಕರ್ತರ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್), ಅರ್ಹ ಮತದಾರರನ್ನು ಪ್ರಜಾಸತ್ತಾತ್ಮಕ ವ್ಯವಸ್ಥೆಯಿಂದ ಹೊರಗಟ್ಟುವ ಸಂಚು' ಎಂದು ನಿವೃತ್ತ ನ್ಯಾಯಮೂರ್ತಿ ಬಿ.ಸುದರ್ಶನ ರೆಡ್ಡಿ, ಅರ್ಥಶಾಸ್ತ್ರಜ್ಞ ಪರಕಾಲ ಪ್ರಭಾಕರ, ನಟ ಪ್ರಕಾಶ್ ರಾಜ್ ಸೇರಿ 300ಕ್ಕೂ ಹೆಚ್ಚು ಮಂದಿ ಜಂಟಿ ಹೇಳಿಕೆ ನೀಡಿದ್ದಾರೆ.

'ಎಸ್‌ಐಆರ್ ಪ್ರಕ್ರಿಯೆ ಪಾರದರ್ಶಕವಾಗಿಲ್ಲ. 10 ರಾಜ್ಯಗಳಲ್ಲಿ ಎಸ್‌ಐಆರ್ ಹೆಸರಿನಲ್ಲಿ 6 ಕೋಟಿಗೂ ಹೆಚ್ಚು ಮತದಾರರನ್ನು ಮತದಾನದ ಹಕ್ಕನ್ನು ಕಿತ್ತುಕೊಳ್ಳ ಲಾಗಿದೆ. ಹೀಗೆ ಮತದಾರರ ಪಟ್ಟಿಯಿಂದ ಹೊರಗುಳಿದವರ ಪೈಕಿ ಧಾರ್ಮಿಕ ಅಲ್ಪಸಂಖ್ಯಾತರು, ಆದಿವಾಸಿ- ಬುಡಕಟ್ಟು, ದಲಿತ, ವಲಸೆ ಕಾರ್ಮಿಕ ಮತ್ತು ಅಲೆಮಾರಿ ಸಮುದಾಯದವರ ಸಂಖ್ಯೆಯೇ ಹೆಚ್ಚು' ಎಂದು ವಿವರಿಸಿದ್ದಾರೆ.



'ಹೀಗೆ ಮತದಾನದ ಹಕ್ಕು ಕಳೆದು ಕೊಂಡವರೆಲ್ಲರೂ ಸಮಾಜದ ಅಂಚಿನ ಸಮುದಾಯ ಎಂಬುದು ಅತ್ಯಂತ ಕಳವಳಕಾರಿ ವಿಷಯ. ಇದು ದೇಶದ ವೈವಿಧ್ಯವನ್ನು ಹಾಳುಗೆಡವುದಲ್ಲದೆ, ಸಂವಿಧಾನದತ್ತವಾಗಿ ಬಂದಿರುವ ಮತಾಧಿಕಾರಕ್ಕೆ ಧಕ್ಕೆಯನ್ನುಂಟು ಮಾಡುತ್ತದೆ. ಚುನಾವಣಾ ಆಯೋಗವು ದೇಶದ ಜನರ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಆಯೋಗವು ರಾಜಕೀಯವಾಗಿ ಪಕ್ಷಪಾತಿಯಾದ ಸಂಸ್ಥೆ ಎಂಬುದು ಬಯಲಾಗಿದೆ' ಎಂದು ದೂರಿದ್ದಾರೆ.

'ನುಸುಳುಕೋರರನ್ನು ಪತ್ತೆ ಮಾಡಿ, ಮತದಾರರ ಪಟ್ಟಿಯಿಂದ ಅವರನ್ನು ಹೊರಗಿಡಲು ಎಸ್‌ಐಆರ್ ನಡೆಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ ಎಷ್ಟು ಮಂದಿ ನುಸುಳುಕೋರರನ್ನು ಗುರುತಿಸಲಾಗಿದೆ ಎಂಬ ದತ್ತಾಂಶ ಲಭ್ಯವಿಲ್ಲ. ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯಿಂದ ತೆಗೆದುಹಾಕಲಾದವರ ಪೈಕಿ, 35 ಲಕ್ಷ ಮತದಾರರ ಅರ್ಜಿಗಳನ್ನು ಪರಿಶೀಲಿಸುವಲ್ಲಿ ಚುನಾವಣಾ ಆಯೋಗ ವಿಫಲವಾಗಿದೆ. ಇದು ದೋಷ ಪೂರಿತ ಮತ್ತು ದುರುದ್ದೇಶಪೂರಿತ ಪ್ರಕ್ರಿಯೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಎಸ್‌ಐಆರ್ ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸಬೇಕು. ಈಗಾಗಲೇ ವಿವಿಧ ರಾಜ್ಯಗಳಲ್ಲಿ ನಡೆದಿರುವ ಎಸ್‌ಐಆರ್ ಪ್ರಕ್ರಿಯೆಯನ್ನು ಸಮಗ್ರ ಪರಿಶೀಲನೆಗೆ ಒಳಪಡಿಸಬೇಕು. ಪ್ರತಿ ಗ್ರಾಮಸಭೆ ಮತ್ತು ವಾರ್ಡ್ ಸಭೆಗಳಲ್ಲಿ ಕಟ್ಟುನಿಟ್ಟಿನ ಪರಿಶೀಲನೆ ಮತ್ತು ದೃಢೀಕರಣದ ವಿಧಾನಗಳನ್ನು ಅಳವಡಿಸಿಯೇ ಪಟ್ಟಿಯನ್ನು ಅಂತಿಮಗೊಳಿಸಬೇಕು. ಎಸ್‌ಐಆರ್‌ನಿಂದಾಗಿ ಮತದಾರರ ಪಟ್ಟಿಯಿಂದ ಹೊರಗುಳಿದವರ ಮತದಾನದ ಹಕ್ಕನ್ನು ಮರುಸ್ಥಾಪಿಸಬೇಕು. ಇಲ್ಲದೇ ಇದ್ದರೆ ದೇಶದಾದ್ಯಂತ ತೀವ್ರ ಹೋರಾಟ ನಡೆಸುತ್ತೇವೆ' ಎಂದು ಎಚ್ಚರಿಸಿದ್ದಾರೆ.

ಭಾರತ ಜೋಡೊ ಅಭಿಯಾನದ ಯೋಗೇಂದ್ರ ಯಾದವ್, ಪತ್ರಕರ್ತೆ ತೀಸ್ತಾ ಸೆತಲ್‌ವಾಡ್, ತುಷಾರ್ ಗಾಂಧಿ, ಜಿಗ್ನೇಶ್ ಮೇವಾನಿ, ತಾರಾರಾವ್ ಮತ್ತಿತರರು ಜಂಟಿ ಹೇಳಿಕೆ ಪತ್ರಕ್ಕೆ ಸಹಿ ಮಾಡಿದ್ದಾರೆ.

ಇತರ ಒತ್ತಾಯಗಳು

- ಈಗಿನ ಸ್ವರೂಪದಲ್ಲಿಯೇ ಎಸ್‌ಐಆರ್ ಅನ್ನು ಮುಂದುವರೆಸಬಾರದು
- ಎಸ್‌ಐಆರ್‌ನ ಸಾಂವಿಧಾನಿಕ ಮಾನ್ಯತೆ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿರುವ ಅರ್ಜಿಗಳ ವಿಚಾರಣೆ ಪೂರ್ಣಗೊಳ್ಳುವವರೆಗೆ ಎಸ್‌ಐಆರ್ ನಿಲ್ಲಿಸಬೇಕು
- ಗ್ರಾಮಸಭೆ ಮಟ್ಟದಲ್ಲಿ ಸಿದ್ಧಪಡಿಸಲಾದ ಮತದಾರರ ಪಟ್ಟಿಯನ್ನೇ ಅಂತಿಮಗೊಳಿಸಬೇಕು
- ಎಸ್‌ಐಆರ್‌ಗೆ ಸ್ಪಷ್ಟ ನಿಯಮಗಳನ್ನು ರೂಪಿಸಿ, ಸಂಪೂರ್ಣ ಪಾರದರ್ಶಕವಾಗಿ ನಡೆಸಬೇಕು

ರಾಜೇಗೌಡ ಶಾಸಕ ಸ್ಥಾನಕ್ಕೆ ಕುತ್ತು?

ಒಂದನೇ ಪುಟದಿಂದ...

ಎಣಿಕೆ ಪ್ರಕ್ರಿಯೆ ಮುಗಿದ ಬಳಿಕ ಮಾಹಿತಿ ನೀಡಿದ ಚುನಾವಣಾಧಿಕಾರಿ ಗೌರವಶೆಟ್ಟಿ, '2023ರ ಮತ ಎಣಿಕೆ ವೇಳೆ ಚಲಾವಣೆಯಾಗಿದ್ದ 1,822 ಅಂಚೆ ಮತಗಳ ಪೈಕಿ ಬಿಜೆಪಿ ಅಭ್ಯರ್ಥಿ ಜೀವರಾಜ್ ಅವರಿಗೆ 692 ಮತಗಳು, ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ. ರಾಜೇಗೌಡ ಅವರಿಗೆ 569 ಮತಗಳು ಲಭಿಸಿದ್ದವು. ಆದರೆ, ಶನಿವಾರ ನಡೆದ ಪರಿಶೀಲನೆ ಮತ್ತು ಮರು ಎಣಿಕೆಯ ಬಳಿಕ ಜೀವರಾಜ್ ಮತಗಳು 690 ಆಗಿದ್ದರೆ. ರಾಜೇಗೌಡ ಮತಗಳು 314ಕ್ಕೆ ಇಳಿದಿವೆ. ರಾಜೇಗೌಡ ಅವರಿಗೆ 255 ಮತಗಳು ಕಡಿಮೆಯಾಗಿವೆ' ಎಂದು ಹೇಳಿದರು.

'ನ್ಯಾಯಾಲಯದ ನಿರ್ದೇಶನದಂತೆ ಪರಿಶೀಲನೆ ಮತ್ತು ಮರುಎಣಿಕೆ ಪ್ರಕ್ರಿಯೆ ನಡೆಸಿ ಮತಪತ್ರಗಳನ್ನು ಮತ್ತೆ ಸ್ಟ್ರಾಂಗ್ ರೂಮಿನಲ್ಲಿ ಇರಿಸಿ ಸೀಲ್ ಮಾಡಲಾಗಿದೆ. ಮರು ಎಣಿಕೆಯ ನಂತರ ಕಂಡು ಬಂದ ಮತ ವ್ಯತ್ಯಾಸ ಕುರಿತು ಆಯೋಗಕ್ಕೆ ವರದಿ ಸಲ್ಲಿಸಲಾಗಿದೆ' ಎಂದು ವಿವರಿಸಿದರು.

ಈ ವೇಳೆ ಮಾಧ್ಯಮಗಳ ಜತೆ ಮಾತನಾಡಿದ ಜೀವರಾಜ್, 'ಮರು ಎಣಿಕೆಯಿಂದ ರಾಜೇಗೌಡರ ಮತಗಳು ಕಡಿಮೆಯಾಗಿದ್ದು, ನನಗೆ ಹೆಚ್ಚು ಮತಗಳು ಬಂದಿವೆ. ಚುನಾವಣಾಧಿಕಾರಿ ಫಲಿತಾಂಶ ಘೋಷಣೆ ಮಾಡಿ ಪ್ರಮಾಣಪತ್ರ ನೀಡುತ್ತಾರೆ ಎಂದು ನಿರೀಕ್ಷೆ ಮಾಡಿದ್ದೆ. ಆದರೆ, ನೀಡಲಿಲ್ಲ. ನನಗೆ ಹೆಚ್ಚು ಮತಗಳು ಬಂದಿವೆ. ಅಧಿಕಾರಿಗಳು ಏನು ಕ್ರಮ ಕೈಗೊಳ್ಳುತ್ತಾರೆ ಎಂದು ಗೊತ್ತಿಲ್ಲ, ಕಾಯುತ್ತೇನೆ' ಎಂದರು.

ಎಣಿಕೆ ಬಳಿಕ ಪ್ರತಿಕ್ರಿಯಿಸಿದ ರಾಜೇಗೌಡ, 'ನನ್ನ ಪರ ಚಲಾವಣೆಯಾಗಿದ್ದ ಮತಪತ್ರಗಳ ಮೇಲೆ ಹೆಚ್ಚುವರಿ ಗುರುತುಗಳಿವೆ. ಬೇರೆಯವರ ಹೆಸರಿನ ಮುಂದೆ ಕೂಡ ಗೆರೆ ಎಳೆಯಲಾಗಿದೆ. ಇದು ಹೇಗೆ ಎಂಬುದು ಗೊತ್ತಿಲ್ಲ. 2023ರ ಮತಎಣಿಕೆಯ ವೇಳೆ ಎಲ್ಲ ಪಕ್ಷಗಳ ಏಜೆಂಟರ ಸಮ್ಮುಖದಲ್ಲಿ ಈ ಮತಪತ್ರಗಳನ್ನು ಮಾನ್ಯ ಎಂದು ಪರಿಗಣಿಸಲಾಗಿತ್ತು. ಈಗ ಅದೇ ಮತಗಳನ್ನು ಅಮಾನ್ಯ ಎಂದು ಘೋಷಣೆ ಮಾಡಿರುವುದರಿಂದ ನನ್ನ ಮತಗಳ ಸಂಖ್ಯೆ ಕಡಿಮೆಯಾಗಿದೆ' ಎಂದರು.

ರಾಜೇಗೌಡ ಅವರ ಪರವಾಗಿ ಎಣಿಕೆ ಏಜೆಂಟ್ ಆಗಿದ್ದ ಸುಧೀರ್‌ಕುಮಾರ್ ಮುರೊಳ್ಳಿ ಮಾತನಾಡಿ, '2023ರ ಮತ ಎಣಿಕೆಯ ವೇಳೆ ಆಗಿನ ಚುನಾವಣಾಧಿಕಾರಿ ಎಲ್ಲ ಪಕ್ಷಗಳ ಏಜೆಂಟರ ಸಮ್ಮುಖದಲ್ಲೇ ಅಂಚೆ ಮತಗಳನ್ನು ಎಣಿಸಿದ್ದರು. ಆದರೆ, ಈಗ ರಾಜೇಗೌಡ ಅವರಿಗೆ ಬಂದ ಮತಪತ್ರಗಳ ಕಟ್ಟುಗಳಷ್ಟೇ ಅಮಾನ್ಯ ಎಂದು ಪರಿಗಣಿಸಲಾಗಿದೆ. 2023ರ ಎಣಿಕೆಯಲ್ಲಿ ಇವೆಲ್ಲವೂ ಮಾನ್ಯ ಮತಗಳಾಗಿದ್ದವು. ಈಗ ಮತಪತ್ರಗಳಲ್ಲಿ ಮತ್ತೊಬ್ಬ ಅಭ್ಯರ್ಥಿಗೂ ಗೆರೆ ಎಳೆದಿರುವುದು ಕಾಣಿಸುತ್ತಿದೆ' ಎಂದರು.

2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ 201 ಮತಗಳಿಂದ ಜಯ ಸಾಧಿಸಿದ್ದರು. 1,822 ಅಂಚೆ ಮತಗಳಲ್ಲಿ 279 ಮತಗಳು ತಿರಸ್ಕೃತಗೊಂಡಿದ್ದವು. ಮರು ಮತ ಎಣಿಕೆ ಕೋರಿ ಬಿಜೆಪಿ ಪರಾಜಿತ ಅಭ್ಯರ್ಥಿ ಡಿ.ಎನ್. ಜೀವರಾಜ್ ಹೈಕೋರ್ಟ್ ಮೊರೆ ಹೋಗಿದ್ದರು. ಮರು ಎಣಿಕೆಗೆ ಹೈಕೋರ್ಟ್ ಆದೇಶಿಸಿತ್ತು.

ಎಣಿಕೆಯಲ್ಲಿ ಗೊಂದಲ –ಗೃಹ ಸಚಿವ

ಒಂದನೇ ಪುಟದಿಂದ...

ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು, 'ಮತ ಎಣಿಕೆ ಸಮಯದಲ್ಲಿ ಜೀವರಾಜ್ ಮತ್ತು ರಾಜೇಗೌಡ ಕಡೆಯವರು ಕೆಲವು ಕಡೆ ಸಹಿ ಮಾಡಿದ್ದಾರೆ. ಕೆಲವೆಡೆ ಮಾಡಿಲ್ಲ. ಇದರಿಂದ ಗೊಂದಲ ಸೃಷ್ಟಿಯಾಗಿದೆ. ಅಧಿಕಾರಿಗಳು ವರದಿ ಕಳುಹಿಸಿದ್ದು, ಆಯೋಗದಿಂದ ಫಲಿತಾಂಶ ಘೋಷಿಸಲಾಗುತ್ತದೆ' ಎಂದರು.

ನೋಟಿಸ್

ಒಂದನೇ ಪುಟದಿಂದ...

ಈ ನಡುವೆ ಮತ ಪತ್ರಗಳನ್ನು ತಿದ್ದಿರುವ ಆರೋಪದಲ್ಲಿ ನ್ಯಾಯಾಲಯದಲ್ಲಿ ವಾದ ಮಂಡಿಸಿ ಫಲಿತಾಂಶ ತಡೆ ಹಿಡಿಯಲು ಕಾಂಗ್ರೆಸ್ ಮುಖಂಡರು ಪ್ರಯತ್ನ ನಡೆಸಿದ್ದಾರೆ.

ಚುನಾವಣಾಧಿಕಾರಿ ಮೇಲೆ ಕಾಂಗ್ರೆಸ್ ಒತ್ತಡ: ಅಶೋಕ

ಬೆಂಗಳೂರು: 'ಶೃಂಗೇರಿ ವಿಧಾನಸಭಾ ಕ್ಷೇತ್ರದ ಚುನಾವಣಾ ಫಲಿತಾಂಶವನ್ನು ಪ್ರಕಟಿಸದಂತೆ ಕಾಂಗ್ರೆಸ್ ಸರ್ಕಾರ ಚುನಾವಣಾಧಿಕಾರಿ ಮೇಲೆ ಒತ್ತಡ ಹೇರಿದೆ. ಚುನಾವಣಾಧಿಕಾರಿಯು ಕೂಡಲೇ ಫಲಿತಾಂಶ ಪ್ರಕಟಿಸಿ ಹೈಕೋರ್ಟ್ ಆದೇಶ ಪಾಲಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಗ್ರಹಿಸಿದರು.

'ಅಂಚೆ ಮತಗಳ ಎಣಿಕೆಯಲ್ಲಿ ಯಾರಿಗೆ ಹೆಚ್ಚು ಮತ ಬರುತ್ತದೆಯೋ, ಅದನ್ನು ಘೋಷಿಸಬೇಕೆಂದು ಹೈಕೋರ್ಟ್ ಆದೇಶದಲ್ಲಿ ಸೂಚಿಸಲಾಗಿದೆ. ಈ ಬಗ್ಗೆ ಚುನಾವಣಾ ಆಯೋಗವನ್ನು ಪ್ರಶ್ನಿಸಿದಾಗ, ಹೈಕೋರ್ಟ್‌ಗೆ ಮಾಹಿತಿ ನೀಡುತ್ತೇವೆ ಎಂದು ಸಬೂಬು ಹೇಳುತ್ತಿದೆ. ಕಾಂಗ್ರೆಸ್ ಸರ್ಕಾರ ಚುನಾವಣಾಧಿಕಾರಿಯ ಮೇಲೆ ಒತ್ತಡ ಹೇರಿ, ಫಲಿತಾಂಶ ತಡೆಹಿಡಿದಿದೆ. ಈ ಮೂಲಕ ಕೋರ್ಟ್ ಆದೇಶ ಉಲ್ಲಂಘಿಸಲಾಗಿದೆ' ಎಂದರು.

> ಕಾಂಗ್ರೆಸ್ ಮುಖಂಡರು ದೂರು ನೀಡಿದ್ದಾರೆ. ಕಾನೂನು ಸಲಹೆ ಪಡೆಯಲಾಗಿದ್ದು, ಇಂಥ ಪ್ರಕರಣಗಳಲ್ಲಿ ಚುನಾವಣಾಧಿಕಾರಿ ದೂರು ನೀಡಿದರೆ ಎಫ್‌ಐಆರ್ ದಾಖಲಿಸಲು ಸಾಧ್ಯ
> **ಜಿತೇಂದ್ರಕುಮಾರ್ ದಯಾಮ,** ಎಸ್.ಪಿ

> ಬ್ಯಾಲೆಟ್ ಪೇಪರ್ ಕಳ್ಳತನ ಮಾಡಿದ್ದ ಕಾಂಗ್ರೆಸ್‌ಗೆ ಇವಿಎಂ ಬಗ್ಗೆ ಮಾತನಾಡಲು ನೈತಿಕ ಹಕ್ಕಿಲ್ಲ. ಕಾಂಗ್ರೆಸ್ ವಂಚನೆ ವಿರುದ್ಧ ಬಿಜೆಪಿಯ ಜೀವರಾಜ್ ಹೋರಾಟ ನಡೆಸಿದ್ದರು.
> **ಶೋಭಾ ಕರಂದ್ಲಾಜೆ,** ಕೇಂದ್ರ ಸಚಿವೆ

> ಶೃಂಗೇರಿ ಕ್ಷೇತ್ರದ ರೀತಿಯಲ್ಲೇ ನನಗೂ 2018ರಲ್ಲಿ ಬಾದಾಮಿ ಕ್ಷೇತ್ರದಲ್ಲಿ ಮೋಸವಾಗಿತ್ತು. ಆಗ ನ್ಯಾಯಾಲಯದ ಮೊರೆ ಹೋಗಲು ಸಾಧ್ಯವಾಗಲಿಲ್ಲ
> **ಬಿ. ಶ್ರೀರಾಮುಲು,** ಮಾಜಿ ಸಚಿವ

ಬಾಗಲಕೋಟೆ, ದಾವಣಗೆರೆ ದಕ್ಷಿಣ ಕ್ಷೇತ್ರ

ಉಪ ಚುನಾವಣೆ ಮತ ಎಣಿಕೆ ಇಂದು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ/ದಾವಣಗೆರೆ: ರಾಜ್ಯದ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಮತಎಣಿಕೆ ಪ್ರಕ್ರಿಯೆ ಸೋಮವಾರ (ಮೇ 4) ನಡೆಯಲಿದ್ದು, ಮಧ್ಯಾಹ್ನದ ವೇಳೆಗೆ ಫಲಿತಾಂಶ ಪ್ರಕಟವಾಗುವ ನಿರೀಕ್ಷೆ ಇದೆ.

ಶಾಸಕರಾಗಿದ್ದ ಎಚ್.ವೈ. ಮೇಟಿ ಅವರ ನಿಧನದಿಂದಾಗಿ ಬಾಗಲಕೋಟೆ ಕ್ಷೇತ್ರ ಹಾಗೂ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದಾಗಿ ದಾವಣಗೆರೆ ದಕ್ಷಿಣ ಕ್ಷೇತ್ರವು ತೆರವಾಗಿತ್ತು. ಏಪ್ರಿಲ್ 9ರಂದು ಉಭಯ ಕ್ಷೇತ್ರಗಳಲ್ಲಿ ಮತದಾನ ನಡೆದಿತ್ತು.

ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಬೆಳಿಗ್ಗೆ 8ಕ್ಕೆ ಎಣಿಕೆ ಕಾರ್ಯ ಆರಂಭವಾಗಲಿದೆ. ಮತಎಣಿಕೆಗೆ 14 ಟೇಬಲ್‌ಗಳನ್ನು ವ್ಯವಸ್ಥೆ ಮಾಡಲಾಗಿದೆ. 23 ಸುತ್ತಗಳಲ್ಲಿ ಎಣಿಕೆ ನಡೆಯಲಿದೆ. 80 ವರ್ಷ ಮೇಲ್ಪಟ್ಟ ಹಿರಿಯ ಮತದಾರರು, ಅಂಚೆ ಮತ ಪತ್ರಗಳ ಎಣಿಕೆಗೆ ಪ್ರತ್ಯೇಕ ಟೇಬಲ್ ವ್ಯವಸ್ಥೆ ಮಾಡಲಾಗಿದೆ.

ಕಾಂಗ್ರೆಸ್‌ನಿಂದ ಉಮೇಶ ಮೇಟಿ, ಬಿಜೆಪಿಯಿಂದ ವೀರಣ್ಣ ಚರಂತಿಮಠ ಸ್ಪರ್ಧಿಸಿದ್ದರು. ಉಳಿದಂತೆ ಏಳು ಅಭ್ಯರ್ಥಿಗಳು ಕಣದಲ್ಲಿದ್ದರು. ಉಪ ಚುನಾವಣೆಯಲ್ಲಿ ಶೇ68.62ರಷ್ಟು ಮತದಾನವಾಗಿದ್ದು, 2,59,797 ಮತದಾರರಲ್ಲಿ 1,78,273 ಮಂದಿ ಹಕ್ಕು ಚಲಾಯಿಸಿದ್ದರು.

ದಾವಣಗೆರೆ ವರದಿ: ದಾವಣಗೆರೆ ದಕ್ಷಿಣ ಕ್ಷೇತ್ರದ ಮತ ಎಣಿಕೆ ಪ್ರಕ್ರಿಯೆಯು ನಗರದ ಡಿಆರ್‌ಆರ್ ಕಾಲೇಜಿನಲ್ಲಿ ನಡೆಯಲಿದೆ.

ಒಟ್ಟು 14 ಟೇಬಲ್‌ಗಳನ್ನು ಎಣಿಕೆ ಕಾರ್ಯಕ್ಕಾಗಿ ವ್ಯವಸ್ಥೆ ಮಾಡಿದ್ದು, 21 ಸುತ್ತುಗಳಲ್ಲಿ ಈ ಪ್ರಕ್ರಿಯೆ ನಡೆಯಲಿದೆ. ಚುನಾವಣಾ ಸಿಬ್ಬಂದಿ, ಅಭ್ಯರ್ಥಿ ಹಾಗೂ ಏಜೆಂಟರಿಗೆ ಇದೇ ಮೊದಲ ಬಾರಿಗೆ 'ಕ್ಯೂಆರ್ ಕೋಡ್' ಆಧಾರಿತ ಗುರುತಿನ ಚೀಟಿಗಳನ್ನು ನೀಡಲಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಹಾಗೂ ಬಿಜೆಪಿ ಉಮೇದುವಾರ ಟಿ. ಶ್ರೀನಿವಾಸ ದಾಸಕರಿಯಪ್ಪ ಸೇರಿ 25 ಹುರಿಯಾಳುಗಳ ಕಣದಲ್ಲಿದ್ದಾರೆ.

ಕ್ಷೇತ್ರದ ಒಟ್ಟು 2,31,072 ಮತದಾರರಲ್ಲಿ 1,58,131 ಮತದಾರರು ಹಕ್ಕು ಚಲಾವಣೆ ಮಾಡಿದ್ದು, ಶೇ 68.43ರಷ್ಟು ಮತದಾನವಾಗಿದೆ.

ಬಂಗಾಳ ಅಂಗಳದಲಿ ಗೋಲು ಯಾರಿಗೆ?

ಒಂದನೇ ಪುಟದಿಂದ...

ತಮಿಳುನಾಡಿನಲ್ಲಿ ಡಿಎಂಕೆಯನ್ನು ಅಧಿಕಾರದಿಂದ ಕೆಳಗಿಳಿಸಲು ಎಐಎಡಿಎಂಕೆ ನೇತೃತ್ವದ ಎನ್‌ಡಿಎ, ನಟ ವಿಜಯ ಅವರ ನೂತನ ಪಕ್ಷ ಟಿವಿಕೆ ಸೇರಿದಂತೆ ವಿಪಕ್ಷಗಳು ಬೆವರಿಳಿಸಿವೆ. ಡಿಎಂಕೆ ಮತ್ತೆ ವಿಜಯಶಾಲಿಯಾಗಲಿದೆಯೇ? ಪ್ರತಿಪಕ್ಷಗಳ ಶ್ರಮಕ್ಕೆ ಮತದಾರ ಒಪ್ಪಿಗೆಯ ರುಜು ಹಾಕಿ ಅವರನ್ನು ಅಧಿಕಾರಕ್ಕೇರಿಸುವನೇ ಎಂಬುದು ಕೂಡ ನಿರ್ಧಾರವಾಗಲಿದೆ.

ದಕ್ಷಿಣದ ಮತ್ತೊಂದು ಪ್ರಮುಖ ರಾಜ್ಯವಾದ ಕೇರಳದಲ್ಲಿ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಹಾಗೂ ಕಾಂಗ್ರೆಸ್ ನೇತೃತ್ವದ ಯುಡಿಎಫ್ ನಡುವೆ ಜಿದ್ದಾಜಿದ್ದಿ ಕಂಡುಬಂದಿತ್ತು.

ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೂರನೇ ಬಾರಿಗೆ ಗೆಲ್ಲುವ ಮೂಲಕ ಹ್ಯಾಟ್ರಿಕ್ ಸಾಧನೆ ದಾಖಲಿಸುವುದೇ ಅಥವಾ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೇರಲಿದೆಯೇ ಎಂಬುದು ಕೂಡ ನಿಚ್ಚಳವಾಗಲಿದೆ.

ಎಲ್ಲರ ಚಿತ್ತ ಬಂಗಾಳದತ್ತ: 294 ಸದಸ್ಯ ಬಲದ ಪಶ್ಚಿಮ ಬಂಗಾಳದಲ್ಲಿ ಎರಡು ಹಂತಗಳಲ್ಲಿ ಮತದಾನವಾಗಿತ್ತು. ಒಟ್ಟಾರೆ ಮತದಾನ ಪ್ರಮಾಣ ಶೇ 92.47ರಷ್ಟು ದಾಖಲಾಗಿದೆ. ಇದು ಸ್ವಾತಂತ್ರ್ಯ ನಂತರ ರಾಜ್ಯದಲ್ಲಿ ದಾಖಲಾಗಿರುವ ಅತ್ಯಂತ ಗರಿಷ್ಠ ಪ್ರಮಾಣದ ಮತದಾನವಾಗಿದೆ.

ಪಶ್ಚಿಮ ಬಂಗಾಳದಲ್ಲಿ 21 ವರ್ಷಗಳ ಬಳಿಕ ಎಸ್‌ಐಆರ್ ನಡೆಸಲಾಗಿದೆ. ಈ ಪ್ರಕ್ರಿಯೆ ವಿವಾದಕ್ಕೆ ಒಳಗಾಗಿತ್ತು. ವ್ಯಾಪಕ ವಿರೋಧವೂ ವ್ಯಕ್ತವಾಗಿತ್ತು. ಎಸ್‌ಐಆರ್ ಬಳಿಕ 90 ಲಕ್ಷಕ್ಕೂ ಅಧಿಕ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿತ್ತು.

ಚಹಾ ತೋಟಗಳ ನಾಡಿನ ಚುಕ್ಕಾಣಿ ಯಾರಿಗೆ?: ಚಹಾ ತೋಟಗಳ ನಾಡು ಅಥವಾ ಚಹಾದ ರಾಜಧಾನಿ ಎಂದೇ ಖ್ಯಾತಿ ಪಡೆದಿರುವ ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಹಾಗೂ ಕಾಂಗ್ರೆಸ್ ನೇತೃತ್ವದ ವಿಪಕ್ಷಗಳ ಗುಂಪಿನ ನಡುವೆ ಭಾರಿ ಹಣಾಹಣಿ ಕಂಡುಬಂದಿತ್ತು.

ಮತ ಎಣಿಕೆ ಕೇಂದ್ರಗಳಿ ವ್ಯಾಪಕ ಭದ್ರತೆ

ಬೆಳಿಗ್ಗೆ 8ಕ್ಕೆ ಅಂಚೆ ಮತಪತ್ರಗಳ ಎಣಿಕೆ ನಡೆಯಲಿದ್ದು, 8.30ಕ್ಕೆ ವಿದ್ಯುನ್ಮಾನ ಮತಯಂತ್ರಗಳಲ್ಲಿ (ಇವಿಎಂ) ದಾಖಲಾಗಿರುವ ಮತಗಳ ಎಣಿಕೆ ನಡೆಯಲಿದೆ. ಮತದಾನೋತ್ತರ ಸಮೀಕ್ಷೆಗಳು ನುಡಿದಿರುವ ಭವಿಷ್ಯ ಎಷ್ಟರ ಮಟ್ಟಿಗೆ ನಿಜವಾಗಲಿದೆ ಎಂಬುದು ಸೋಮವಾರ ಸಂಜೆ ವೇಳೆಗೆ ನಿಚ್ಚಳವಾಗಲಿದೆ.

ಮತ ಎಣಿಕೆ ಕೇಂದ್ರಗಳಿಗೆ ಬಿಗಿ ಭದ್ರತೆ ಕಲ್ಪಿಸಲಾಗಿದೆ. ಎಲ್ಲ ರಾಜ್ಯಗಳ ಮತ ಎಣಿಕೆಗೆ ನಿಯೋಜನೆಗೊಂಡಿರುವ ಸಿಬ್ಬಂದಿಗೆ ಕ್ಯೂಆರ್ ಕೋಡ್ ಆಧಾರಿತ ಭಾವಚಿತ್ರವಿರುವ ಗುರುತಿನ ಚೀಟಿಗಳನ್ನು ಚುನಾವಣಾ ಆಯೋಗ ನೀಡಿದೆ. ಚುನಾವಣಾ ಅಧಿಕಾರಿ ಹೊರತುಪಡಿಸಿ ಉಳಿದವರು ಈ ಕೇಂದ್ರಗಳಿಗೆ ಮೊಬೈಲ್ ಫೋನ್ ತೆಗೆದುಕೊಂಡು ಹೋಗುವುದನ್ನು ನಿರ್ಬಂಧಿಸಲಾಗಿದೆ.

ಪಶ್ಚಿಮ ಬಂಗಾಳದಲ್ಲಿ 77 ಮತ ಎಣಿಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಅಸ್ಸಾಂ-40, ತಮಿಳುನಾಡು-62, ಕೇರಳದಲ್ಲಿ 140 ಕೇಂದ್ರಗಳನ್ನು ಸ್ಥಾಪಿಸಲಾಗಿದೆ



ಅಸ್ಸಾಂನ ಸೋನಿತಪುರ ಜಿಲ್ಲೆಯ ತೇಜ್‌ಪುರದ ಮತ ಎಣಿಕೆ ಕೇಂದ್ರವೊಂದರಲ್ಲಿ ಚುನಾವಣಾ ಆಯೋಗದ ಅಧಿಕಾರಿಗಳು ಮತ ಎಣಿಕೆ ಕಾರ್ಯದ ಸಿದ್ಧತೆಯನ್ನು ಭಾನುವಾರ ಪರಿಶೀಲಿಸಿದರು —ಪಿಟಿಐ ಚಿತ್ರ

ಬಿರಿಯಾನಿ, ಲಡ್ಡು ತಯಾರಿ

ತಿರುವನಂತಪುರ(ಪಿಟಿಐ): ಕೇರಳ ವಿಧಾನಸಭಾ ಚುನಾವಣಾ ಫಲಿತಾಂಶ ಸೋಮವಾರ ಪ್ರಕಟವಾಗಲಿದ್ದು, ರಾಜ್ಯದಾದ್ಯಂತ ವಿವಿಧ ರಾಜಕೀಯ ಪಕ್ಷಗಳ ಕಾರ್ಯಕರ್ತರು ಸಂಭ್ರಮಾಚರಣೆಗೆ ಸಿದ್ಧತೆಗಳನ್ನು ಆರಂಭಿಸಿದ್ದಾರೆ.

ಮಲಪ್ಪುರಂ ಜಿಲ್ಲೆಯ ಪಾಂಡಿಕ್ಕಾಡ್‌ನಲ್ಲಿ, ಕಾಂಗ್ರೆಸ್ ಮತ್ತು ಯುಡಿಎಫ್ ಕಾರ್ಯಕರ್ತರು ಗೆಲುವಿನ ನಿರೀಕ್ಷೆಯಲ್ಲಿದ್ದು, ಸಂಭ್ರಮಾಚರಣೆಗಾಗಿ ಸುಮಾರು 5,000 ಜನರಿಗೆ ಬಿರಿಯಾನಿ ವಿತರಿಸಲು ಸಿದ್ಧತೆಗಳನ್ನು ಕೈಗೊಂಡಿದ್ದಾರೆ. ಬಿರಿಯಾನಿ ತಯಾರಿಕೆ ಮತ್ತು ವಿತರಣೆಗಾಗಿ ಪಟ್ಟಣದಲ್ಲಿ ದೊಡ್ಡ ದೊಡ್ಡ ಟೆಂಟ್ ಹಾಕಿದ್ದಾರೆ. 'ಊಟದ ಜೊತೆಗೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಸಹ ಆಯೋಜಿಸಲಾಗುತ್ತಿದೆ' ಎಂದು ಕಾಂಗ್ರೆಸ್ ನಾಯಕರೊಬ್ಬರು ತಿಳಿಸಿದರು.

'10 ವರ್ಷಗಳ ಎಲ್‌ಡಿಎಫ್ ಆಳ್ವಿಕೆಯ ಅಂತ್ಯವನ್ನು ಸಂಭ್ರಮಿಸುತ್ತೇವೆ. ಈ ಸಂಭ್ರಮಾಚರಣೆಗೆ ಸಿಪಿಎಂ ಕಾರ್ಯಕರ್ತರು ಸೇರಿದಂತೆ ಎಲ್ಲರನ್ನೂ ಸ್ವಾಗತಿಸುತ್ತೇವೆ' ಎಂದು ಕಾಂಗ್ರೆಸ್ ಕಾರ್ಯಕರ್ತರೊಬ್ಬರು ತಿಳಿಸಿದರು.

ಕೊಚ್ಚಿಯಲ್ಲಿ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆಗೆ ಸಿದ್ಧತೆ ನಡೆಸುತ್ತಿದ್ದು, ಲಡ್ಡುಗಳನ್ನು ತಯಾರಿಸಿ ಕೊಡುವಂತೆ ಬೇಡಿಕೆ ಸಲ್ಲಿಸಿದ್ದಾರೆ. ಪ್ರಸ್ತುತ ಕೇರಳ ವಿಧಾನಸಭೆಯಲ್ಲಿ ಬಿಜೆಪಿ ಮತ್ತು ಎನ್‌ಡಿಎ ಮಿತ್ರ ಪಕ್ಷಗಳು ಶಾಸಕರಿಲ್ಲ. ಆದರೆ, ನಾಯಕರು ತಮ್ಮ ಪಕ್ಷ ಖಾತೆ ತೆರೆಯಲಿದೆ ಎಂಬ ವಿಶ್ವಾಸದಲ್ಲಿದ್ದಾರೆ.

'₹1 ಕೋಟಿ ಬೆಟ್ಟಿಂಗ್ ಕಟ್ಟಿ'

ಕೋಟಯಂ (ಕೇರಳ): 'ಕೇರಳದ ಪೂಂಜಾರ್ ವಿಧಾನ ಸಭಾ ಕ್ಷೇತ್ರದಿಂದ ಭರ್ಜರಿ ಗೆಲುವು ಸಾಧಿಸುವ ವಿಶ್ವಾಸವಿದೆ' ಎಂದು ಹಿರಿಯ ರಾಜಕಾರಣಿ ಮತ್ತು ಬಿಜೆಪಿ ಅಭ್ಯರ್ಥಿ ಪಿ.ಸಿ. ಜಾರ್ಜ್ ಭಾನುವಾರ ಹೇಳಿದ್ದಾರೆ.

'ಈ ಬಾರಿ ಬಹುಮತದಿಂದ ಗೆಲ್ಲುತ್ತೇನೆ. ಈ ಬಗ್ಗೆ ಯಾರಿಗಾದರೂ ಸಂದೇಹವಿದ್ದರೆ, ₹1 ಕೋಟಿ ಬೆಟ್ಟಿಂಗ್ ಕಟ್ಟಬಹುದು' ಎಂದು ಅವರು ತಿಳಿಸಿದ್ದಾರೆ. 'ಪಾಲ ಕ್ಷೇತ್ರದಿಂದ ಸ್ಪರ್ಧಿಸಿರುವ ತಮ್ಮ ಪುತ್ರ ಶೋನೆ ಜಾರ್ಜ್ ಕೂಡ ಗೆಲ್ಲುವ ವಿಶ್ವಾಸವಿದೆ' ಎಂದರು.

ತಮಿಳುನಾಡು: ಕುತೂಹಲ ಕೆರಳಿಸಿದ್ದ ಸ್ಪರ್ಧಾಕಣ

ಮತ್ತೊಮ್ಮೆ ಅಧಿಕಾರದ ಚುಕ್ಕಾಣಿ ಹಿಡಿಯಲು ಆಡಳಿತಾರೂಢ ಡಿಎಂಕೆ ನಡೆಸಿದ ಹೋರಾಟಕ್ಕೆ ಎಐಎಡಿಎಂಕೆ ನೇತೃತ್ವದ ಎನ್‌ಡಿಎ ಪ್ರತಿರೋಧ ಒಡ್ಡಿತ್ತು. ನಟ ವಿಜಯ್ ಅವರ ನೂತನ ಪಕ್ಷ ಟಿವಿಕೆ, ತಮಿಳು ರಾಷ್ಟ್ರವಾದಿ ಸೀಮನ್ ಅವರ ಎನ್‌ಟಿಕೆ ಪಕ್ಷದ ಸ್ಪರ್ಧೆಯಿಂದಾಗಿ ಚುನಾವಣಾ ಕಣ ರಂಗೇರಿತ್ತು.

ದಾಖಲೆ ಸಂಖ್ಯೆಯ 443 ಮಹಿಳೆಯರು ಸ್ಪರ್ಧಿಸುವ ಮೂಲಕ ಗಮನ ಸೆಳೆದಿದ್ದ ತಮಿಳುನಾಡು ವಿಧಾನಸಭೆಗೆ ಏಪ್ರಿಲ್ 23ರಂದು ಒಂದೇ ಹಂತದಲ್ಲಿ ಮತದಾನ ನಡೆದಿತ್ತು.

1991ರಲ್ಲಿ 32 ಮಹಿಳೆಯರು ವಿಧಾನಸಭೆಗೆ ಆಯ್ಕೆಯಾಗಿದ್ದರು. 1996ರಲ್ಲಿ ಈ ಸಂಖ್ಯೆ 9ಕ್ಕೆ ಇಳಿದಿತ್ತು. 35 ವರ್ಷಗಳ ಬಳಿಕ ವಿಧಾನಸಭೆಯಲ್ಲಿ ಮಹಿಳೆಯರ ಸಂಖ್ಯೆ ಮತ್ತೆ ಹೆಚ್ಚಲಿದೆಯೇ ಎಂಬ ಪ್ರಶ್ನೆಗೆ ಸೋಮವಾರ ಉತ್ತರ ಸಿಗಲಿದೆ.

ಸುದ್ದಿ 2 ನಿಮಿಷ

ಮಳೆ: 17 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಣೆ

ಬೆಂಗಳೂರು: ರಾಜ್ಯದ ಕೆಲವೆಡೆ ಮುಂದಿನ ಒಂದು ವಾರ ಸಾಧಾರಣ ಮಳೆಯಾಗುವ ಸಾಧ್ಯತೆ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಬೆಂಗಳೂರು ಸೇರಿ 17 ಜಿಲ್ಲೆಗಳಿಗೆ ಸೋಮವಾರದಿಂದ ನಾಲ್ಕು ದಿನಗಳ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ದಕ್ಷಿಣ ಒಳನಾಡಿನ ಬಳ್ಳಾರಿ, ವಿಜಯನಗರ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ಹಾಸನ, ಕೊಡಗು, ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಒಂದು ಅಥವಾ ಎರಡು ಸ್ಥಳಗಳಲ್ಲಿ ಭಾರಿ ಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಬೀದರ್, ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಯ ಒಂದು ಅಥವಾ ಎರಡು ಸ್ಥಳದಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ. ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ.



ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಒಂದೆರಡು ಸ್ಥಳದಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಮಂಗಳವಾರದಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿಯೂ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

'ಅರ್ಜುನ'ನ ಸ್ಮಾರಕ 6ರಂದು ಉದ್ಘಾಟನೆ– ಖಂಡ್ರೆ

ಬೆಂಗಳೂರು: 'ಹಾಸನ ಜಿಲ್ಲೆಯ ಯಸಳೂರು ವಲಯದಲ್ಲಿ 2023ರ ಡಿ. 4 ರಂದು ಆನೆ ಸೆರೆ ಕಾರ್ಯಾಚರಣೆ ವೇಳೆ ವೀರಾವೇಶದಿಂದ ಹೋರಾಡಿ ಮೃತಪಟ್ಟ ಅರ್ಜುನ ಆನೆಯ ಸಮಾಧಿ ಸ್ಥಳದಲ್ಲಿ ನಿರ್ಮಿಸಿರುವ ಸ್ಮಾರಕವನ್ನು ಇದೇ 6 ರಂದು ಉದ್ಘಾಟಿಸಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

'ದಸರಾ ಮಹೋತ್ಸವದಲ್ಲಿ ಎಂಟು ಬಾರಿ ಚಿನ್ನದ ಅಂಬಾರಿ ಹೊತ್ತು ಗಾಂಭೀರ್ಯದಿಂದ ಹೆಜ್ಜೆ ಹಾಕಿ, ಜನರ ಪ್ರೀತಿಗೆ ಪಾತ್ರನಾಗಿದ್ದ ಅರ್ಜುನ ಆನೆಯ ಸಾವು ಇಲಾಖೆಗೆ ದೊಡ್ಡ ನಷ್ಟವಾಗಿದ್ದು, ಸಮಾಧಿ ಸ್ಥಳದಲ್ಲಿ ಮತ್ತು ನಾಗರಹೊಳೆಯ ಬಳ್ಳೆಯಲ್ಲಿ ಸ್ಮಾರಕ ನಿರ್ಮಿಸಲಾಗುವುದು' ಎಂದು ಈ ಹಿಂದೆಯೇ ಖಂಡ್ರೆ ತಿಳಿಸಿದ್ದರು.

'ಈಗಾಗಲೇ ಬಳ್ಳೆ ಶಿಬಿರದಲ್ಲಿ ಅರ್ಜುನನ ಹಿರಿಮೆ, ಸಾಹಸ ಗಾಥೆಗಳನ್ನು ಇಂದಿನ ಮತ್ತು ಮುಂದಿನ ಪೀಳಿಗೆಗೂ ತಿಳಿಸುವ ರೀತಿಯಲ್ಲಿ ಸ್ಮಾರಕ ಅನಾವರಣ ಮಾಡಲಾಗಿದೆ' ಎಂದು ಅವರು ಹೇಳಿದ್ದಾರೆ.

ಕೇರಳದಲ್ಲಿ ಕುತೂಹಲ

ಆಡಳಿತಾರೂಢ ಎಲ್‌ಡಿಎಫ್, ವಿಪಕ್ಷ ಪಾಳಯ ಯುಡಿಎಫ್ ಹಾಗೂ ಬಿಜೆಪಿ ನೇತೃತ್ವದ ಎನ್‌ಡಿಎ ಸ್ಪರ್ಧೆಯಿಂದ ತೀವ್ರ ಹಣಾಹಣಿ ಇದ್ದ ಕೇರಳದಲ್ಲಿ ಅಂತಿಮವಾಗಿ ಯಾರು ಗೆಲುವಿನ ದಡ ತಲುಪಿ, ಅಧಿಕಾರಕ್ಕೇರಲಿದ್ದಾರೆ ಎಂಬುದು ಮೇ 4ರಂದು ಸ್ಪಷ್ಟವಾಗಲಿದೆ.

ಬಹುತೇಕ ಮತದಾನೋತ್ತರ ಸಮೀಕ್ಷೆಗಳು ಯುಡಿಎಫ್ ಮೇಲುಗೈ ಸಾಧಿಸಲಿದೆ ಎಂದು ಭವಿಷ್ಯ ನುಡಿದಿವೆ. 2016ರಿಂದ ಅಧಿಕಾರದಿಂದ ದೂರ ಉಳಿದಿರುವ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಈ ಚುನಾವಣೆ ಮಾಡು ಇಲ್ಲವೇ ಮಡಿ ಎಂಬಂತಾಗಿತ್ತು.

2024ರ ಲೋಕಸಭಾ ಚುನಾವಣೆ ಹಾಗೂ ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಯುಡಿಎಫ್ ಸಾಧನೆಯನ್ನು ಉತ್ತಮಪಡಿಸಿಕೊಂಡಿದೆ. ಇದು ಯುಡಿಎಫ್‌ನಲ್ಲಿ ಭರವಸೆ ಮೂಡಿಸಿದೆಯಲ್ಲದೇ, ಮುಖ್ಯಮಂತ್ರಿ ಅಭ್ಯರ್ಥಿ ಯಾರಾಗಬೇಕು ಎಂಬ ಬಗ್ಗೆ ಕಾಂಗ್ರೆಸ್‌ನಲ್ಲಿ ಈಗಾಗಲೇ ಚರ್ಚೆ ಹುಟ್ಟುಹಾಕಿದೆ. ಮೂರನೇ ಅವಧಿಗೂ ಅಧಿಕಾರ ಉಳಿಸಿಕೊಳ್ಳುವ ವಿಶ್ವಾಸದಲ್ಲಿ ಎಲ್‌ಡಿಎಫ್ ಇದೆ.

21ಕ್ಕೆ ಹೊಸದಾಗಿ ಮತದಾನ • ಬಿಜೆಪಿಗೆ ಟಿಎಂಸಿ ಸವಾಲು

'ಫಾಲ್ಟಾ: ಸಂಪೂರ್ಣ ಪಡೆ ನಿಯೋಜಿಸಿ'

ಕೋಲ್ಕತ್ತ(ಪಿಟಿಐ): 'ಮೇ 21ರಂದು ಹೊಸದಾಗಿ ಮತದಾನ ನಡೆಯಲಿರುವ ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಗೆಲ್ಲುವುದಕ್ಕೆ ಸಂಪೂರ್ಣ ಆಡಳಿತ ಯಂತ್ರವನ್ನೇ ಬಳಸಿಕೊಳ್ಳಿ' ಎಂದು ಬಿಜೆಪಿಗೆ ಟಿಎಂಸಿ ಸವಾಲು ಹಾಕಿದೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಟಿಎಂಸಿ, 'ಹೊಸದಾಗಿ ಮತದಾನ ನಡೆಯಲಿರುವ ಫಾಲ್ಟಾಕ್ಕೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಬಿಜೆಪಿ ಕರೆತರಲಿ. ಚುನಾವಣಾ ಆಯೋಗವು ಈ ಕ್ಷೇತ್ರದಲ್ಲಿ ಕೇಂದ್ರೀಯ ಪಡೆಗಳ 50 ಸಾವಿರ ಯೋಧರನ್ನು ನಿಯೋಜಿಸಲಿ. ಇಂತಹ ಕ್ರಮಗಳು ಮತದಾರರ ಮೇಲೆ ಪರಿಣಾಮ ಬೀರುವುದಿಲ್ಲ' ಎಂದು ಹೇಳಿದೆ.


ಪಶ್ಚಿಮ ಬಂಗಾಳದ ಭವಾನಿಪುರ ವಿಧಾನಸಭಾ ಕ್ಷೇತ್ರದ ಮತ ಎಣಿಕೆ ಕೇಂದ್ರದ ಬಳಿ ಭದ್ರತೆಗೆ ಯೋಧರನ್ನು ನಿಯೋಜಿಸಲಾಗಿದೆ —ಪಿಟಿಐ ಚಿತ್ರ

'ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಏಪ್ರಿಲ್ 29ರಂದು ನಡೆದ ಮತದಾನದ ವೇಳೆ ಹಲವಾರು ಚುನಾವಣಾ ಅಪರಾಧಗಳು ನಡೆದಿವೆ' ಎಂಬ ಕಾರಣ ನೀಡಿ ಚುನಾವಣಾ ಆಯೋಗವು ಈ ಕ್ಷೇತ್ರದಲ್ಲಿ ಮೇ 21ರಂದು ಹೊಸದಾಗಿ ಮತದಾನಕ್ಕೆ ಆದೇಶಿಸಿದೆ. ಈ ಕ್ಷೇತ್ರದ ಮತ ಎಣಿಕೆ ಮೇ 24ರಂದು ನಡೆಯಲಿದೆ.

'ಮತದಾನಕ್ಕೆ ಕೇಂದ್ರೀಯ ಅರೆಸೇನಾ ಪಡೆಯ 50 ಸಾವಿರ ಯೋಧರನ್ನು ನಿಯೋಜಿಸಿ. ಪ್ರತಿ ಮತಗಟ್ಟೆ ಬಳಿ ಶಸ್ತ್ರಾಸ್ತ್ರ ಸಜ್ಜಿತ ವಾಹನಗಳನ್ನು ಸಾಲಾಗಿ ನಿಲ್ಲಿಸಿ. ನರೇಂದ್ರ ಮೋದಿ, ಅಮಿತ್ ಶಾ, ಯೋಗಿ ಆದಿತ್ಯನಾಥ ಅವರನ್ನು ಕರೆತನ್ನಿ. ತಾಕತ್ತಿದ್ದಲ್ಲಿ ನೀವೂ ಬನ್ನಿ. ಪ್ರತಿಯೊಬ್ಬ 'ಸಿಂಘಂ'ನನ್ನೂ ಕಳುಹಿಸಿ' ಎಂದು ಟಿಎಂಸಿ ಪೋಸ್ಟ್ ಮಾಡಿದೆ.

ಮತ ಎಣಿಕೆ ಕೇಂದ್ರದ ಬಳಿ ಗದ್ದಲ

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ವಿಧಾನಸಭಾ ಕ್ಷೇತ್ರದ ಮತ ಎಣಿಕೆ ಕೇಂದ್ರ ಪ್ರವೇಶಿಸಲು ಬಿಜೆಪಿ ಬಾವುಟ ಇದ್ದ ಎರಡು ಕಾರುಗಳಿಗೆ ಅನುಮತಿ ನೀಡಲಾಗಿದೆ ಎಂದು ಆರೋಪಿಸಿ ಟಿಎಂಸಿ ಕಾರ್ಯಕರ್ತರು ಗದ್ದಲ ಮಾಡಿದ ಘಟನೆ ಭಾನುವಾರ ನಡೆದಿದೆ.

ಮತ ಎಣಿಕೆ ಕೇಂದ್ರದಿಂದ 100 ಮೀಟರ್ ದೂರದಲ್ಲಿ ಟಿಎಂಸಿ ಕಾರ್ಯಕರ್ತರು ಠಿಕಾಣಿ ಹೂಡಿದ್ದರು.

'ಭದ್ರತೆಗೆ ನಿಯೋಜನೆಗೊಂಡಿರುವ ಸಿಎಪಿಎಫ್ ಸಿಬ್ಬಂದಿ, ಅಧಿಕೃತ ಗುರುತಿನ ಪುರಾವೆ ಇಲ್ಲದ ಹೊರತು ಯಾವುದೇ ವಾಹನ ಅಥವಾ ವ್ಯಕ್ತಿ ಮತ ಎಣಿಕೆ ಕೇಂದ್ರ ಪ್ರವೇಶಿಸುವುದಕ್ಕೆ ಅನುಮತಿ ನೀಡುತ್ತಿಲ್ಲ. ಆದರೆ, ಬಿಜೆಪಿ ಬಾವುಟ ಇರುವ ಕಾರು ಪ್ರವೇಶಿಸುವುದಕ್ಕೆ ಹೇಗೆ ಅನುಮತಿ ನೀಡಿದರು' ಎಂದು ಟಿಎಂಸಿ ಕಾರ್ಯಕರ್ತರು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಚುನಾವಣಾ ಆಯೋಗದ ಅಧಿಕಾರಿಯೊಬ್ಬರು, 'ಯಾವುದೇ ಆಕ್ಷೇಪಾರ್ಹವಾದುದು ಕಂಡುಬಾರದ ಕಾರಣ, ಕಾರು ಸಾಗಲು ಅನುಮತಿ ನೀಡಲಾಗಿದೆ' ಎಂದು ಹೇಳಿದ್ದಾರೆ. ವಿವಿಧ ಮತ ಎಣಿಕೆ ಕೇಂದ್ರಗಳ ಮುಂದೆ ಟಿಎಂಸಿಯ ನಾಯಕರು ಧರಣಿ ನಡೆಸಿದರು.

'ಟಿಎಂಸಿ ಆರೋಪಗಳು ತಮಾಷೆಯಾಗಿವೆ . ಕ್ಷುಲ್ಲಕ ಆರೋಪಗಳನ್ನು ಮಾಡುತ್ತಿದೆ' ಎಂದು ಬಿಜೆಪಿ ವಕ್ತಾರ ಸಜಲ್ ಘೋಷ್ ಹೇಳಿದ್ದಾರೆ.

ವಿದ್ಯಾರ್ಥಿ ವೇತನ ಕೈಪಿಡಿ

ಬೇಸಿಗೆ ಋತುವಿನ ಇಂಟರ್ನ್‌ಷಿಪ್

ಎನ್‌ಐಟಿ (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ದೆಹಲಿಯು 2026ರ ಬೇಸಿಗೆ ಋತುವಿನ ಇಂಟರ್ನ್‌ಷಿಪ್ ಕಾರ್ಯಕ್ರಮ ಹಮ್ಮಿಕೊಂಡಿದೆ.

ಅರ್ಹತೆ: ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ದಾಖಲಾಗಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.
ಅರ್ಜಿ ಸಲ್ಲಿಸುವವರು ತಾವು ಓದುತ್ತಿರುವ ಸಂಸ್ಥೆಯಿಂದ ಮತ್ತು ಪಾಲಕರಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆಯಬೇಕು.
ಇಂಟರ್ನ್‌ಷಿಪ್‌ನ ಸಂಪೂರ್ಣ ಅವಧಿಯಲ್ಲಿ ಲಭ್ಯರಿರಬೇಕು.

ನೆರವು: ಎನ್‌ಐಟಿ ದೆಹಲಿ ಅಧ್ಯಾಪಕರ ಮಾರ್ಗದರ್ಶನದಲ್ಲಿ ಇಂಟರ್ನ್‌ಷಿಪ್‌ಗೆ ಅವಕಾಶ.
ಅರ್ಜಿ ಸಲ್ಲಿಸಲು ಕೊನೇ ದಿನ: 10-05-2026
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಹೆಚ್ಚಿನ ಮಾಹಿತಿಗೆ: Short Url: www.b4s.in/praja/SIND2

ಎಸ್ಸೆಸ್ಸೆಲ್ಸಿ ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ-ಪಿಯುಸಿ ಪರೀಕ್ಷಾ ದಿಕ್ಸೂಚಿ

ಸಮಾಜವಿಜ್ಞಾನ (ಇತಿಹಾಸ)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

I) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

3) ಪ್ರಾಚೀನ ಕಾಲದಿಂದಲೂ ಭಾರತ ಹಾಗೂ ಯುರೋಪಿನ ನಡುವೆ ವಾಣಿಜ್ಯ ಸಂಬಂಧಗಳು ಬೆಸೆದುಕೊಂಡಿದ್ದವು. ಪ್ರಮುಖವಾಗಿ ಭಾರತದ ..... ವಸ್ತುಗಳಿಗೆ ಯೂರೋಪಿನಲ್ಲಿ ತುಂಬಾ ಬೇಡಿಕೆಯಿತ್ತು.
ಎ) ಸಾಂಬಾರು ಪದಾರ್ಥದ ಬಿ) ಎಣ್ಣೆ ಪದಾರ್ಥದ
ಸಿ) ಚಿನ್ನದ ಪದಾರ್ಥದ ಡಿ) ಬಟ್ಟೆಯ ಪದಾರ್ಥದ
ಉತ್ತರ:– (ಎ) ಸಾಂಬಾರು ಪದಾರ್ಥದ

4) ಬಂಗಾಲದಲ್ಲಿ ದ್ವಿ ಸರ್ಕಾರ ಪದ್ಧತಿ ಜಾರಿಗೆ ತಂದವನು ಯಾರು?
,ಎ) ರಾಬರ್ಟ್ ಕ್ಲೈವ್ ಬಿ) ಡೂಪ್ಲೆ
ಸಿ) ವಾಸ್ಕೋಡಿಗಾಮ ಡಿ) ಮೇಲಿನ ಯಾರೂ ಅಲ್ಲ
ಉತ್ತರ:–(ಎ) ರಾಬರ್ಟ್ ಕ್ಲೈವ್

5) ಭಾರತದಲ್ಲಿ ಫ್ರೆಂಚ್‌ರು ತಮ್ಮ ಮೊದಲ ಮಳಿಗೆಯನ್ನು ಎಲ್ಲಿ ತೆರೆದರು?
ಎ) ಮಸಲಿ ಪಟ್ಟಣಂ ಬಿ) ಸೂರತ್
ಸಿ) ವಿಶಾಖ ಪಟ್ಟಣಂ ಡಿ) ಕೊಚ್ಚಿನ್
ಉತ್ತರ:– (ಬಿ) ಸೂರತ್

6) ಪೋರ್ಚುಗೀಸರ ನಾವಿಕ ವಾಸ್ಕೊಡಗಾಮನು ಭಾರತದ ಪಶ್ಚಿಮ ಕಲ್ಲಿಕೋಟೆಗೆ ಮೊತ್ತ ಮೊದಲ ಬಾರಿ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದನು. ಅವನು ಭಾರತಕ್ಕೆ ಬಂದ ವರ್ಷ ಯಾವುದು?
ಎ) 1398 ಬಿ) 1488
ಸಿ) 1598 ಡಿ) 1498
ಉತ್ತರ:–(ಡಿ) 1498

7) ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಸೆಣಸಾಟದಲ್ಲಿ ಕರ್ನಾಟಿಕ್ ಪ್ರದೇಶದ ನವಾಬ ....ನನ್ನು ಬ್ರಿಟಿಷರು ದಾಳವಾಗಿ ಬಳಸಿಕೊಂಡರು.
ಎ) ಅರ್ಜುನದೇವ ಬಿ) ಫರೂಕ್ ಸಿಯಾರ್
ಸಿ) ಅಕ್ಬರ್–2 ಡಿ) ಅನ್ವರುದ್ಧೀನ
ಉತ್ತರ:– (ಡಿ) ಅನ್ವರುದ್ಧೀನ

II) ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.
1) ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ ....
2) ಭಾರತ .ಹಾಗೂ. ಯೂರೋಪ್ ನಡುವೆ ಹೊಸ ಜಲ ಮಾರ್ಗವನ್ನು........................... ಕಂಡುಹಿಡಿದರು
3) ಭಾರತದಲ್ಲಿ ಫ್ರೆಂಚರ ರಾಜಧಾನಿ..........................
4) ರಾಬರ್ಟ್ ಕ್ಲೈವನು 1757ರಲ್ಲಿ ಸಿರಾಜ್–ಉದ್–ದೌಲನ ಮೇಲೆ.................................ಕದನ ಸಾರಿದನು
ಉತ್ತರ: (1) ಆಲ್ಫೋನ್ಸೊ–ಡಿ–ಅಲ್ಬುಕರ್ಕ್ (2) ಪೋರ್ಚುಗೀಸರು (3) ಪಾಂಡಿಚೇರಿ (4) ಪ್ಲಾಸಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) 'ಡಚ್ಚರ ವಿರುದ್ಧ ರಣತಂತ್ರ ರೂಪಿಸಿದ ಮಹಾರಾಜ, ಡಚ್ಚರ ಏಕಸ್ವಾಮ್ಯ ಮುರಿದು ಅವರ ಏಕಸ್ವಾಮ್ಯಕ್ಕೆ ಕೊಳ್ಳಿ ಇಟ್ಟ ಮಾರ್ತಾಂಡ ವರ್ಮ' ಈ ಹೇಳಿಕೆಯನ್ನು ಹೇಗೆ ಸಮರ್ಥಿಸುವಿರಿ?
ಉತ್ತರ:– ರಾಮವರ್ಮನ ನಂತರ ತನ್ನ 24ನೇ ವಯಸ್ಸಿನಲ್ಲಿ ಮಾರ್ತಾಂಡ ವರ್ಮ ಪಟ್ಟಕ್ಕೆ ಬಂದನು. ವೈನಾಡ್ ಸಂಸ್ಥಾನದ ಗಡಿಯನ್ನು ವಿಸ್ತರಿಸಲು 50 ಸಾವಿರ ಸೈನಿಕರ ಸೈನ್ಯವನ್ನು ಕಟ್ಟಿದನು. ಮೆಣಸು ಬೆಳೆಯುವ ಪ್ರದೇಶಗಳನ್ನು ತನ್ನ ಕೈವಶ ಮಾಡಿಕೊಂಡನು. ಅದಾಗಲೇ ಕರಿಮೆಣಸಿನ ವ್ಯಾಪಾರದಲ್ಲಿ ಹಿಡಿತ ಸಾಧಿಸುತ್ತಿದ್ದ ಡಚ್ಚರನ್ನು ಸದೆಬಡಿಯಲು ಅನೇಕ ರಣತಂತ್ರಗಳನ್ನು ಮಾರ್ತಾಂಡ ವರ್ಮನು ಹೆಣೆದನು. ಸುತ್ತಮುತ್ತಲಿನ ಪಾಳೆಗಾರರು ಮತ್ತು ಸಂಸ್ಥಾನಿಕರನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಅವರನ್ನು ಡಚ್ಚರ ವಿರುದ್ಧ ನಿಲ್ಲಿಸಿದನು. ಕಾಯಂಕುಳಂ, ಕೊಚ್ಚಿ, ಪುರಕ್ಕಾಡ್ ಮತ್ತು ವಡಕ್ಕುಂಕೂರ್ ಸಂಸ್ಥಾನಗಳ ಜೊತೆಗೂಡಿ ಡಚ್ ಸೇನೆಯು ತಿರುವಾಂಕೂರಿನ ಮೇಲೆ ಆಕ್ರಮಣ ಮಾಡಿದಾಗ ಮಾರ್ತಾಂಡ ವರ್ಮನ ಪಡೆ ಡಚ್ ಕೂಟವನ್ನು ಸೋಲಿಸಿ ನೆಡುಮಂಗಡ ಮತ್ತು ಕೊಟ್ಟಾರಕರ ಎಂಬ ವ್ಯಾಪಾರಿ ಕೇಂದ್ರವನ್ನು ವಶಪಡಿಸಿಕೊಂಡಿತು. ಅಲ್ಲದೆ ಮಾರ್ತಾಂಡ ವರ್ಮನು "ನಾವೆಂದೂ ಮೆಣಸಿನ ವ್ಯಾಪಾರದ ಹಕ್ಕನ್ನು ಪರಕೀಯರಿಗೆ ಬಿಟ್ಟುಕೊಡೆವು" ಎಂದು ಡಚ್ಚರಿಗೆ ಖಾರವಾಗಿ ಪತ್ರ ಬರೆದನು. 1741ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪನಿ ಕೊಟ್ಟಾರಕರ ಸಂಸ್ಥಾನವನ್ನು ಮುಂದಿಟ್ಟುಕೊಂಡು ತಿರುವಾಂಕೂರಿನ ಮೇಲೆ ಯುದ್ಧವನ್ನು ಸಾರಿತು. ಡಚ್ಚರ ಜೊತೆಗೆ ಸ್ಥಳೀಯ ಸಂಸ್ಥಾನಗಳೂ ಸೇರಿಕೊಂಡಿದ್ದರು. ಆದರೆ ಮಾರ್ತಾಂಡ ವರ್ಮನ ಸೈನ್ಯ ಆ ದಾಳಿಯನ್ನು ಸಮರ್ಥವಾಗಿ ಹಿಮ್ಮೆಟ್ಟಿಸಿತು. ಡಚ್ ಪಡೆಗಳು ಕೊಚ್ಚಿನ್‌ಗೆ ಹಿಂತಿರುಗಿದವು. ಆದರೆ ಡಚ್ಚರು ಸಿಲೋನಿನಿಂದ ಮತ್ತಷ್ಟು ಪಡೆಗಳನ್ನು ಕರೆಸಿಕೊಂಡು ಮಾರ್ತಾಂಡ ವರ್ಮನ ಮೇಲೆ ದಂಡೆತ್ತಿ ಬಂದರು. 1741ರಲ್ಲಿ ಕೊಳಚ್ಚಲ್ ಎಂಬಲ್ಲಿ ಮಾರ್ತಾಂಡ ವರ್ಮ ಮತ್ತು ಡಚ್ಚರ ನಡುವೆ ನಾಲ್ಕು ದಿನಗಳ ಕಾಲ ಭೀಕರ ಕದನ ನಡೆಯಿತು. ಅಂತಿಮವಾಗಿ ತಿರುವಾಂಕೂರು ಸೈನ್ಯ ಯುದ್ಧದಲ್ಲಿ ಮೇಲುಗೈ ಸಾಧಿಸಿತು. ಡಚ್ಚರು ಅಪಾರ ಪ್ರಮಾಣದಲ್ಲಿ ನಷ್ಟವನ್ನು ಅನುಭವಿಸಿದರು. ಅಂತಿಮವಾಗಿ 1753ರ ಆಗಸ್ಟ್ 15ರಂದು ನಡೆದ ಒಪ್ಪಂದದಲ್ಲಿ ಡಚ್ ಪಡೆಗಳು ತಮ್ಮ ಸಂಪೂರ್ಣ ಅಧಿಕಾರವನ್ನು ತಿರುವಾಂಕೂರಿಗೆ ಒಪ್ಪಿಸಿ ಶರಣಾದವು. ಈ ರೀತಿ ಡಚ್ಚರ ವಿರುದ್ಧ ರಣತಂತ್ರ ರೂಪಿಸಿದ ಮಹಾರಾಜ, ಡಚ್ಚರ ಏಕಸ್ವಾಮ್ಯ ಮುರಿದು ಅವರ ಏಕಸ್ವಾಮ್ಯಕ್ಕೆ ಕೊಳ್ಳಿ ಇಟ್ಟ ಮಾರ್ತಾಂಡ ವರ್ಮ ಎಂದು ಪ್ರಸಿದ್ಧನಾದ

2) ಯಾವ ವರ್ಷ ಬ್ರಿಟನ್ ರಾಣಿ ಈಸ್ಟ್ ಇಂಡಿಯಾ ಕಂಪನಿಗೆ ವ್ಯಾಪಾರ ನಡೆಸಲು ಪರವಾನಿಗೆ ನೀಡಿದಳು? ಈ ಪರವಾನಿಗೆ ಎಷ್ಟು ವರ್ಷಗಳಿಗಾಗಿ ನೀಡಲಾಗಿತ್ತು?
ಉತ್ತರ:– ಇಂಗ್ಲೆಂಡಿನ ಎಲಿಜಬೆತ್ ರಾಣಿಯು ಸಾ. ಶ. 1600 ಡಿಸೆಂಬರ್ 31ರಂದು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಪೂರ್ವ ದೇಶಗಳೊಂದಿಗೆ ವ್ಯಾಪಾರ ನಡೆಸಲು 15 ವರ್ಷಗಳ ಪರವಾನಗಿ ನೀಡಿದಳು.

3) 'ಕಾನ್‌ಸ್ಟಾಂಟಿನೋಪಲ್ ಅಂತಾರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು'. ಈ ಹೇಳಿಕೆಯನ್ನು ಸಮರ್ಥಿಸಿ
ಉತ್ತರ:– ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ (ಬೈಜಾಂಟಿಯಂ) ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು. ಅಲ್ಲಿಂದ ಇಟಲಿಯ (ರೋಮನ್ ಸಾಮ್ರಾಜ್ಯದ ಭಾಗ) ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು. ಹೀಗೆ ಕಾನ್‌ಸ್ಟಾಂಟಿನೋಪಲ್ ಅಂತಾರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು.

(ಮುಂದುವುದುವರಿಯುವುದು)

ಪಿಯುಸಿ ದಿಕ್ಸೂಚಿ

PHYSICS

Chapter – 1

ELECTRIC CHARGES AND FIELDS

17) If the total charge enclosed by a surface is zero, does it imply that the electric field everywhere on the surface is zero? Conversely, if the electric field everywhere on a surface is zero, does it imply that net charge inside is zero.
Ans:- No, the field may be normal. However, the converse is true.

18) What is meant by Electrification?
Ans:- Electrification or charging is a process of making a body to lose or gain electrons.

19) Write a note on earthing? How is it done?
Ans:- When we bring a charged body in contact with the earth, all the excess charge on the body disappears by causing a momentary current to pass to the ground through the connecting conductor (such as our body). This process of sharing the charges with the earth is called grounding or earthing. It provides a safety measure for electrical circuits and appliances.

A thick metal plate is buried deep into the earth and thick wires are drawn from this plate theses are used in buildings for the purpose of earthing near the mains supply.

The electric wiring in our houses has three wires – live, neutral and earth. The first two wires carry electric current from the power station and the third is earthed by connecting it to the buried metal plate.

Metallic bodies of the electric appliances such as electric iron, refrigerator, TV are connected to the earth wire. When any fault occurs or live wire touches the metallic body, the charge flows to the earth without damaging the appliance and without causing any injury to the humans; this would have otherwise been unavoidable since the human body is a conductor of electricity.

20) Mention some of the methods of charging a body.
Ans:- Some methods of charging a body are-
Charging by (a) friction,
(b) conduction and
(c) Induction.

Multiple Choice Question

1. Which statement among the following is false regarding Gauss's law?
(a) Gauss's law holds for any closed surface.
(b) In Gauss's law, the term "q" on the right side of the equation represents the total charge enclosed within the surface.
(c) When a system exhibits symmetry, Gauss's law may not be beneficial for calculating the electrostatic field.
(d) Gauss's law is derived from Coulomb's law, which contains an inverse square dependence on distance.
Ans: (c) When a system exhibits symmetry, Gauss's law may not be particularly useful for calculating the electrostatic field.

2. Assume a system inside which there are different types of charges, but the total charge is practically zero. At points outside the given region
a) the electric field must be zero.
b) the electric field is caused solely by the dipole moment of the charge distribution.
c) For large distances (r) from the origin, the dominant electric field is inversely proportional to r^3.
d) if a charged particle is moved along a closed path away from a region, the work done will not be zero.
Ans: (c) For large distances (r) from the origin, the dominant electric field is inversely proportional to r^3.


3. If a parrot sits on a bare high-voltage power line, it will:
a) receive a mild shock
b) receive a strong shock
c) be killed instantly
d) not be affected significantly.
Ans: (d) not be affected significantly

4. Electric field intensity due to an infinitely long straight uniformly charged wire at a distance *r* from the wire varies as
a) r b) r^{-1}
c) r^2 d) r^{-2} Ans:-b

5. Electric field intensity due to uniformly charged thin infinite non-conducting plane sheet of surface charge density σ at a distance *r* is
a) $\frac{\sigma}{\epsilon_0}$ b) $\frac{\sigma}{2\epsilon_0}$
c) $\frac{\sigma}{2r}$ d) $\frac{\sigma}{2\epsilon_0 r}$
Ans:-b

6. If two conducting spheres are charged separately and then connected, the following may occur:
(a) The electrostatic energy of the spheres will be conserved.
(b) the total charge on the spheres is conserved
(c) Both the electrostatic energy and charge will be conserved.
(d) None of the above.
Ans: (b) the total charge on the spheres is conserved

7. Which of the following graphs represent the variation of electric field intensity E(*r*) due to a charged spherical shell of radius R with distance *r* from its centre?



Ans:-C

8. The force per unit charge is known as ________.
a) Electric current b) Electric potential
c) Electric field d) Electric space
Ans: (c) Electric field
Expln: The force per unit charge is known as the electric field.

9. What is the dielectric constant of a metal?
a) -1 b) 0
c) 1 d) Infinite
Ans: (d) Infinite
Expln: The dielectric constant of metals is infinite. The dielectric constant of metal is infinite, as the net electric field inside the metal is zero.

ವೃತ್ತಿಭವಿಷ್ಯಕ್ಕೆ ವಿವಿಧ ಕೋರ್ಸ್



• ಸತೀಶ್ ಕುಮಾರ್ ಎಸ್.ಹೊಸಮನಿ

ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಪದವಿ ನಂತರ ವಿದ್ಯಾರ್ಥಿಗಳು ತಮ್ಮ ಆಸಕ್ತಿ ಹಾಗೂ ಭವಿಷ್ಯದ ವೃತ್ತಿಗನುಗುಣವಾಗಿ ಆಯ್ದುಕೊಳ್ಳಬಹುದಾದ ವಿವಿಧ ಕೋರ್ಸ್‌ಗಳ ವಿವರ ಇಲ್ಲಿದೆ.

ಕಲಿಯಲು ಆಯ್ದುಕೊಳ್ಳಬೇಕಾದ ವಿಷಯಗಳ ಬಗ್ಗೆ ಸರಿಯಾದ ಯೋಜನೆ, ನಿರಂತರ ಕಲಿಕೆ ಮತ್ತು ಸಕಾರಾತ್ಮಕ ಮನೋಭಾವವು ಯಶಸ್ವಿ ವೃತ್ತಿಜೀವನದ ಸೂತ್ರಗಳಾಗಿವೆ. ಹಾಗಾಗಿ, ಸರಿಯಾದ ಕಲಿಕಾ ವಿಷಯಗಳ ಆಯ್ಕೆಯು ವೃತ್ತಿ ಯಶಸ್ಸಿನ ಮೊದಲ ಹೆಜ್ಜೆ ಎಂಬುದನ್ನು ಮರೆಯಬಾರದು.

ಎಸ್‌ಎಸ್‌ಎಲ್‌ಸಿ ನಂತರ

ಪಾಲಿಟೆಕ್ನಿಕ್/ಎಂಜಿನಿಯರಿಂಗ್ ಡಿಪ್ಲೊಮಾ ಕೋರ್ಸ್: 3 ವರ್ಷ– ಕಂಪ್ಯೂಟರ್ ಸೈನ್ಸ್, ಐ.ಟಿ.,ಮೆಕ್ಯಾನಿಕಲ್ ಎಂಜಿನಿಯರಿಂಗ್, ಸಿವಿಲ್ ಎಂಜಿನಿಯರಿಂಗ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ. ತಾಂತ್ರಿಕ ಉದ್ಯೋಗ ಅಥವಾ ಜೂನಿಯರ್ ಎಂಜಿನಿಯರ್ ಹುದ್ದೆ ಪಡೆಯಬಯಸುವ ವಿದ್ಯಾರ್ಥಿಗಳಿಗೆ ಇವು ಸೂಕ್ತವಾಗಿವೆ.

ವೃತ್ತಿಪರ ಮತ್ತು ಐಟಿಐ ಕೋರ್ಸ್: 1- 2 ವರ್ಷ. ಎಲೆಕ್ಟ್ರಿಷಿಯನ್, ಫಿಟ್ಟರ್, ವೆಲ್ಡರ್, ಪ್ಲಂಬರ್... ಕೈಗಾರಿಕಾ ತರಬೇತಿ ಸಂಸ್ಥೆಗಳು (ಐಟಿಐ) ನಿರ್ದಿಷ್ಟ ವಹಿವಾಟುಗಳಿಗೆ ಕೌಶಲ ಆಧಾರಿತ ತರಬೇತಿಯನ್ನು ನೀಡುತ್ತವೆ. ಇಂತಹವರಿಗೆ ಕೈಗಾರಿಕೆಗಳು ಮತ್ತು ನಿರ್ಮಾಣ ಕ್ಷೇತ್ರದಲ್ಲಿ ಹೆಚ್ಚಿನ ಬೇಡಿಕೆ ಇರುತ್ತದೆ.

ವೈದ್ಯಕೀಯ ಮತ್ತು ಅಲೈಡ್ ಹೆಲ್ತ್ ಡಿಪ್ಲೊಮಾ: ಈ ಕೋರ್ಸ್‌ಗಳು ಆರೋಗ್ಯ ಕ್ಷೇತ್ರದಲ್ಲಿ ವೃತ್ತಿಜೀವನವನ್ನು ಸಕ್ರಿಯಗೊಳಿಸುತ್ತವೆ. ಡಿಪ್ಲೊಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (ಡಿಎಂಎಲ್‌ಟಿ)– ರೋಗಶಾಸ್ತ್ರ ಮತ್ತು ಮಾದರಿ ಪರೀಕ್ಷೆಯಲ್ಲಿ ತರಬೇತಿ. ಡಿಪ್ಲೊಮಾ ಇನ್ ರೇಡಿಯಾಲಜಿ/ರೇಡಿಯಾಗ್ರಫಿ: ಎಕ್ಸ್-ರೇ ಮತ್ತು ಇಮೇಜಿಂಗ್ ತಂತ್ರಜ್ಞಾನ. ಡಿಪ್ಲೊಮಾ ಇನ್ ಆಪರೇಷನ್ ಥಿಯೇಟರ್ ಟೆಕ್ನಾಲಜಿ: ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿನ ತಂತ್ರಜ್ಞಾನ.

ಕಂಪ್ಯೂಟರ್ ಮತ್ತು ವಾಣಿಜ್ಯ ಕೋರ್ಸ್‌ಗಳು: ಗ್ರ್ಯಾಫಿಕ್ ಡಿಸೈನಿಂಗ್‌ನಲ್ಲಿ ಡಿಪ್ಲೊಮಾ– ಯುಐ/ಯುಎಕ್ಸ್ ಮತ್ತು ವಿಡಿಯೊ ಬ್ರ್ಯಾಂಡಿಂಗ್. ಡಿಜಿಟಲ್ ಮಾರ್ಕೆಟಿಂಗ್ ಸರ್ಟಿಫಿಕೆಟ್ ಕೋರ್ಸ್– ಎಸ್‌ಇಒ, ಸಾಮಾಜಿಕ ಮಾಧ್ಯಮ ಮತ್ತು ವೆಬ್ ಮಾರ್ಕೆಟಿಂಗ್. ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್– ಡೆಸ್ಕ್‌ಟಾಪ್ ಬೆಂಬಲ, ಹಾರ್ಡ್‌ವೇರ್ ನಿರ್ವಹಣೆ ಮತ್ತು ಕೋಡಿಂಗ್. ವೆಬ್ ವಿನ್ಯಾಸ.

ಸೃಜನಶೀಲ ಮತ್ತು ಸೇವಾ ಉದ್ಯಮ ಡಿಪ್ಲೊಮಾ: ಹೋಟೆಲ್ ನಿರ್ವಹಣೆ, ಆತಿಥ್ಯ, ಫ್ಯಾಷನ್ ವಿನ್ಯಾಸ, ಒಳಾಂಗಣ ವಿನ್ಯಾಸ.

ಗ್ರಂಥಾಲಯ ವಿಜ್ಞಾನ: ಸರ್ಟಿಫಿಕೆಟ್ ಕೋರ್ಸ್ (ಸಿಎಲ್‌ಐಎಸ್‌ಸಿ) ಮತ್ತು (ಡಿಎಲ್‌ಐಎಸ್‌ಸಿ)

ಪಿಯುಸಿ ನಂತರ

ಉನ್ನತ ವೃತ್ತಿ ಆಯ್ಕೆಗಳಲ್ಲಿ ಎಂಜಿನಿಯರಿಂಗ್ (ಬಿ.ಟೆಕ್), ವೈದ್ಯಕೀಯ ಮತ್ತು ವಾಣಿಜ್ಯದಂತಹ (ಸಿ.ಎ) ಸಾಂಪ್ರದಾಯಿಕ ಮಾರ್ಗಗಳ ಜೊತೆಗೆ ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್, ಕಾನೂನು, ನಿರ್ವಹಣೆ (ಬಿಬಿಎ), ವಿನ್ಯಾಸ ಹಾಗೂ ಡಿಜಿಟಲ್ ಮಾರ್ಕೆಟಿಂಗ್‌ನಂತಹ ಹೆಚ್ಚಿನ ಬೇಡಿಕೆಯ ಕ್ಷೇತ್ರಗಳು ಸಹ ಇವೆ. ಫೊರೆನ್ಸಿಕ್ ಸೈನ್ಸ್, ಸುಸ್ಥಿರತೆ ಮತ್ತು ಆರೋಗ್ಯ ನಿರ್ವಹಣೆ ಕೋರ್ಸ್‌ಗಳು ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿವೆ.

ಎಂಜಿನಿಯರಿಂಗ್ (ಬಿ.ಟೆಕ್/ಬಿ.ಇ): ಕಂಪ್ಯೂಟರ್ ಸೈನ್ಸ್, ಆರ್ಟಿಫಿಶಿಯಲ್ ಇಂಟಲಿಜೆನ್ಸ್, ಸೈಬರ್ ಸೆಕ್ಯುರಿಟಿ, ಮೆಕ್ಯಾನಿಕಲ್ ಎಂಜಿನಿಯರಿಂಗ್ ಇತ್ಯಾದಿ. ವೈದ್ಯಕೀಯ ಮತ್ತು ಅಲೈಡ್ ಸೈನ್ಸಸ್: ಆಯುರ್ವೇದ, ಹೋಮಿಯೋಪಥಿ ಮತ್ತು ಫಿಸಿಯೋಥೆರಪಿ. ಶುದ್ಧ/ಅನ್ವಯಿಕ ವಿಜ್ಞಾನ: ಜೈವಿಕ ತಂತ್ರಜ್ಞಾನ, ಸೂಕ್ಷ್ಮ ಜೀವವಿಜ್ಞಾನ, ವಿಧಿವಿಜ್ಞಾನ, ಪರಿಸರ ವಿಜ್ಞಾನದಲ್ಲಿ ಬಿ.ಎಸ್ಸಿ.

ವಾಸ್ತುಶಿಲ್ಪ ಮತ್ತು ವಿನ್ಯಾಸ: ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್. ಲೆಕ್ಕಪತ್ರ ನಿರ್ವಹಣೆ ಮತ್ತು ಹಣಕಾಸು: ಚಾರ್ಟರ್ಡ್ ಅಕೌಂಟೆನ್ಸಿ (ಸಿಎ), ಕಂಪನಿ ಕಾರ್ಯದರ್ಶಿ (ಸಿಎಸ್), ವೆಚ್ಚ ಮತ್ತು ಮ್ಯಾನೇಜ್‌ಮೆಂಟ್ ಅಕೌಂಟೆಂಟ್ (ಸಿಎಂಎ).

ವ್ಯವಹಾರ ಮತ್ತು ನಿರ್ವಹಣೆ: ವ್ಯವಹಾರ ಆಡಳಿತದಲ್ಲಿ ಪದವಿ, ನಿರ್ವಹಣಾ ಅಧ್ಯಯನದಲ್ಲಿ ಪದವಿ (ಬಿಎಂಎಸ್) ಅಥವಾ ಸಂಯೋಜಿತ ಎಂಬಿಎ. ಬ್ಯಾಂಕಿಂಗ್ ಮತ್ತು ವಿಶ್ಲೇಷಣೆ: ಬಿ.ಕಾಂ (ಆನರ್ಸ್), ಅರ್ಥಶಾಸ್ತ್ರದಲ್ಲಿ ಪದವಿ, ಡೇಟಾ ಅನಲಿಟಿಕ್ಸ್ ಅಥವಾ ಫಿನ್‌ಟೆಕ್‌ನಲ್ಲಿ ವಿಶೇಷ ಪದವಿ. ಕಾನೂನು: 5 ವರ್ಷಗಳ ಇಂಟಿಗ್ರೇಟೆಡ್ ಬಿ.ಎ. ಎಲ್‌ಎಲ್‌ಬಿ ಅಥವಾ ಬಿಬಿಎ ಎಲ್‌ಎಲ್‌ಬಿ. ಮಾಧ್ಯಮ ಮತ್ತು ಸಂವಹನ: ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ. ಡಿಜಿಟಲ್ ಮಾಧ್ಯಮ ಅಥವಾ ಸಾರ್ವಜನಿಕ ಸಂಪರ್ಕ. ವಿನ್ಯಾಸ ಮತ್ತು ಸೃಜನಶೀಲತೆ: ಫ್ಯಾಷನ್ ವಿನ್ಯಾಸ, ಗ್ರ್ಯಾಫಿಕ್ ವಿನ್ಯಾಸ, ಒಳಾಂಗಣ ವಿನ್ಯಾಸ ಅಥವಾ ಆ್ಯನಿಮೇಷನ್.

ಮಾನವಿಕ ಮತ್ತು ಸಮಾಜವಿಜ್ಞಾನ: ಮನೋವಿಜ್ಞಾನ, ಸಮಾಜವಿಜ್ಞಾನ, ಇತಿಹಾಸ, ರಾಜಕೀಯ ವಿಜ್ಞಾನ.

ತಂತ್ರಜ್ಞಾನ: ಎಐ/ಎಂಎಲ್ ಎಂಜಿನಿಯರ್, ಡೇಟಾ ಸೈಂಟಿಸ್ಟ್, ಸೈಬರ್ ಸೆಕ್ಯುರಿಟಿ ವಿಶ್ಲೇಷಕ. ನಿರ್ವಹಣೆ ಮತ್ತು ತಂತ್ರಜ್ಞಾನ: ಡಿಜಿಟಲ್ ಮಾರ್ಕೆಟಿಂಗ್ ತಜ್ಞ, ಉತ್ಪನ್ನ ವ್ಯವಸ್ಥಾಪಕ.

ವೃತ್ತಿಪರ: ಹೋಟೆಲ್ ನಿರ್ವಹಣೆ, ಪ್ರವಾಸೋದ್ಯಮ, ಯೋಗ ಮತ್ತು ಸೌಂದರ್ಯ/ಕ್ಷೇಮ ಕೋರ್ಸ್‌ಗಳು.

ಐಟಿಐ ಕೋರ್ಸ್‌ಗಳು: ಅಲ್ಪಾವಧಿಯ ತಾಂತ್ರಿಕ ಕೌಶಲಗಳು. ಸರ್ಟಿಫಿಕೆಟ್ ಕೋರ್ಸ್‌ಗಳು: ಹಣಕಾಸು ಲೆಕ್ಕಪತ್ರ ನಿರ್ವಹಣೆ (ಟ್ಯಾಲಿ) ಅಥವಾ ಮಲ್ಟಿಮೀಡಿಯಾ.

ಪದವಿ ನಂತರ

ಪದವಿಯ ನಂತರದ ವೃತ್ತಿಪರ ಕೋರ್ಸ್‌ಗಳಲ್ಲಿ ಮ್ಯಾನೇಜ್‌ಮೆಂಟ್‌ಗೆ (ನಿರ್ವಹಣೆ) ಸಂಬಂಧಿಸಿದಂತೆ ಎಂಬಿಎ/ ಪಿಜಿಡಿಎಂ, ತಾಂತ್ರಿಕ ಕೌಶಲಗಳಿಗೆ ಸಂಬಂಧಿಸಿ ಎಂ.ಟೆಕ್/ಎಂಸಿಎ, ಸಿಎ, ಸಿಎಸ್, ಸಿಎಫ್‌ಎ ಅಥವಾ ಡೇಟಾ ಸೈನ್ಸ್, ಎಚ್‌ಆರ್, ಐಟಿ ಪದವಿಯ ನಂತರ ಉನ್ನತ ವೃತ್ತಿಪರ ಕೋರ್ಸ್‌ಗಳು ಲಭ್ಯವಿವೆ.

ನಿರ್ವಹಣೆ ಮತ್ತು ವ್ಯವಹಾರ: ಎಂಬಿಎ (ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್): ಎಂಬಿಎ ಇನ್ ಕಮ್ಯುನಿಕೇಷನ್ ಮ್ಯಾನೇಜ್‌ಮೆಂಟ್, ಎಂಬಿಎ ಇನ್ ಪ್ರೊಡಕ್ಷನ್ ಮ್ಯಾನೇಜ್‌ಮೆಂಟ್–ನಾಯಕತ್ವ, ಹಣಕಾಸು, ಎಚ್‌ಆರ್ ಮಾರ್ಕೆಟಿಂಗ್. ಪಿಜಿಡಿಎಂ– ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ.

ತಂತ್ರಜ್ಞಾನ ಮತ್ತು ಡೇಟಾ: ಎಂ.ಟೆಕ್/ ಎಂಇ (ಮಾಸ್ಟರ್ ಆಫ್ ಟೆಕ್ನಾಲಜಿ): ಎಐ, ಡೇಟಾ ಸೈನ್ಸ್, ವಿಎಲ್‌ಎಸ್‌ಐ ಮತ್ತು ಸೈಬರ್ ಸೆಕ್ಯುರಿಟಿ ಇನ್ ಎಂಜಿನಿಯರಿಂಗ್. ಎಂಸಿಎ (ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ಸ್), ಡೇಟಾ ಸೈನ್ಸ್ & ಎಐ/ಎಂಎಲ್: ಕೃತಕ ಬುದ್ಧಿಮತ್ತೆ, ಮಷೀನ್ ಲರ್ನಿಂಗ್ ಮತ್ತು ಡೇಟಾ.

ಹಣಕಾಸು, ಕಾನೂನು ಮತ್ತು ವಿಶೇಷ ವೃತ್ತಿಗಳು: ಸಿಎ, ಸಿಎಸ್– ಕಾರ್ಪೊರೇಟ್ ಕಾನೂನು ಮತ್ತು ಆಡಳಿತ. ಕಾನೂನು: ಎಲ್‌ಎಲ್‌ಬಿ/ಎಲ್‌ಎಲ್‌ಎಂ, ಎಂ.ಎಸ್ಸಿ/ಎಂಎ (ವಿಶೇಷ ಕ್ಷೇತ್ರಗಳು)–ಜೈವಿಕ ತಂತ್ರಜ್ಞಾನ, ಡೇಟಾ ಸೈನ್ಸ್, ಸೈಕಾಲಜಿ ಮತ್ತು ಅರ್ಥಶಾಸ್ತ್ರ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ: ಮಾಧ್ಯಮ ವೃತ್ತಿಪರರಿಗೆ ವೃತ್ತಿ ಆಧಾರಿತ ಕೋರ್ಸ್‌ಗಳು. ಪ್ಯಾರಾಮೆಡಿಕಲ್/ಆಸ್ಪತ್ರೆ ನಿರ್ವಹಣೆ: ಆರೋಗ್ಯ ರಕ್ಷಣೆ. ಗ್ರಂಥಾಲಯ ವಿಜ್ಞಾನದ ಕೋರ್ಸ್‌ಗಳು: ಬಿಎಲ್‌ಐಎಸ್ಸಿ, ಎಂಎಲ್‌ಐಎಸ್ಸಿ, ಎಂಫಿಲ್, ಪಿಎಚ್.ಡಿ. ಶಿಕ್ಷಣ ಶಾಸ್ತ್ರದ ಕೋರ್ಸ್‌ಗಳು– ಬಿ.ಇಡಿ, ಎಂ.ಇಡಿ, ಎಂಫಿಲ್, ಪಿಎಚ್.ಡಿ.

ಲೇಖಕ: ನಿರ್ದೇಶಕ, ಸಮಗ್ರ ಶಿಕ್ಷಣ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ

ಕೃಷಿ ವಿಭಾಗದಲ್ಲಿ ಅವಕಾಶ

ಎಂಎಸ್ಸಿ (ಅಗ್ರಿ)– ಜೆನೆಟಿಕ್ಸ್ ಆ್ಯಂಡ್ ಪ್ಲ್ಯಾಂಟ್ ಬ್ರೀಡಿಂಗ್, ಸೀಡ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ, ಪ್ಲ್ಯಾಂಟ್ ಫಿಸಿಯಾಲಜಿ, ಅಗ್ರಾನಮಿ, ಸಾಯಿಲ್ ಸೈನ್ಸ್, ಮೈಕ್ರೊಬಯಾಲಜಿ, ಎಂಟಮಾಲಜಿ, ಬಯೊಇನ್‌ಫರ್ಮೆಟಿಕ್ಸ್, ಬಯೊಕೆಮಿಸ್ಟ್ರಿ, ಮಾಲಿಕ್ಯುಲಾರ್ ಬಯಾಲಜಿ, ಬಯೊಟೆಕ್ನಾಲಜಿ...

ಎಂಟೆಕ್: ಪ್ರೊಸೆಸಿಂಗ್ ಆ್ಯಂಡ್ ಫುಡ್ ಎಂಜಿನಿಯರಿಂಗ್, ಸಾಯಿಲ್ ಆ್ಯಂಡ್ ವಾಟರ್ ಕನ್ಸರ್ವೇಷನ್ ಎಂಜಿನಿಯರಿಂಗ್, ಫಾರ್ಮ್ ಮಷಿನರಿ ಆ್ಯಂಡ್ ಪವರ್ ಎಂಜಿನಿಯರಿಂಗ್, ಫುಡ್ ಪ್ರೊಸೆಸಿಂಗ್ ಟೆಕ್ನಾಲಜಿ

ಎಂಬಿಎ: ಅಗ್ರಿ ಬಿಸಿನೆಸ್ ಮ್ಯಾನೇಜ್‌ಮೆಂಟ್

ಪಿಎಚ್.ಡಿ– ಜೆನೆಟಿಕ್ಸ್ ಆ್ಯಂಡ್ ಪ್ಲ್ಯಾಂಟ್ ಬ್ರೀಡಿಂಗ್, ಮೈಕ್ರೊಬಯಾಲಜಿ, ಎಂಟಮಾಲಜಿ, ಸೆರಿಕಲ್ಚರ್, ಅಗ್ರಿಕಲ್ಚರಲ್ ಎಕನಾಮಿಕ್ಸ್, ಫುಡ್ ಸೈನ್ಸ್ ಆ್ಯಂಡ್ ನ್ಯೂಟ್ರಿಷನ್, ಫಾರೆಸ್ಟ್ರಿ ಆ್ಯಂಡ್ ಎನ್‌ವಿರಾನ್‌ಮೆಂಟಲ್ ಸೈನ್ಸ್, ಅಗ್ರಿಕಲ್ಚರಲ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಪ್ಲ್ಯಾಂಟ್ ಪೆಥಾಲಜಿ...

ಫಾರ್ಮಸಿ ಕಲಿಕೆ ಸ್ಮಾರ್ಟ್ ಆಯ್ಕೆ

• ಪ್ರದೀಪ್ ಕುಮಾರ್ ಎಂ.ಆರ್.

ಔಷಧಗಳನ್ನು ತಯಾರಿಸುವುದು, ಪರೀಕ್ಷಿಸುವುದು ಮತ್ತು ವಿತರಿಸುವ ವಿಜ್ಞಾನವನ್ನು ಫಾರ್ಮಸಿ ಕ್ಷೇತ್ರ ಒಳಗೊಂಡಿದೆ. ಇದು ಆರೋಗ್ಯ ರಕ್ಷಣೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ- ಜೀವ ಉಳಿಸುವ ಔಷಧಿಗಳನ್ನು ಅಭಿವೃದ್ಧಿಪಡಿಸುವುದರಿಂದ ಹಿಡಿದು ರೋಗಿಗಳು ಅವುಗಳನ್ನು ಸುರಕ್ಷಿತವಾಗಿ ಬಳಸುವುದನ್ನು ಖಚಿತಪಡಿಸಿಕೊಳ್ಳುವವರೆಗೆ.

ಪಿಸಿಬಿ/ ಪಿಸಿಎಂನೊಂದಿಗೆ ದ್ವಿತೀಯ ಪಿಯುಸಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಫಾರ್ಮಸಿಯು ಭಾರತ ಮತ್ತು ವಿದೇಶಗಳಲ್ಲಿ ಬಲವಾದ ಬೇಡಿಕೆಯೊಂದಿಗೆ ಬಹುವೃತ್ತಿ ಮಾರ್ಗಗಳನ್ನು ನೀಡುತ್ತದೆ.

ಫಾರ್ಮಸಿ ಕೋರ್ಸ್‌ಗಳು:

ಡಿ.ಫಾರ್ಮ (ಡಿಪ್ಲೊಮಾ ಇನ್ ಫಾರ್ಮಸಿ)
ಅವಧಿ: 2 ವರ್ಷ
ಅರ್ಹತೆ: ಪಿಯುಸಿ ವಿಜ್ಞಾನ (ಪಿಸಿಬಿ/ಪಿಸಿಎಂ)
ಅಧ್ಯಯನ: ಮೂಲ ಫಾರ್ಮಸಿ ಜ್ಞಾನ, ಔಷಧ ವಿತರಣೆ, ಆಸ್ಪತ್ರೆ ತರಬೇತಿ. ಇದು ಫಾರ್ಮಸಿ ವೃತ್ತಿಗೆ ವೇಗವಾಗಿ ಪ್ರವೇಶಿಸುವ ಮಾರ್ಗವಾಗಿದೆ.
ದೇಶದಲ್ಲಿ ನೋಂದಾಯಿತ ಔಷಧಿಕಾರರಾಗಲು ಕನಿಷ್ಠ ಅರ್ಹತೆಯು ಆಸ್ಪತ್ರೆಗಳು ಅಥವಾ ಔಷಧಾಲಯಗಳಲ್ಲಿ ಪ್ರಾಯೋಗಿಕ ತರಬೇತಿಯನ್ನು ಒಳಗೊಂಡಿದೆ.

ಬಿ.ಫಾರ್ಮ
ಅವಧಿ: 4 ವರ್ಷ
ಅರ್ಹತೆ: ಭೌತವಿಜ್ಞಾನ, ರಸಾಯನವಿಜ್ಞಾನ, ಜೀವವಿಜ್ಞಾನ/ಗಣಿತದೊಂದಿಗೆ ಪಿಯುಸಿ ವಿಜ್ಞಾನ
ಅಧ್ಯಯನ: ಸುಧಾರಿತ ಔಷಧ ವಿಜ್ಞಾನ, ಸಂಶೋಧನೆ, ಔಷಧ ಅಭಿವೃದ್ಧಿ, ಫಾರ್ಮಕಾಲಜಿ, ಔಷಧಶಾಸ್ತ್ರ, ಔಷಧೀಯ ರಸಾಯನವಿಜ್ಞಾನ, ಔಷಧೀಯ ನ್ಯಾಯಶಾಸ್ತ್ರ.

ಫಾರ್ಮ ಡಿ (ಡಾಕ್ಟರ್ ಆಫ್ ಫಾರ್ಮಸಿ)
ಅವಧಿ: 6 ವರ್ಷ
ಅರ್ಹತೆ: ಪಿಯುಸಿ ವಿಜ್ಞಾನ (ಪಿಸಿಬಿ/ಪಿಸಿಎಂ). ಕೆಲವೊಮ್ಮೆ ಪ್ರವೇಶ ಪರೀಕ್ಷೆಗಳು ಇರುತ್ತವೆ.
ಅಧ್ಯಯನ: ಕ್ಲಿನಿಕಲ್ ಫಾರ್ಮಸಿ, ರೋಗಿಯ ಆರೈಕೆ, ಆಸ್ಪತ್ರೆ ಅಭ್ಯಾಸ, ಕ್ಲಿನಿಕಲ್ ಪಾತ್ರಗಳು ಮತ್ತು ರೋಗಿಯ ನೇರ ಸಂವಹನದಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ಸೂಕ್ತವಾಗಿರುತ್ತದೆ.

ಪೂರ್ಣಪ್ರಮಾಣದ ಲೇಖನಕ್ಕೆ ನೋಡಿ
www.prajavani.net

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಯಾರೂ ಇನ್ನೊಬ್ಬರ 'ಅನುಮತಿ' ಇಲ್ಲದೆ ಅವರನ್ನಾಳುವಷ್ಟು ಶ್ರೇಷ್ಠರಲ್ಲ.

–ಅಬ್ರಹಾಂ ಲಿಂಕನ್

ಸಂಪಾದಕೀಯ

ಸಾಂವಿಧಾನಿಕ ಸಂಸ್ಥೆಗಳ ವೈಫಲ್ಯ ಪ್ರಜಾಪ್ರಭುತ್ವ ವ್ಯವಸ್ಥೆಯ ಅಣಕ

ಪಶ್ಚಿಮ ಬಂಗಾಳದ ವಿಧಾನಸಭೆಗೆ ಏಪ್ರಿಲ್ 29ರಂದು ಎರಡನೇ ಹಾಗೂ ಕೊನೆಯ ಹಂತದ ಮತದಾನ ನಡೆದ ನಂತರ, ಎಲ್ಲರ ಗಮನ ಇಂದಿನ (ಮೇ 4ರ) ಮತಎಣಿಕೆ ಪ್ರಕ್ರಿಯೆಯತ್ತ ಹೊರಳಿದೆ. ಫಲಿತಾಂಶ ಏನೇ ಆಗಿರಲಿ, ಈ ಚುನಾವಣೆಯನ್ನು ಭಾರತೀಯ ಚುನಾವಣಾ ಆಯೋಗ (ಇಸಿಐ) ನಡೆಸಿದ ರೀತಿಯೇ ಗಮನಸೆಳೆಯುವಂತಿದೆ ಹಾಗೂ ಈ ಚುನಾವಣೆಯು ಆಯೋಗದ ತಟಸ್ಥ ಧೋರಣೆ, ಕಾರ್ಯನಿರ್ವಹಣೆಯಲ್ಲಿನ ಪಾರದರ್ಶಕತೆ ಹಾಗೂ ಪ್ರಜಾಪ್ರಭುತ್ವದ ಅತ್ಯುನ್ನತ ಪ್ರಕ್ರಿಯೆಯಲ್ಲಿ ಮತದಾರರ ಭಾಗವಹಿಸುವಿಕೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಸಂವಿಧಾನದ 324ನೇ ವಿಧಿಯು ಆಯೋಗಕ್ಕೆ ಚುನಾವಣೆಯ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣದ ಅಧಿಕಾರಗಳನ್ನು ನೀಡಿದೆ. ಮತದಾರರ ಪಟ್ಟಿಯನ್ನು ತಯಾರಿಸುವ ಅಧಿಕಾರವೂ ಇದರಲ್ಲಿ ಸೇರಿದೆ. ಚುನಾವಣೆ ನಡೆಯಬೇಕಾದ ರಾಜ್ಯಗಳಲ್ಲಿ 'ಇಸಿಐ' ಕಳೆದ ವರ್ಷ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಆರಂಭಿಸಿತು. ಮತದಾರರ ಪಟ್ಟಿಯನ್ನು ಶುದ್ಧೀಕರಿಸುವ ಉದ್ದೇಶದಿಂದ ನಡೆಸಿದ ಈ ಪ್ರಕ್ರಿಯೆಯ ವಿನ್ಯಾಸ ಮತ್ತು ಅನುಷ್ಠಾನವು ಮತದಾರರ ಪಟ್ಟಿಯಿಂದ ದೊಡ್ಡ ಸಂಖ್ಯೆಯ ನೈಜ ಮತದಾರರನ್ನು ಹೊರಗೆ ಹಾಕಿದೆ. ಪಶ್ಚಿಮ ಬಂಗಾಳದಲ್ಲಿ 'ಎಸ್‌ಐಆರ್' ಮತ್ತಷ್ಟು ತೀವ್ರ ಸ್ವರೂಪ ಪಡೆಯುವುದರೊಂದಿಗೆ, ಸಂಪೂರ್ಣ ಚುನಾವಣಾ ಪ್ರಕ್ರಿಯೆ ಮೇಲೆ ಕರಿನೆರಳು ಆವರಿಸಿಕೊಂಡಿದೆ.

ಕಳೆದ ವರ್ಷದ ನವೆಂಬರ್ ತಿಂಗಳಿನಲ್ಲಿ ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯಲ್ಲಿದ್ದ 7.66 ಕೋಟಿ ಹೆಸರುಗಳು, ಡಿಸೆಂಬರ್‌ನಲ್ಲಿ ಇಸಿಐ ಪ್ರಕಟಿಸಿದ ಮೊದಲ ಕರಡು ಪಟ್ಟಿಯಲ್ಲಿ 7.08 ಕೋಟಿಗೆ ಇಳಿದವು. ಈ ಸಂಖ್ಯೆ ಈ ವರ್ಷದ ಫೆಬ್ರುವರಿಯಲ್ಲಿ ಪ್ರಕಟಗೊಂಡ ಅಂತಿಮ ಪಟ್ಟಿಯಲ್ಲಿ 6.44 ಕೋಟಿಗೆ ಇಳಿಯಿತು. ಅಂದರೆ, ರಾಜ್ಯದ ಒಟ್ಟು ಮತದಾರರಲ್ಲಿ ಶೇ 15ಕ್ಕೂ ಹೆಚ್ಚು ಜನರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಯಿತು. ಅಂತಿಮ ಪಟ್ಟಿಯಲ್ಲಿ ಸುಮಾರು 60 ಲಕ್ಷ ಮತದಾರರ ಹೆಸರುಗಳನ್ನು ಅರ್ಹ ಮತದಾರರು ಎನ್ನುವ ಸ್ಥಿತಿಯನ್ನು ನಿರ್ಣಯಿಸುವುದಕ್ಕಾಗಿ ಹೊರಗಿಡಲಾಯಿತು. ಹೆಸರುಗಳಲ್ಲಿ ಅಥವಾ ಇತರೆ ವಿವರಗಳಲ್ಲಿ ಸ್ವಲ್ಪ ಅಕ್ಷರ ವ್ಯತ್ಯಾಸಗಳಿದ್ದ ಮತದಾರರನ್ನು ಆಯೋಗ ಪ್ರತ್ಯೇಕವಾಗಿ ಗುರ್ತಿಸಿತು. ರಾಜ್ಯದಲ್ಲಿ ಸುಮಾರು 8,000 ಮೈಕ್ರೊ ಅಬ್ಸರ್ವರ್‌ಗಳನ್ನು ನೇಮಿಸುವ ಮೂಲಕ ಪರಿಸ್ಥಿತಿಯನ್ನು ಮತ್ತಷ್ಟು ಸಂಕೀರ್ಣಗೊಳಿಸಿತು. ಅರ್ಹ ಮತದಾರರು ಎಂದು ನಿರ್ಣಯಿಸಲಿಕ್ಕಾಗಿ ಮಾಡಲಾಗಿದ್ದ ಪಟ್ಟಿಯಿಂದ 27 ಲಕ್ಷ ಹೆಸರುಗಳನ್ನು ಸಾರಾಸಗಟಾಗಿ ಅಳಿಸಿ ಹಾಕಲಾಯಿತು. ಹೀಗೆ ಮತದಾರರ ಪಟ್ಟಿಯಿಂದ ಅಳಿಸಿಹಾಕಲಾದ ಬಹುತೇಕ ಹೆಸರುಗಳು ಮುಸ್ಲಿಂ ಸಮುದಾಯದ ಪ್ರಾಬಲ್ಯ ಹೊಂದಿರುವ ಕ್ಷೇತ್ರಗಳಿಗೆ ಸೇರಿದ್ದವು. ಮತದಾನದ ಹಕ್ಕು ಕಳೆದುಕೊಂಡಿರುವ ಮತದಾರರ ಅರ್ಜಿಗಳನ್ನು ಪರಿಶೀಲಿಸುವುದಕ್ಕಾಗಿ ಸುಪ್ರೀಂ ಕೋರ್ಟ್ ಹತ್ತೊಂಬತ್ತು ಮೇಲ್ಮನವಿ ನ್ಯಾಯಮಂಡಳಿಗಳನ್ನು ರಚಿಸಿದರೂ, ಆ ಮಂಡಳಿಗಳು ಅತ್ಯಂತ ವಿಳಂಬವಾಗಿ ರೂಪುಗೊಂಡವು ಹಾಗೂ ಅವುಗಳ ಕಾರ್ಯನಿರ್ವಹಣೆಗೆ ನಿರ್ದಿಷ್ಟ ಕಾಲಮಿತಿ ಗೊತ್ತುಪಡಿಸಿರಲಿಲ್ಲ ಎನ್ನುವುದು ಗಮನಾರ್ಹ. 27 ಲಕ್ಷ ಅರ್ಜಿಗಳಲ್ಲಿ ನ್ಯಾಯಮಂಡಳಿಗಳು ಮೊದಲ ಹಂತದ ಚುನಾವಣೆಯ ವೇಳೆಗೆ ಬರೀ 139 ಹೆಸರುಗಳನ್ನಷ್ಟೇ ಮತದಾರರ ಪಟ್ಟಿಗೆ ಸೇರಿಸಿದರೆ, ಎರಡನೇ ಹಂತದ ಮತದಾನದ ವೇಳೆಗೆ 1,468 ಹೆಸರುಗಳನ್ನು ಸೇರ್ಪಡೆ ಮಾಡಿದವು. ಈ ಮಂಡಳಿಗಳ ಕಾರ್ಯವೈಖರಿ ಗೊಂದಲದಿಂದಲೂ ಹಾಗೂ ಪಾರದರ್ಶಕತೆಯ ಕೊರತೆಯಿಂದಲೂ ಕೂಡಿತ್ತು. ತಿರಸ್ಕರಿಸಲಾದ ಅರ್ಜಿಗಳ ಸಂಖ್ಯೆ ಎಷ್ಟೆನ್ನುವುದೂ ಸ್ಪಷ್ಟವಾಗಿಲ್ಲ. ನ್ಯಾಯಮಂಡಳಿಗಳ ಈಗಿನ ವೇಗವೇ ಮುಂದುವರಿದರೆ, ಬಾಕಿ ಉಳಿದಿರುವ ಅರ್ಜಿಗಳನ್ನು ಇತ್ಯರ್ಥಗೊಳಿಸಲು ವರ್ಷಗಳೇ ಬೇಕಾಗಬಹುದು. ಇದರ ಅರ್ಥ, ಲಕ್ಷಾಂತರ ಜನರ ಮತದಾರದ ಹಕ್ಕುಗಳು ವರ್ಷಗಳ ಕಾಲ ಸ್ಥಗಿತಗೊಳ್ಳಲಿವೆ; ಮುಂದಿನ ಲೋಕಸಭೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕೂಡ ಅವರ ಮತದಾನದ ಅನರ್ಹತೆ ಮುಂದುವರಿಯಲಿದೆ.



ಲಕ್ಷಾಂತರ ಮತದಾರರನ್ನು ಹೊರಗಿಟ್ಟು ಪಶ್ಚಿಮ ಬಂಗಾಳದಲ್ಲಿ ಚುನಾವಣೆ ನಡೆಸಲಾಗಿದೆ. ಮತದಾರರ ಹಿತಾಸಕ್ತಿ ರಕ್ಷಿಸುವಲ್ಲಿ ಸಾಂವಿಧಾನಿಕ ಸಂಸ್ಥೆಗಳು ವಿಫಲವಾಗಿವೆ.

27 ಲಕ್ಷ ಜನರಿಗೆ, ಅಂದರೆ ಒಟ್ಟು ಮತದಾರರಲ್ಲಿ ಶೇ 4ರಷ್ಟು ಜನರಿಗೆ ತಮ್ಮದಲ್ಲದ ತಪ್ಪಿಗಾಗಿ ಚುನಾವಣೆಯಲ್ಲಿ ಮತ ಚಲಾಯಿಸಲು ಸಾಧ್ಯವಾಗಿಲ್ಲ. ನ್ಯಾಯಯುತವಾಗಿ ಹಾಗೂ ಆದಷ್ಟೂ ಹೆಚ್ಚು ಮತದಾರರು ಭಾಗಿಯಾಗುವ ಅವಕಾಶಗಳನ್ನು ಕಲ್ಪಿಸಿ ಚುನಾವಣೆಗಳನ್ನು ನಡೆಸುವುದು ಆಯೋಗದ ಸಾಂವಿಧಾನಿಕ ಕರ್ತವ್ಯವಾಗಿದೆ. ಆದರೆ, ಪಶ್ಚಿಮ ಬಂಗಾಳದಲ್ಲಿ ಲಕ್ಷಾಂತರ ಮತದಾರರ ಹಕ್ಕುಗಳನ್ನು ಕಸಿದುಕೊಳ್ಳಲು ಆಯೋಗ ತನ್ನ ಪರಮಾಧಿಕಾರ ಬಳಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅನುಮಾನದ ಲಾಭವನ್ನು ಮತದಾರರಿಗೆ ನೀಡುವ ಮೂಲಕ ಅವರನ್ನು ಮತದಾರರ ಪಟ್ಟಿಯಲ್ಲಿ ಉಳಿಸಬೇಕಾಗಿತ್ತು. ಆದರೆ, ಬಿಜೆಪಿಯ ರಾಜಕೀಯ ಹಿತಾಸಕ್ತಿಗೆ ಅನುಕೂಲವಾಗುವಂತೆ 'ಎಸ್‌ಐಆರ್' ಪ್ರಕ್ರಿಯೆಯನ್ನು ಆಯೋಗ ನಡೆಸಿದೆ. ಒಟ್ಟು ಮತದಾರರಲ್ಲಿ ಶೇ 4ರಷ್ಟು ಜನರನ್ನು ಹೊರಗಿಟ್ಟು ನಡೆಸುವ ಚುನಾವಣೆ ಪ್ರಹಸನವೇ ಸರಿ. ಪಟ್ಟಿಯಿಂದ ಹೊರಗುಳಿದ ಮತದಾರರ ಸಂಖ್ಯೆಯು ಕೆಲವು ಕ್ಷೇತ್ರಗಳಲ್ಲಿ ಸೋಲು ಮತ್ತು ಗೆಲುವಿನ ಅಂತರವನ್ನು ನಿರ್ಣಯಿಸುವಷ್ಟು ಗಣನೀಯವಾಗಿದೆ.

'ಎಸ್‌ಐಆರ್' ಪ್ರಕ್ರಿಯೆಯನ್ನು ಮೊದಲ ಬಾರಿಗೆ ಬಿಹಾರದಲ್ಲಿ ನಡೆಸಿದಾಗ, ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ಪೌರತ್ವದ ಪರೀಕ್ಷೆಯಾಗಿ ಪರಿವರ್ತಿಸಲು ಆಯೋಗವು ಪ್ರಯತ್ನಿಸಿತು. ಆದರೆ, ಮತದಾರರ ಗುರುತಿನ ಪುರಾವೆಯಾಗಿ ಆಧಾರ್ ಅನ್ನು ಸ್ವೀಕರಿಸುವಂತೆ, ಹೆಸರು ಅಳಿಸುವ ಸಂದರ್ಭದಲ್ಲಿ ಕಾರಣಗಳನ್ನು ಬಹಿರಂಗಪಡಿಸಲು ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನಗಳು, ಆಯೋಗಕ್ಕೆ ಕಡಿವಾಣ ಹಾಕಿದವು ಹಾಗೂ ಎಸ್‌ಐಆರ್ ಪ್ರಕ್ರಿಯೆ ಕಾಠಿಣ್ಯವನ್ನು ಕುಗ್ಗಿಸಿದವು. ಆದರೆ, ಪಶ್ಚಿಮ ಬಂಗಾಳದ ಸಂದರ್ಭದಲ್ಲಿ ಮತದಾರರನ್ನು ಕೋರ್ಟ್ ನಿರಾಶೆಗೊಳಿಸಿತು. ಆಯೋಗಕ್ಕೆ ಹೆಚ್ಚಿನ ಸ್ವಾತಂತ್ರ್ಯ ನೀಡಿತು; ಆ ಮೂಲಕ ಪ್ರಕ್ರಿಯೆ ವಿಳಂಬಗೊಳ್ಳುವುದು ಹಾಗೂ ಲಕ್ಷಾಂತರ ಮತದಾರರ ಹಕ್ಕುಗಳನ್ನು ಕಸಿದುಕೊಳ್ಳುವುದಕ್ಕೆ ಒಪ್ಪಿಗೆ ನೀಡಿದಂತಾಯಿತು. ನಾಗರಿಕ ಹಕ್ಕುಗಳು ನಿರಾಕರಣೆಗೊಳಗಾದಾಗ ಮಧ್ಯಪ್ರವೇಶಿಸುವುದು ನ್ಯಾಯಾಲಯದ ಕರ್ತವ್ಯ. ಆ ಕರ್ತವ್ಯ ಪಶ್ಚಿಮ ಬಂಗಾಳಕ್ಕೆ ಸಂಬಂಧಿಸಿದಂತೆ ಪಾಲನೆಯಾಗಲಿಲ್ಲ. ಆದ್ದರಿಂದ, ಕೇರಳದಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಸರಿಯಾದ ಅವಲೋಕನ ಹಾಗೂ ಸಾಂಕೇತಿಕ ನಿರ್ಧಾರಗಳನ್ನು ಸುಪ್ರೀಂ ಕೋರ್ಟ್ ತೆಗೆದುಕೊಂಡರೂ, ಆಯೋಗವು ಅನ್ಯರಂತೆ ನಡೆಸಿಕೊಂಡ ಮತದಾರರ ಆತಂಕಗಳಿಗೆ ಸಮರ್ಪಕವಾಗಿ ಸ್ಪಂದಿಸಲಿಲ್ಲ.

ಪಶ್ಚಿಮ ಬಂಗಾಳದಲ್ಲಿ ಸಂಪೂರ್ಣ ಚುನಾವಣಾ ಪ್ರಕ್ರಿಯೆಯನ್ನು ಆಯೋಗ ತನ್ನ ಹಿಡಿತಕ್ಕೆ ತೆಗೆದುಕೊಂಡಿತು. ಮುಖ್ಯ ಕಾರ್ಯದರ್ಶಿ ಮತ್ತು ಉನ್ನತ ಪೊಲೀಸ್ ಅಧಿಕಾರಿಗಳು ಸೇರಿದಂತೆ ಇಡೀ ಆಡಳಿತಯಂತ್ರವನ್ನು ಬದಲಿಸಿ, ಆ ಸ್ಥಾನಗಳಲ್ಲಿ ತನ್ನ ಆಯ್ಕೆಯ ಅಧಿಕಾರಿಗಳನ್ನು ನೇಮಿಸಿತು. 2.4 ಲಕ್ಷ ಕೇಂದ್ರ ಭದ್ರತಾ ಸಿಬ್ಬಂದಿ ಮತ್ತು ಸಶಸ್ತ್ರ ಪಡೆಗಳ ವಾಹನಗಳನ್ನು ಚುನಾವಣಾ ಕರ್ತವ್ಯಕ್ಕಾಗಿ ನಿಯೋಜಿಸಲಾಯಿತು. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಕೇಂದ್ರದಲ್ಲಿ ಆಡಳಿತದಲ್ಲಿರುವ ಪಕ್ಷದ ನಾಯಕರ ವಿರುದ್ಧದ ಚುನಾವಣಾ ನೀತಿಸಂಹಿತೆಯ ಉಲ್ಲಂಘನೆಯ ದೂರುಗಳನ್ನು ನಿರ್ಲಕ್ಷಿಸಿತು. ಪಶ್ಚಿಮ ಬಂಗಾಳ ಚುನಾವಣೆಗೆ ಸಂಬಂಧಿಸಿದಂತೆ ಅತ್ಯುನ್ನತ ಸಾಂವಿಧಾನಿಕ ಸಂಸ್ಥೆಗಳು ತಮ್ಮ ಕರ್ತವ್ಯವನ್ನು ನಿರ್ವಹಿಸುವಲ್ಲಿ ಹಾಗೂ ಜನರ ಹಕ್ಕುಗಳನ್ನು ರಕ್ಷಿಸುವಲ್ಲಿ ವಿಫಲವಾದವು. ನ್ಯಾಯಸಮ್ಮತ ಚುನಾವಣೆ ನಡೆಸಲು ಆಯೋಗ ಅಶಕ್ತವಾದುದಕ್ಕೆ ಹಾಗೂ ಅದನ್ನು ತಡೆಯಲು ಸುಪ್ರೀಂ ಕೋರ್ಟ್ ವಿಫಲವಾದುದಕ್ಕೆ ಸಂಕೇತವಾಗಿ ಪಶ್ಚಿಮ ಬಂಗಾಳದ ಚುನಾವಣೆಯು ಭಾರತದ ಚುನಾವಣಾ ಚರಿತ್ರೆಯಲ್ಲಿ ಉಳಿಯಲಿದೆ. ಮತದಾರರನ್ನು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷದ ಚುನಾವಣಾ ಯಂತ್ರವಾಗಿ ಆಯೋಗವು ತನ್ನನ್ನು ಬಿಂಬಿಸಿಕೊಂಡಿತು. ಈ ದಿನದ ಮತಎಣಿಕೆಯಲ್ಲಿ ಹೊರಬೀಳುವ ಅಂಕಿಅಂಶಗಳು ಏನೇ ಇರಲಿ, ಅವು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಶುಭಸೂಚಕವಲ್ಲ.

25 ವರ್ಷಗಳ ಹಿಂದೆ

ಶುಕ್ರವಾರ, 4-5-2001

• ಬಹುತೇಕ ಶಾಂತ, ಶೇ 70 ಮತದಾನ

ಬೆಂಗಳೂರು, ಮೇ 2– ರಾಜ್ಯದ ನಾಲ್ಕು ಮಹಾನಗರಪಾಲಿಕೆಗಳೂ ಸೇರಿದಂತೆ 148 ಸ್ಥಳೀಯ ಸಂಸ್ಥೆಗಳಿಗೆ ಇಂದು ಶೇ 70ರಷ್ಟು ಮತದಾನವಾಗಿದ್ದು, ಸಣ್ಣ ಪುಟ್ಟ ಹಿಂಸಾಚಾರದ ಘಟನೆಗಳನ್ನು ಬಿಟ್ಟರೆ ಒಟ್ಟಾರೆ ಮತದಾನ ಶಾಂತಿಯುತವಾಗಿತ್ತು.

• ದೀನ್‌ದಾರ್ ಸಂಘಟನೆ ನಿಷೇಧ

ನವದೆಹಲಿ, ಮೇ 3– ಕರ್ನಾಟಕ, ಆಂಧ್ರಪ್ರದೇಶ ಮತ್ತು ಗೋವಾ ರಾಜ್ಯಗಳಲ್ಲಿ ಕಳೆದ ವರ್ಷ ಚರ್ಚ್‌ಗಳಲ್ಲಿ ಬಾಂಬ್ ಸ್ಫೋಟ ನಡೆಸಿದ್ದ ದೀನ್‌ದಾರ್ ಅಂಜುಮಾನ್ ಸಂಘಟನೆ ಪಾಕಿಸ್ತಾನದೊಂದಿಗೆ ಸಂಬಂಧ ಹೊಂದಿದೆ ಎಂದು ಕೇಂದ್ರ ಸರ್ಕಾರ ಇಂದು ಅದನ್ನು ನಿಷೇಧಿಸಿದೆ.

75 ವರ್ಷಗಳ ಹಿಂದೆ

ಶುಕ್ರವಾರ, 4-5-1951

• 'ಟೈಂ'ನಲ್ಲಿ ವಿಶ್ವದ ನೆಹರೂ

ನ್ಯೂಯಾರ್ಕ್, ಮೇ 3– 'ವಿಶ್ವದ ನೆಹರೂ' ಎಂದು ನೆಹರೂರವರ ಚಿತ್ರವನ್ನು ಜನಪ್ರಿಯ ಸಾಪ್ತಾಹಿಕ 'ಟೈಂ' ಪತ್ರಿಕೆ ಈ ವಾರ ಮುಖಪತ್ರದಲ್ಲಿ ಪ್ರಕಟಿಸಿದೆ. ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ನಡುವೆ ತಟಸ್ಥವಾಗಿರಬೇಕೆಂಬ ನೆಹರೂ ನೀತಿಯ ವಿವರಣೆಗಾಗಿ ಸಂಚಿಕೆ ತನ್ನ ಅಂತರರಾಷ್ಟ್ರೀಯ ವಿಭಾಗವನ್ನು ಪೂರ್ಣವಾಗಿ ವಿನಿಯೋಗಿಸಿದೆ. 'ತಮ್ಮ ಕಾಲದ ಮಹಾವ್ಯಕ್ತಿ ಪ್ರಪಂಚದಲ್ಲಿ ನೆಹರೂ ತಮ್ಮ ತಾಟಸ್ಥ್ಯವನ್ನು ಪೋಷಿಸಿದ್ದಾರೆ' ಎಂದು 'ಟೈಂ' ಅಭಿಪ್ರಾಯಪಟ್ಟಿದೆ.

'ಪ್ರಕೃತಿ' ಎಚ್ಚರಿಸಿದೆ ಗಮನಿಸಿದಿರಾ?



ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಜೀವದ ಚೈತನ್ಯವನ್ನು ಕುಗ್ಗಿಸುವಂತಿರುವ ಈ ಬಾರಿಯ ಬೇಸಿಗೆಕಾಲ, ಹವಾಮಾನ ಬದಲಾವಣೆ ಕುರಿತಂತೆ ನಮ್ಮ ಮನೆಬಾಗಿಲಿಗೆ ಬಂದಿರುವ ಎಚ್ಚರಿಕೆ ಸಂದೇಶವೂ ಹೌದು. ಪ್ರಕೃತಿಯಲ್ಲಿ ಆಗಿರುವ ವ್ಯತ್ಯಾಸದಲ್ಲಿ 'ನನ್ನ' ಹಾಗೂ 'ನಮ್ಮ' ಪಾಲು ಎಷ್ಟಿದೆ ಎನ್ನುವ ಅರಿವು ಮೂಡದಿದ್ದರೆ, ಪಾಪಪ್ರಜ್ಞೆ ಕಾಡದೆ ಹೋದರೆ, ಕುಳಿತಿರುವ ಕೊಂಬೆಗೇ ಕೊಡಲಿಪೆಟ್ಟು ಹಾಕಿದಂತೆ ಆಗುತ್ತದೆ.

ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ 'ಪ್ರಕೃತಿ' ಪದವನ್ನು ಮನುಷ್ಯನ ದೇಹಕ್ಕೂ ನಿಸರ್ಗಕ್ಕೂ ಸಂವಾದಿಯಾಗಿ ಬಳಸಲಾಗುತ್ತದೆ. 'ಅಂವ ತನ್ನ ಪ್ರಕೃತಿ ಭಾಳ ಚೊಲೊ ಇಟ್ಕಂಡಾನ ನೋಡು...' ಅಂದರೆ, ಆತ ತನ್ನ ದೇಹಾರೋಗ್ಯ ಚೆನ್ನಾಗಿ ಕಾಪಾಡಿಕೊಂಡಿದ್ದಾನೆ ಎಂದೇ ಅರ್ಥ. ಎಷ್ಟೊಂದು 'ಮೌಲ್ಯಗರ್ಭಿತ' ಹೋಲಿಕೆ! ನಮ್ಮ ಹಳೆಯ ತಲೆಮಾರಿನ ಜನಪದರು ಮನುಷ್ಯನ ದೇಹ ಮತ್ತು ಪ್ರಕೃತಿಯಲ್ಲಿನ ಆಗುಹೋಗುಗಳನ್ನು, ಪರಸ್ಪರ ಸಂಬಂಧವನ್ನು, ಅವಲಂಬನೆಯನ್ನು ಬಹಳ ಚೆನ್ನಾಗಿ ಅರಿತಿದ್ದರು ಎಂಬುದಕ್ಕೆ ಇಂಥ ಸಣ್ಣಪುಟ್ಟ ಸಹಜ ನಡವಳಿಕೆಗಳು ಬಹುದೊಡ್ಡ ರುಜುವಾತು ಒದಗಿಸುತ್ತವೆ.

ಅಚ್ಚರಿಯ ಸಂಗತಿಯೆಂದರೆ, ಮನುಷ್ಯ ಮತ್ತು ಪ್ರಕೃತಿ ಕುರಿತ ನಮ್ಮ ನೆಲಮೂಲ ತಿಳಿವಳಿಕೆ ಜಾಗತಿಕ ಮಾನ್ಯತೆ ಹಾಗೂ ಪ್ರಸ್ತುತತೆ ಹೊಂದಿರುವುದು. ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಹವಾಮಾನ ಬದಲಾವಣೆ ಕುರಿತ 'ಅಂತರ್ ಸರ್ಕಾರಿ ಸಮಿತಿ' (Intergovernmental Panel on Climate Change) ಘೋಷಿಸಿದಂತೆ, 'ನಮ್ಮ ಗ್ರಹ ಮತ್ತು ಜನರ ಭವಿಷ್ಯದ ಯೋಗಕ್ಷೇಮವನ್ನು ರೂಪಿಸುವ ಸವಾಲುಗಳು ಪರಸ್ಪರ ಸಂಬಂಧ ಹೊಂದಿವೆ. ಈ ಸಮಿತಿಯು ಹವಾಮಾನ ಬದಲಾವಣೆ ಕುರಿತ ಜಾಗತಿಕ ಬೆಳವಣಿಗೆಗಳನ್ನು ವೈಜ್ಞಾನಿಕ ತಳಹದಿಯಲ್ಲಿ ಅಧ್ಯಯನ ಮಾಡುವ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

ಇನ್ನೂ ಅಚ್ಚರಿ ಮತ್ತು ಆತಂಕಕಾರಿ ಸಂಗತಿಯೆಂದರೆ, ಮನುಷ್ಯ ಸಮುದಾಯ ಪ್ರಕೃತಿಯ ಸುಸ್ಥಿರತೆಗೆ ಅಪಾಯ ತರುವ ಹಾದಿಯಲ್ಲಿ ಸಾಕಷ್ಟು ದೂರ ಸಾಗಿಬಂದಿರುವುದು. ಈ ದಾರಿಯಲ್ಲಿ ಇನ್ನಷ್ಟು ದೂರ ನಡೆಸುತ್ತಾ ಡೆಡ್ ಎಂಡ್ ತಲಪಿಸಲು ಆಧುನಿಕ ಬದುಕಿನ ಶೈಲಿಗಳು, ಧೋರಣೆಗಳು ಮತ್ತು ತಾತ್ಕಾಲಿಕ ಸಂತೃಪ್ತಿಗಳು ತುದಿಗಾಲ ಮೇಲೆ ನಿಂತಿವೆ. ಹವಾಮಾನ ವೈಪರೀತ್ಯದ ಪರಿಣಾಮಗಳು ನಮ್ಮ ಅನುಭವಕ್ಕೆ ಬಂದಾಗ, ಸಂದರ್ಭಾನುಸಾರ ವಿಸ್ಮಯ ಎಂಬಂತೆ ಪ್ರತಿಕ್ರಿಯಿಸುತ್ತಿದ್ದೇವೆ. ನೈಜ ಕಾರಣಗಳು ಅರಿವಿಗೆ ನಿಲುಕಿದರೂ ಮರೆವೆಯ ಕಪಾಟಿನಲ್ಲಿ ಮುಚ್ಚಿಟ್ಟು ಡೆಡ್ ಎಂಡ್ ದಾರಿಯಲ್ಲಿ ಮುಂದಡಿ ಇಡುವುದನ್ನು ರೂಢಿಸಿಕೊಂಡುಬಿಟ್ಟಿದ್ದೇವೆ.

'ಅಬ್ಬಾ...! ಎಂಥಾ ಸೆಕೆ, ಬೆವರು ಬಸಿಯುತ್ತಿದೆ' ಎಂದು ಬಿಸಿಲಿಗೆ; 'ಅಯ್ಯೋ...! ಕೊಚ್ಚಿಕೊಂಡು ಹೋಗುವ ಮಳೆ' ಎಂದು ಮಳೆರಾಯನಿಗೆ ಹಿಡಿಶಾಪ ಹಾಕುವುದನ್ನು ಎಲ್ಲೆಡೆ ಕಾಣುತ್ತೇವೆ. ಅಂತೆಯೇ 'ವರುಣನ ಆರ್ಭಟಕ್ಕೆ ಜೀವ ಬಲಿ' ಎಂದೋ, 'ರಣ ಬಿಸಿಲಿಗೆ ತತ್ತರಿಸಿದ ಜನ' ಎಂದೋ ಬಿತ್ತರಿಸುವ ಸುದ್ದಿವಾಹಿನಿಗಳ ಅರಚಾಟವೂ ಸಾಮಾನ್ಯ. ಆದರೆ ಇಂತಹ ಹವಾಮಾನ ವೈಪರೀತ್ಯಕ್ಕೆ 'ನನ್ನ' ಕಾಣಿಕೆ ಏನು ಎಂದು ಮನಸ್ಸನ್ನು ಕೇಳಿಕೊಳ್ಳುವ ವ್ಯಕ್ತಿ, ಈ ಅನಾಹುತಕಾರಿ ವಿದ್ಯಮಾನಕ್ಕೆ 'ನಮ್ಮ' ಕೊಡುಗೆ ಎಷ್ಟು ಎಂದು ಪ್ರಶ್ನಿಸಿಕೊಳ್ಳುವ ಸಮುದಾಯ ವಿರಳಾತಿ ವಿರಳ.

ಕಳೆದ ಒಂದೇ ತಿಂಗಳಲ್ಲಿ ಅತಿಯಾದ ಬಿಸಿಲು ಮತ್ತು ಅಕಾಲಿಕ ಆಲಿಕಲ್ಲು ಮಳೆ ಉಂಟು ಮಾಡಿದ ಗೊಂದಲ ಗಮನಿಸಿದರೆ ಮೇಲಿನ ಮಾತುಗಳ ತಿರುಳು ಹೆಚ್ಚು ಸ್ಪಷ್ಟವಾಗಿ ಗೋಚರಿಸಬಹುದು. ಋತುಮಾನಕ್ಕೆ ತಕ್ಕಂತೆ ಬಿಸಿಲು, ಮಳೆ, ಚಳಿ ಬಂದುಹೋಗುವುದು ಸಹಜ. ಮುಂಗಾರುಪೂರ್ವ ಮಳೆಯಲ್ಲಿ ಆಲಿಕಲ್ಲು ಬೀಳುವುದೂ ಅಪರೂಪವೇನಲ್ಲ. ಆದರೆ ಇವೆಲ್ಲವೂ ವಿಪರೀತಕ್ಕೆ ತಲಪಿರುವುದು ವಿಶೇಷ ಮಾತ್ರವಲ್ಲ, ಆಪತ್ತಿನ ಮುನ್ಸೂಚನೆಗಳು ಕೂಡ. ಮೊನ್ನೆಯ ಮಳೆಯಲ್ಲಿ ಸುರಿದ ರಾಶಿ ರಾಶಿ ಆಲಿಕಲ್ಲು ಹಿಂದಿನಂತೆ ಸಂಭ್ರಮ ಹೊತ್ತು ತಂದವೆಂದು ಭಾವಿಸಿದರೆ ತಪ್ಪಾಗುತ್ತದೆ.

ಇದೀಗ ಹವಾಮಾನ ವೈಪರೀತ್ಯದ ದುಷ್ಪರಿಣಾಮಗಳು ದೂರದ ಮಾರಿಯಾಗಿ ಉಳಿದಿಲ್ಲ; ನಮ್ಮೆಲ್ಲರ ಮನೆ ಬಾಗಿಲಿಗೇ ಬಂದು ನಿಂತಿರುವ, ನಾವೇ ಆಹ್ವಾನಿಸಿಕೊಂಡಿರುವ ಅತಿಥಿಗಳು! ಹದಗೆಡುತ್ತಿರುವ ಮಾನವನ ಮತ್ತು ಪ್ರಕೃತಿಯ ಆರೋಗ್ಯ ಎಚ್ಚರಿಕೆಯ ಗಂಟೆ ಬಾರಿಸುತ್ತಲೇ ಇವೆ. ಗಾಳಿ, ನೀರು ಮತ್ತು ಭೂಮಿ ಮನುಷ್ಯನಿರ್ಮಿತ ಮಾಲಿನ್ಯದಿಂದ ನಲುಗುತ್ತಿವೆ. ಹವಾಮಾನ ವೈಪರೀತ್ಯ ತಂದೊಡ್ಡಿರುವ ಅಪಾಯಕ್ಕೆ ಯಾವ ಜಾತಿ, ಧರ್ಮ, ವರ್ಗ, ದೇಶ ಹೊರತಲ್ಲ ಎಂಬುದು ಗಮನಾರ್ಹ.

ಹಾರ್ವರ್ಡ್ ವಿಶ್ವವಿದ್ಯಾಲಯದ 'ಸಲಾಟಾ ಇನ್‌ಸ್ಟಿಟ್ಯೂಟ್ ಫಾರ್ ಕ್ಲೈಮೇಟ್ ಅಂಡ್ ಸಸ್ಟೇನೆಬಿಲಿಟಿ' ವಿಭಾಗವು ಕಳೆದ ಏಪ್ರಿಲ್ ತಿಂಗಳಿನಲ್ಲಿ ಪ್ರಕಟಿಸಿರುವ 'ಭಾರತದ ತೀವ್ರ ತಾಪಮಾನ ಕುರಿತ ವಿಮರ್ಶಾತ್ಮಕ ನೋಟಗಳು' ಎಂಬ ಅಧ್ಯಯನ ವರದಿಯಲ್ಲಿ ಉಲ್ಲೇಖಿಸಿರುವ ವಾಸ್ತವಾಂಶಗಳು ಗಮನಾರ್ಹವಾಗಿವೆ. 2047ರ ಹೊತ್ತಿಗೆ ಹವಾಮಾನ ವೈಪರೀತ್ಯ ತಾಳಿಕೊಳ್ಳುವಂತೆ ಭಾರತವನ್ನು ಸಜ್ಜುಗೊಳಿಸುವ ಸಾಧ್ಯತೆಗಳನ್ನು ಕುರಿತು ಚರ್ಚಿಸಲು ಮಾರ್ಚ್ 2025ರಲ್ಲಿ ನವದೆಹಲಿಯಲ್ಲಿ ಆಯೋಜಿಸಿದ್ದ ಕಾರ್ಯಾಗಾರದ ಫಲವಾಗಿ ಈ ಅಧ್ಯಯನ ವರದಿಯನ್ನು ಸಿದ್ಧಪಡಿಸಲಾಗಿದೆ.

ಹವಾಮಾನಶಾಸ್ತ್ರ, ಸಾರ್ವಜನಿಕ ಆರೋಗ್ಯ, ಔಷಧ, ಕಾರ್ಮಿಕ, ವಾಣಿಜ್ಯ, ಕೃಷಿ ಮತ್ತು ನಗರ ಯೋಜನೆಯ ತಜ್ಞರು ಭಾಗವಹಿಸಿದ್ದ ಕಾರ್ಯಾಗಾರದಲ್ಲಿ ಉಪಖಂಡ ಎದುರಿಸುತ್ತಿರುವ ಹವಾಮಾನ ಸಂಬಂಧಿತ ಸವಾಲುಗಳನ್ನು ಪರಿಶೀಲಿಸಲಾಗಿದೆ. ದೇಶದ ಕೃಷಿಕ್ಷೇತ್ರ, ಜನಾರೋಗ್ಯ, ವಸತಿ ಪ್ರದೇಶ ಮತ್ತು ಕಾರ್ಮಿಕರ ಮೇಲೆ ಶಾಖದ ಅಲ್ಪಾವಧಿ ಮತ್ತು ದೀರ್ಘಾವಧಿ ಪ್ರಭಾವವನ್ನು ಪರಿಶೀಲಿಸಲಾಗಿದೆ. ಮುಂಬರುವ ದಶಕಗಳಲ್ಲಿ ಭಾರತದ ಎದುರು ತೆರೆದುಕೊಳ್ಳುವ ಹವಾಮಾನ ಸಂಬಂಧಿ ಸಮಸ್ಯೆಗಳು ಮತ್ತು ಪರಿಹಾರಗಳ ಅವಲೋಕನ ನಡೆದಿರುವುದು ಮಹತ್ವದ ಬೆಳವಣಿಗೆ.

ತಾಪಮಾನ ಏರಿಕೆ ನಮ್ಮೆದುರು ಹೂಂಕರಿಸುತ್ತಿರುವ ಕಟು ವಾಸ್ತವ ಎಂಬುದರಲ್ಲಿ ಎರಡನೇ ಮಾತಿಲ್ಲ. ಆದರೆ ಎಷ್ಟು ಡಿಗ್ರಿಯನ್ನು ತೀವ್ರ ತಾಪಮಾನ ಎಂದು ಪರಿಗಣಿಸುವುದು? ಮಾನವನ ಆರೋಗ್ಯ, ಅಗತ್ಯ ವ್ಯವಸ್ಥೆಗಳ ಸಂಯೋಜನೆ, ಸುರಕ್ಷತಾ ಕ್ರಮಗಳನ್ನು ಯೋಜಿಸಲು, ತಾಪಮಾನ ಕ್ರಿಯಾಯೋಜನೆಗಳನ್ನು ಸಕ್ರಿಯಗೊಳಿಸಲು 'ತೀವ್ರ ತಾಪಮಾನ' ಎಂಬ ಸಾಪೇಕ್ಷ ಪದದ ವ್ಯಾಖ್ಯಾನ ಬಹಳ ಮುಖ್ಯ.


ವಿಜ್ಞಾನವು ಸಾಮಾನ್ಯವಾಗಿ 35 ಡಿಗ್ರಿ ವೆಟ್–ಬಲ್ಬ್ ತಾಪಮಾನವನ್ನು ಬದುಕುಳಿಯುವ ಮಿತಿ ಎಂದು ಉಲ್ಲೇಖಿಸುತ್ತದೆಯಾದರೂ, ವಾಸ್ತವದಲ್ಲಿ ಇದು ಅತ್ಯಂತ ಸಂಕೀರ್ಣ ಸಂಗತಿ. ಮನುಷ್ಯರ ಆರೋಗ್ಯದ ಮೇಲಿನ ವ್ಯತಿರಿಕ್ತ ಪರಿಣಾಮಗಳು ಈ ಮಿತಿಗಿಂತ ಬಹಳ ಮುಂಚೆಯೇ ಆರಂಭವಾಗುತ್ತವೆ. ಶಾಖವು ಹೃದಯರಕ್ತನಾಳದ ಒತ್ತಡ, ಮೂತ್ರಪಿಂಡದ ಗಾಯ ಮತ್ತು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ನಿಜವಾದ ಪ್ರಶ್ನೆ 'ಎಷ್ಟು ಬಿಸಿಲು ತುಂಬಾ ಬಿಸಿ?' ಎಂಬುದು ಅಲ್ಲ; ಯಾರಿಗೆ ಮತ್ತು ಯಾವುದರ ಮೇಲೆ ಎಷ್ಟು ಪ್ರಭಾವ ಬೀರುತ್ತದೆ ಎಂಬುದರ ಮೇಲೆ 'ತೀವ್ರ ತಾಪಮಾನ' ನಿರ್ಧಾರವಾಗುತ್ತದೆ.

ಒಬ್ಬ ನಿರ್ಮಾಣ ಕೆಲಸಗಾರ, ಕೊಳೆಗೇರಿಯಲ್ಲಿರುವ ವೃದ್ಧ ವ್ಯಕ್ತಿ ಮತ್ತು ಕಚೇರಿ ಕೆಲಸಗಾರ ಸಂಪೂರ್ಣವಾಗಿ ವಿಭಿನ್ನ ಶಾಖದ ಪರಿಣಾಮಗಳನ್ನು ಅನುಭವಿಸುತ್ತಾರೆ. ಭಾರತದಲ್ಲಿ ಸುಮಾರು 38 ಕೋಟಿ ಕಾರ್ಮಿಕರು ಶಾಖಕ್ಕೆ ಒಡ್ಡಿಕೊಳ್ಳುವ ಕೆಲಸಕಾರ್ಯಗಳಲ್ಲಿ ನಿರತರಾಗಿದ್ದಾರೆ. 2030ರ ವೇಳೆಗೆ 20 ಕೋಟಿ ಜನರು ಮಾರಕ ಶಾಖದ ಪರಿಣಾಮಕ್ಕೆ ಈಡಾಗುವ ಸಾಧ್ಯತೆ ಇದೆ. ಸಾರ್ವಜನಿಕ ನೀತಿನಿರೂಪಣೆ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿ ವಂಚನೆಗೆ ಈಡಾಗುವುದು ಅಸಂಘಟಿತ ವಲಯ. ಅದರಂತೆ ಭಾರತದ ಕಾರ್ಮಿಕ ಸಮುದಾಯ ತಾಪಮಾನ ಏರಿಕೆ ಬಿಕ್ಕಟ್ಟಿನ ಪರಿಣಾಮವನ್ನು ಅತಿಯಾಗಿ ಅನುಭವಿಸುತ್ತದೆ. ದೇಶದಲ್ಲಿ ಸುಮಾರು ಶೇ 90 ಕಾರ್ಮಿಕರು ಅನೌಪಚಾರಿಕ ವಲಯದಲ್ಲಿ ಬರುತ್ತಾರೆ. ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳು, ಸೌಲಭ್ಯಗಳು ಅವರಿಗೆ ಅನ್ವಯಿಸುವುದೇ ಇಲ್ಲ. ಪರಿಣಾಮವಾಗಿ, ಕಾರ್ಮಿಕರು ತಾಪಮಾನದ ಅಪಾಯ ಮತ್ತು ಹೊಂದಿಕೊಳ್ಳುವ ತಾಪತ್ರಯ ಎರಡೂ ಸವಾಲನ್ನು ಸ್ವೀಕರಿಸಬೇಕಾಗಿದೆ.

1980ರಿಂದ ಭಾರತದಲ್ಲಿ ಕಂಡುಬರುವ ತಾಪಮಾನ ಏರಿಕೆಯ ಪ್ರವೃತ್ತಿಗಳನ್ನು ದೆಹಲಿಯಲ್ಲಿ ನಡೆದ ಕಾರ್ಯಾಗಾರದಲ್ಲಿ ಪೀಟರ್ ಹ್ಯೂಬರ್ಸ್ ಅವಲೋಕಿಸಿದ್ದಾರೆ. ಅವರು ಗುರುತಿಸಿದಂತೆ, ವಾತಾವರಣದಲ್ಲಿ ತೇಲುತ್ತಿರುವ ಸೂಕ್ಷ್ಮ ಕಣಗಳು ಮತ್ತು ನೀರಾವರಿ ಕಾರಣದಿಂದ ಉತ್ತರ ಭಾರತವು ನಿರೀಕ್ಷೆಗಿಂತ ಕಡಿಮೆ ತಾಪಮಾನ ಏರಿಕೆ ದಾಖಲಿಸುತ್ತಿರುವುದು ಕುತೂಹಲಕಾರಿಯಾಗಿದೆ. ಹಾಗಾಗಿ ತಾಪಮಾನ ಏರಿಕೆಯ ಗತಿ ಅಳೆಯಲು ಹಳೆಯ ದಾಖಲೆಗಳು ಯಥಾವತ್ ಅನ್ವಯಿಸಲಾರವು. ಇನ್ನೊಬ್ಬ ತಜ್ಞ ಲ್ಯೂಕಸ್ ವರ್ಗಾಸ್ ಅವರು ವ್ಯವಸಾಯ ಕಾರ್ಯಗಳ ಮೇಲೆ ವಾತಾವರಣದ ಪರಿಣಾಮಗಳನ್ನು ಅಭ್ಯಸಿಸುತ್ತಾ, ಮಳೆ ಮುನ್ಸೂಚನೆ ತಂತ್ರಜ್ಞಾನದ ಪ್ರಗತಿಯ ಹೊರತಾಗಿಯೂ ಕಾರ್ಯರೂಪದಲ್ಲಿ ಹೆಚ್ಚಿನ ಪ್ರಯೋಜನ ಆಗದಿರುವುದನ್ನು ವಿಶ್ಲೇಷಿಸಿದ್ದಾರೆ.

ದಕ್ಷಿಣ ಏಷ್ಯಾದಲ್ಲಿ ಬೆಳೆಚಕ್ರಗಳು, ಉತ್ಪಾದಕತೆ ಮತ್ತು ಆದಾಯವನ್ನು ಪ್ರಭಾವಿಸುವ ಸಾಮರ್ಥ್ಯ ಹೊಂದಿರುವ ಅತೀವ ತಾಪಮಾನ ಒಡ್ಡುವ ಸವಾಲುಗಳು ಬಹು ಆಯಾಮಗಳನ್ನು ಹೊಂದಿವೆ. ನಗರಗಳು ತೀವ್ರ ಶಾಖದ ವಾತಾವರಣಕ್ಕೆ ಸಿದ್ಧವಾಗುವಂತೆ 'ಶಾಖ ಕ್ರಿಯಾ ಯೋಜನೆ' (ಹೀಟ್ ಆಕ್ಷನ್ ಪ್ಲಾನ್) ರೂಪಿಸಲು ಅಂತರರಾಷ್ಟ್ರೀಯ ಸಂಸ್ಥೆಗಳು ಲಕ್ಷಾಂತರ ಡಾಲರ್‌ಗಳನ್ನು ಹೂಡಿಕೆ ಮಾಡುತ್ತಿವೆ. ಸದುದ್ದೇಶದ ಈ ಪ್ರಯತ್ನಗಳು ಜಾರಿಯಲ್ಲಿ ದಾರಿತಪ್ಪಿವೆ ಎಂದು ತಜ್ಞರು ವಾದಿಸುತ್ತಾರೆ. 'ಶಾಖ ಕ್ರಿಯಾ ಯೋಜನೆ'ಗಳೇ ಅಂತಿಮ ಪರಿಹಾರವೆಂದು ಭಾವಿಸದೇ, ಅವುಗಳನ್ನು ಮಾರ್ಗಸೂಚಿಗಳಾಗಿ ಬಳಸಿಕೊಂಡು ವಿಶಾಲ ತಳಹದಿಯ ಕಾರ್ಯಕ್ರಮಗಳನ್ನು ರೂಪಿಸಬೇಕೆಂಬುದು ಅವರ ಅಭಿಮತ.

ಹವಾಮಾನ ಬದಲಾವಣೆ ಎಂಬುದು ವ್ಯಕ್ತಿ ಮತ್ತು ವ್ಯವಸ್ಥೆ ಒಟ್ಟಾಗಿ ನಿರ್ವಹಿಸಬೇಕಾದ ಬಿಕ್ಕಟ್ಟು ಎಂಬುದನ್ನು ಎಲ್ಲರೂ ಅರಗಿಸಿಕೊಳ್ಳಬೇಕಿದೆ ಹಾಗೂ ಆ ನಿಟ್ಟಿನಲ್ಲಿ ಕ್ರಿಯಾಶೀಲರಾಗಬೇಕಿದೆ.



ವಾಚಕರ ವಾಣಿ

ತನ್ನಂತೆ ಪರರ ಬಗೆದಾಗ ಜನಸೇವೆ ಸಾಧ್ಯ

ಕೊಟ್ಟ ಕುದುರೆಯನೇರಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರ 'ಗೃಹ ಆರೋಗ್ಯ: ಅಣ್ಣನ ಸಂಕಟಕ್ಕೆ ಉತ್ತರ' (ಪ್ರ.ವಾ., ಮೇ 2) ಲೇಖನ, ಜನಾರೋಗ್ಯದ ಬಗ್ಗೆ ಅವರಿಗಿರುವ ಕಳಕಳಿಯನ್ನೂ ಕಾರ್ಯತತ್ಪರತೆಯನ್ನೂ ವ್ಯಕ್ತಪಡಿಸುತ್ತದೆ. ಅವರ ತಂದೆ ಮಾಜಿ ಮುಖ್ಯಮಂತ್ರಿ ಗುಂಡೂರಾವ್ ಕ್ಯಾನ್ಸರ್ ಪೀಡಿತರಾಗಿದ್ದಾಗ ದೇಶದಲ್ಲಿ ಸುಧಾರಿತ ಚಿಕಿತ್ಸೆ ಕೊಡಿಸಲು ಸಾಧ್ಯವಾಗದೆ ವಿದೇಶಕ್ಕೆ ಹೋಗಬೇಕಾಗುತ್ತದೆ. ಅದನ್ನು ನೆನಪಿಸಿಕೊಳ್ಳುವ ದಿನೇಶ್ ಗುಂಡೂರಾವ್ ಅವರಿಗೆ ಈಗ ಆರೋಗ್ಯ ಸಚಿವರಾಗುವ ಅದೃಷ್ಟ ಒಲಿದು ಬಂದಿದೆ. ಆ ಹಿಂದಿನ ನೆನಪು ಅವರಿಗೆ ಕಾಡಿರುವುದರ ಪರಿಣಾಮ, ಜನಸಾಮಾನ್ಯರ ಮನೆ ಬಾಗಿಲಿಗೆ ಆರೋಗ್ಯ ಸೇವೆ ನೀಡುವ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಜನಸೇವೆಗೆ ಇದೊಂದು ಸದಾವಕಾಶ ಎಂದಿದ್ದಾರೆ ನಮ್ರತೆಯಿಂದ. ಸರ್ವಜ್ಞ ಕವಿ ಇದನ್ನೇ 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಣವಕ್ಕು ಸರ್ವಜ್ಞ' ಎಂದದ್ದು.

ಪ್ರೊ. ಶಿವರಾಮಯ್ಯ, ಬೆಂಗಳೂರು

ಪತ್ರಿಕಾ ಸ್ವಾತಂತ್ರ್ಯ ಹತ್ತಿಕ್ಕುವುದು ಸರಿಯಲ್ಲ

ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನದ ಸಮಯದಲ್ಲಿ 'ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್' ಸಂಸ್ಥೆ 2026ರ ವಿಶ್ವ ಪತ್ರಿಕಾ ಸ್ವಾತಂತ್ರ್ಯಸೂಚಿ ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿರುವ 180 ದೇಶಗಳಲ್ಲಿ ಭಾರತವು 151ನೇ ಸ್ಥಾನದಿಂದ 157ನೇ ಸ್ಥಾನಕ್ಕೆ ಕುಸಿದಿದೆ. ಇದು ನಿರ್ಭೀತ ಪತ್ರಿಕಾ ಸ್ವಾತಂತ್ರ್ಯದ ಕಗ್ಗೊಲೆಗೆ ನಿದರ್ಶನದಂತಿದೆ. ಭಾರತದ ನೆರೆಯ ದೇಶಗಳಾದ ನೇಪಾಳ 87, ಶ್ರೀಲಂಕಾ 134, ಭೂತಾನ್ 150 ಹಾಗೂ ಬಾಂಗ್ಲಾದೇಶ 152ನೇ ಸ್ಥಾನದಲ್ಲಿವೆ.

ಭಾರತದಲ್ಲಿನ ಪತ್ರಿಕಾ ಸ್ವಾತಂತ್ರ್ಯದ ಇಳಿಮುಖಕ್ಕೆ ಕೇಂದ್ರ ಸರ್ಕಾರದ ದಮನಕಾರಿ ನೀತಿಯೇ ಕಾರಣವೆಂದು ವರದಿ ಹೇಳಿದೆ. ಆರ್ಥಿಕತೆಯಲ್ಲಿ ದೇಶ ಐದನೇ ಸ್ಥಾನದಲ್ಲಿದೆ ಎಂದು ಬೀಗುವ ಕೇಂದ್ರ ಸರ್ಕಾರವು ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಯತ್ನ ಮಾಡಬಾರದು. ಟೀಕೆ ಟಿಪ್ಪಣಿಗಳೇ ಸರ್ಕಾರವನ್ನು ಸರಿಯಾದ ದಾರಿಗೆ ಕೊಂಡೊಯ್ಯುವ ಸಾಧನಗಳು. ಸರ್ವಾಧಿಕಾರಿ ಧೋರಣೆ ತೋರಿದರೆ ನೆರೆಯ ಚೀನಾದಂತೆ ನಾವು 178ನೇ ಸ್ಥಾನಕ್ಕೆ ಸ್ಪರ್ಧಿಸುವುದರಲ್ಲಿ ಅನುಮಾನವಿಲ್ಲ.

ಸುರೇಂದ್ರ ಪೈ, ಭಟ್ಕಳ

ಸರ್ಕಾರಿ ನೌಕರಿ 'ಸಮಾಜಸೇವೆ' ಆಗಲಿ

ಯೋಜನೆಗಳ ವಿಳಂಬಗತಿಗೆ ಅಧಿಕಾರಿಗಳನ್ನು ಹೊಣೆಯಾಗಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಟಿ ಬೀಸಿದ್ದಾರೆ. ಅವರ ಸಿಟ್ಟು ಕಾರ್ಯರೂಪಕ್ಕೆ ಬಂದರೆ ಒಳ್ಳೆಯದು. ರಾಜ್ಯದ ಆಡಳಿತದಲ್ಲಿ ಸರ್ಕಾರದ ಯೋಜನೆಗಳು ಜನರಿಗೆ ತಲಪುವುದು ಅತ್ಯಂತ ಮುಖ್ಯ. ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ನೀಡಿದ ಸೂಚನೆಗಳು ಆಡಳಿತ ವ್ಯವಸ್ಥೆಯ ಜವಾಬ್ದಾರಿಯನ್ನು ಮತ್ತೊಮ್ಮೆ ನೆನಪಿಗೆ ತರುವಂತಿದೆ. ಸರ್ಕಾರ ರೂಪಿಸುವ ಯೋಜನೆಗಳು ಅಂತಿಮವಾಗಿ ಜನಸಾಮಾನ್ಯರಿಗೆ ತಲಪದೇ ಇದ್ದರೆ ಅವುಗಳ ಉದ್ದೇಶವೇ ವಿಫಲವಾಗುತ್ತದೆ. ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಬರಿಯ ನೌಕರಿಯಂತೆ ನೋಡದೆ, ಸಮಾಜ ಸೇವೆಯಾಗಿ ನೋಡಬೇಕು. ಜನರ ವಿಶ್ವಾಸ ಉಳಿಸಿಕೊಳ್ಳುವುದು ಸರ್ಕಾರದ ಪ್ರಮುಖ ಕರ್ತವ್ಯ. ಆ ವಿಶ್ವಾಸವನ್ನು ಉಳಿಸಿಕೊಳ್ಳಲು ಸರ್ಕಾರ ಮತ್ತು ಅಧಿಕಾರಿಗಳು ಒಟ್ಟಾಗಿ ಕೆಲಸ ಮಾಡಬೇಕು.

ಕಡೂರು ಫಣಿಶಂಕರ್, ಬೆಂಗಳೂರು.

ಜನಸಾಮಾನ್ಯರ ಜೀವಗಳಿಗೆ ಬೆಲೆ ಇಲ್ಲವೆ?

ಮಧ್ಯಪ್ರದೇಶದ ಜಬಲ್ಪುರ್‌ನಲ್ಲಿ ನಡೆದ ದೋಣಿ ದುರಂತದ ವರದಿ ಓದುವಾಗ, ಮುನ್ನೆಚ್ಚರಿಕೆ ವಹಿಸಿದ್ದರೆ, ದುರಂತವನ್ನು ತಪ್ಪಿಸಬಹುದಿತ್ತು ಅಥವಾ ಸಾವು ನೋವಿನ ಪ್ರಮಾಣವನ್ನು ತಗ್ಗಿಸಬಹುದಿತ್ತು ಅನ್ನಿಸದಿರದು. ಮುಂಜಾಗ್ರತಾ ಕ್ರಮಗಳ ಅನುಷ್ಠಾನದಲ್ಲಿ ಆದ ಲೋಪಗಳಿಂದ ಸಾಮಾನ್ಯ ಜನರು ಜೀವ ಕಳೆದುಕೊಳ್ಳುವಂತಾಗುತ್ತದೆ. ಜನಸಾಮಾನ್ಯರ ಜೀವಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಹೊಣೆಯನ್ನು ವರ್ಗಾಯಿಸುವುದರಲ್ಲೇ ಎಲ್ಲರೂ ನಿರತರಾಗಿರುವಾಗ, ಇದನ್ನೆಲ್ಲ ಗಮನಿಸಿ ಸರಿಪಡಿಸುವವರು ಯಾರು?

ವೀಣಾ ಡಿ., ಇಳಕಲ್ಲ

ತಾಯ್ನುಡಿ ಮಾಧ್ಯಮ: ನಿರ್ಲಕ್ಷ್ಯದಿಂದ ಕುತ್ತು

ತಾಯ್ನುಡಿ ಮಾಧ್ಯಮ ಎಂಬ ನಿತ್ಯ ಸತ್ಯದ ಬಗ್ಗೆ ಮತ್ತೆ ಮತ್ತೆ ಬರೆಯಬೇಕಾಗಿ ಬಂದಿರುವುದು (ಲೇ: ನಿರಂಜನಾರಾಧ್ಯ ವಿ.ಪಿ., ಪ್ರ.ವಾ.) ನಮ್ಮ ದುರ್ವಿಧಿ. ಆಳುವ ಪುರುಷ ಪ್ರಭೃತಿಗಳು ತಾಯ್ನುಡಿಯ ಅಸ್ಮಿತೆಯನ್ನು ಅರ್ಥ ಮಾಡಿಕೊಳ್ಳದೆ ಇರುವುದು ಈ ನಾಡಿನ ದುರಂತ. ತಾಯ್ನುಡಿಯಲ್ಲಿ ಆರಂಭಿಕ ಶಿಕ್ಷಣವನ್ನು ಪಡೆದ ಮಗುವಿನ ಮುಂದಿನ ಜೀವನ ಅರಳುವುದರಲ್ಲಿ ಅನುಮಾನವೇ ಇಲ್ಲವೆಂಬುದು ಈಗಾಗಲೇ ಸಾಬೀತಾಗಿದೆ. ಅದನ್ನು ಅರ್ಥ ಮಾಡಿಕೊಳ್ಳುವ ಹೃದಯ ಆಳುವವರಿಗೆ ಇರಬೇಕಷ್ಟೇ. ಆರಂಭಿಕ ಹಂತದಲ್ಲೇ ಹೆಚ್ಚು ಭಾಷೆಗಳನ್ನು ಎಳೆಯ ಮನಸ್ಸುಗಳ ಮೇಲೆ ಹೇರುವುದೂ ಬೇಡ. ಅದರಿಂದಾಗುವ ಅನಾಹುತಗಳನ್ನು ನಾವು ಕಂಡು ಅನುಭವಿಸುತ್ತಿದ್ದೇವೆ.

ವಾಸಣ್ಣ, ಧಾರವಾಡ

ಸ್ಥಳೀಯ ಸಂಸ್ಕೃತಿ ಅಳಿಸಿ ಅಭಿವೃದ್ಧಿ ಸಲ್ಲ

ನಿಕೋಬಾರ್ ದ್ವೀಪಗಳ ದಕ್ಷಿಣದ ತುತ್ತತುದಿಯನ್ನು ಕೇಂದ್ರವಾಗಿಟ್ಟುಕೊಂಡು ಕೇಂದ್ರ ಸರ್ಕಾರವು ಬೃಹತ್ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಕೈಗೆತ್ತಿಕೊಂಡಿದೆ. 'ಗ್ರೇಟ್ ನಿಕೋಬಾರ್ ಅಭಿವೃದ್ಧಿ ಯೋಜನೆ'ಯು ಆ ದ್ವೀಪದ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಅನನ್ಯತೆಗೆ ಧಕ್ಕೆ ತರುವಂತಹದ್ದು. ಸ್ಥಳೀಯ ಜೀವಸಂಕುಲಗಳನ್ನು ಹೊಂದಿರುವ ಈ ದ್ವೀಪಪ್ರದೇಶ, ಬುಡಕಟ್ಟು ಸಂಸ್ಕೃತಿಯ ಮಹತ್ವವನ್ನೂ ಹೊಂದಿದೆ. ಆಧುನಿಕತೆ ಅಥವಾ ಅಭಿವೃದ್ಧಿ ಹೆಸರಿನಲ್ಲಿ ನಿಕೋಬಾರ್‌ನ ಪಾರಂಪರಿಕ ಪರಿಸರ ವ್ಯವಸ್ಥೆಯನ್ನು ಬಲಿಕೊಡುವುದು ಸರಿಯಲ್ಲ. ಅದು ನೈತಿಕವೂ ಅಲ್ಲ. ನಿಕೋಬಾರ್‌ನ ಶಾಂತ ಪ್ರದೇಶದ ನೆಮ್ಮದಿ ಅಭಿವೃದ್ಧಿ ಹೆಸರಲ್ಲಿ ಹಾಳಾಗಬಾರದು.

ಸತೀಶ ಉಪ್ಪಾರ, ಅಥಣಿ

ಚುರುಮುರಿ



ಸ್ಪೆಶಲ್ ಗಿಫ್ಟ್

• ಸುಮಂಗಲಾ

'ಕಾರ್ಮಿಕರ ದಿನಾಚರಣೆ ಶುಭಾಶಯಗಳು' ಬೆಕ್ಕಣ್ಣ ಬೆಳಗ್ಗೆ ಶುಭ ಕೋರಿತು.

ನಾನು ಮಾತಾಡದೇ ಸುಮ್ಮನಿದ್ದೆ. 'ನೀವು ಹೆಣ್ಮಕ್ಕಳು ಒಳಗೂ ಕಾರ್ಮಿಕರು... ಹೊರಗೂ ಕಾರ್ಮಿಕರು! ಪಾಪ... ದಿನಾ ಅಡಗಿ ಮಾಡಿ ದಣೀತಿ. ಇವತ್ ಅಡಗಿ ಮನಿಗಿ ರಜಾ ಕೊಡು. ಹೊರಗೆ ಊಟಕ್ಕೆ ಹೋಗೂಣು' ಎಂದಿತು ಬೆಕ್ಕಣ್ಣ.

'ಬಿಲ್ ನಾನೇ ಕೊಡಬೇಕಲ್ಲ... ಈಗ ಹೋಟೆಲ್ ಊಟ, ತಿಂಡಿ ಎಲ್ಲ ತುಟ್ಟಿ ಆಗ್ಯಾವು' ಎಂದು ಸಿಡುಕಿದೆ.

'ಮತ್ತ ಕಾರ್ಮಿಕರ ದಿನಾಚರಣೆ ಸ್ಪೆಶಲ್ ಏನು?'

'ನಿಮ್ ಮೋದಿಮಾಮಾರೆ ಸ್ಪೆಶಲ್ ಗಿಫ್ಟ್ ಕೊಟ್ಟಾರಲ್ಲ! ವಾಣಿಜ್ಯ ಸಿಲಿಂಡರ್ ಬೆಲೆ ಏರಿಸಿದ್ದಲ್ಲದೇ ಬಡವ್ರು ಬಳಸೋ ಸಣ್ಣ ಸಿಲಿಂಡರ್ ಬೆಲೆನೂ ಗಗನಕ್ಕೆ ಏರಿಸ್ಯಾರೆ' ಎಂದು ಹಂಗಿಸಿದೆ.

'ನಮ್ ದೇಶಕ್ಕಷ್ಟೇ ಅಲ್ಲ, ಯುದ್ಧದ ಬಿಸಿ ಎಲ್ಲಾ ದೇಶಗಳಿಗೂ ತಟ್ಟೈತಿ... ಸುಮ್‌ಸುಮ್ನೆ ಮೋದಿಮಾಮಾರಿಗೆ ಬೈಯಬ್ಯಾಡ' ಎಂದು ಬೆಕ್ಕಣ್ಣ ಮೂತಿ ತಿರುವಿತು.

'ಹಂಗಾರೆ ಪಂಚರಾಜ್ಯ ಚುನಾವಣೆ ಮುಗಿಯೂವರೆಗೆ ಕಾದು, ಚುನಾವಣೆ ಮುಗಿದ ಮ್ಯಾಗೆ ಎದಕ್ಕ ಏರಿಸಬಕು?' ಎಂದು ನಾನು ರೇಗಿದೆ.

'ಹೋಗ್ಲಿಬಿಡು... ನನಗೆ, ನಿನಗೆ ಎದಕ್ಕೆ ಜಗಳ... ಮಳಿ ಬೆಳಿ ವಿಚಾರ ಮಾತಾಡೂಣು' ಎಂದು ಮಾತು ಬದಲಿಸಿತು.

'ಮಳಿ ಬಂದ್ರೆ ಬೆಳಿ ನಷ್ಟ ಆಗೂದು ಬಡರೈತರಿಗೆ. ಮಳಿ ನೀರಾಗೆ ಕೊಚ್ಚಿಕೊಂಡು ಹೋಗೋರು, ಗೋಡೆ ಬಿದ್ದು ಸಾಯೋರು ಬಡವ್ರು... ಒಟ್ಟು ಬಡವ್ರಿಗೆ ಉಳಿಗಾಲವಿಲ್ಲ ಬಿಡು' ಎಂದೆ ಬೇಸರದಿಂದ.

'ಬೆಂಗಳೂರಿನ 40,000 ರಸ್ತೆಗುಂಡಿ ತುಂಬಕ್ಕೆ 33 ಕೋಟಿ ರೂಪಾಯಿ ಖರ್ಚು ಮಾಡೀವಂತ ಲೆಕ್ಕ ತೋರಿಸ್ತಾರೆ. ಎಲ್ಲಾ ರೊಕ್ಕ ಕಮೀಶನ್ ಗುಂಡಿ ತುಂಬಕ್ಕೇ! ಅತ್ತಾಗೆ ನೋಡಿದ್ರೆ 'ಯಾರೇ ಕೆಳಬೀಳಲಿ, ಯಾರದೇ ಪ್ರಾಣ ಹೋಗಲಿ, ನಮ್ ಸಿಎಂ ಕುರ್ಚಿ ಕಿತ್ತಾಟಕ್ಕೆ ಕೊನೆಯಿಲ್ಲ' ಅಂತ ಹುಲಿ–ಬಂಡೆ ಸೇರಿ ಹಾಡತಾ ಕುಂತಾರೆ' ಎನ್ನುತ್ತ ಬೆಕ್ಕಣ್ಣ ಗುರುಗುಟ್ಟಿತು.

ಸಂಗತ

ನಾಡಗೀತೆ: ಹೆಸರುಗಳ ಸೇರ್ಪಡೆ ಸರಿಯೆ?

ನಾಡಗೀತೆ ಪರಿಷ್ಕರಿಸುವುದು ಹುಲಿಸವಾರಿ ಇದ್ದಂತೆ. ಈಗಾಗಲೇ ಅದರಲ್ಲಿರುವ ಗೌತಮನ ಹೆಸರನ್ನು ಬುದ್ಧನಿಗೆ ಅನ್ವಯಿಸಿಕೊಳ್ಳುವುದು ಒಳ್ಳೆಯದು.

• ಬಿ.ಆರ್. ಸತ್ಯನಾರಾಯಣ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ತಂಗಡಗಿ ಅವರು, ನಾಡಗೀತೆಯಲ್ಲಿ ಬುದ್ಧನ ಹೆಸರನ್ನು ಸೇರಿಸುವ ಮಾತನ್ನಾಡಿದ್ದಾರೆ. ನಮ್ಮ ನಾಡಗೀತೆಗೆ ಹೆಸರುಗಳನ್ನು ಸೇರಿಸುವ, ತೆಗೆಯುವ ಬಹುದೊಡ್ಡ ಇತಿಹಾಸವೇ ಇರುವುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಮಧ್ವರ ಹೆಸರಿನ ಸೇರ್ಪಡೆಯ ರಾದ್ಧಾಂತದ ರಾಡಿ ಕನ್ನಡಿಗರ ಮನಸ್ಸಿನಿಂದ ಇನ್ನೂ ದೂರವಾಗಿಲ್ಲ. ಹಾಗೆ ನೋಡಿದರೆ, ಮನುಕುಲದ ಬೆಳಕಾದ ಬುದ್ಧನ ಹೆಸರು ಯಾವುದೇ ನಾಡಗೀತೆಯಲ್ಲಾಗಲೀ, ಸ್ತುತಿಗೀತೆಯಲ್ಲಾಗಲೀ ಉಲ್ಲೇಖಗೊಳ್ಳುವುದು ಹಾಗೂ ಯಾವುದೇ ರೂಪದ ಸ್ಮಾರಕದಲ್ಲಿ ಬಿಂಬಿತವಾಗುವುದು ಸ್ವಾಗತಾರ್ಹವೇ ಆಗಿರುತ್ತದೆ.

ಈಗ ನಮ್ಮ ನಾಡಗೀತೆಯಾಗಿರುವ, ಕುವೆಂಪು ಅವರ ಚೊಚ್ಚಿಲ ಕವನಸಂಕಲನ 'ಕೊಳಲು' ಸಂಗ್ರಹದಲ್ಲಿರುವ 'ಜಯ ಹೇ ಕರ್ನಾಟಕ ಮಾತೆ' ಹೆಸರಿನ (7.12.1928) ಕವಿತೆ ಮತ್ತು ಅದಕ್ಕೆ ಮೂರು ವರ್ಷಗಳ ಹಿಂದಿನ, 1925ರ ಹಸ್ತಪ್ರತಿಯಲ್ಲಿರುವ 'ಕರ್ನಾಟ ರಾಷ್ಟ್ರ ಗೀತೆ' ಹೆಸರಿನ ಕವಿತೆಗೂ ಸಾವಯವ ಸಂಬಂಧವಿದೆ. 'ನೆನಪಿನ ದೋಣಿಯಲ್ಲಿ' ಶೀರ್ಷಿಕೆಯ ಆತ್ಮಕಥೆಯಲ್ಲಿ ಕುವೆಂಪು ಅವರು, 'ಅದು ನನ್ನ 'ಜಯ ಹೇ ಕರ್ನಾಟಕ ಮಾತೆ' ಎಂಬ ನಾಡಗೀತೆಯ ಪ್ರಪಿತಾಮಹನೂ ಪ್ರಪ್ರಪಿತಾಮಹನೂ ಆಗಿರಬೇಕು... ಅದರ ರಚನೆಯ ರೂಪಾಂಶ ನಾನು ಬೆಳೆದಂತೆಲ್ಲ ಬದಲಾವಣೆ ಹೊಂದುತ್ತಾ (ಭಾವ ಮತ್ತು ಭಾಷೆ ಎರಡರಲ್ಲಿಯೂ) ಕಡೆಗೆ 'ಕೊಳಲು' ಕವನ ಸಂಗ್ರಹ ಅಚ್ಚಾದಾಗ ಒಂದು ಸ್ತಿಮಿತಕ್ಕೆ ನಿಂತಿತು' ಎಂದು ಸ್ಪಷ್ಟಪಡಿಸಿದ್ದಾರೆ ಕೂಡ.



ಈಗ ಬುದ್ಧ ಅಥವಾ ಬೌದ್ಧ ಈ ಪದಗಳಿಗೆ ಸಂಬಂಧಿಸಿದಂತೆ, ಈ ಎರಡೂ ಕವಿತೆಗಳಲ್ಲಿರುವ ಕೆಲವು ಉಲ್ಲೇಖಗಳನ್ನು ಪರಿಶೀಲಿಸಬಹುದು. 'ಕರ್ನಾಟ ರಾಷ್ಟ್ರ ಗೀತೆ'ಯ ಎರಡನೆಯ ಪಂಕ್ತಿಯ 5ನೇ ಸಾಲಿನಲ್ಲಿ 'ಕಪಿಲ ಪತಂಜಲ ಗೌತಮನುತ ಭಾರತ ಜನನಿಯ ತನುಜಾತೆ' ಎಂಬ ಸಾಲಿದೆ. ಇಲ್ಲಿ ಬರುವ ಗೌತಮ ಯಾರು? ವೈದಿಕ ಪರಂಪರೆಯಲ್ಲಿ ಒಬ್ಬ ಗೌತಮ ಋಷಿ ಇದ್ದಾನೆ. ಹಾಗೆಯೇ ಬುದ್ಧನಿಗೂ ಗೌತಮ ಎಂಬ ಹೆಸರಿದೆ. ಕಪಿಲ ಪತಂಜಲರ ಜೊತೆಯಲ್ಲಿಯೇ ಉಲ್ಲೇಖವಾಗಿರುವುದರಿಂದ ಇದು ಬುದ್ಧನಿಗೆ ಅನ್ವಯವಾಗಿರುವ ಸಾಧ್ಯತೆ ಇಲ್ಲವೆನ್ನಿಸುತ್ತದೆ.

ಆದರೆ, ಇದೇ ಸಾಲು ಬಹುತೇಕ ಪರಿಷ್ಕರಣೆಗೊಂಡು, ಈಗಿನ ನಾಡಗೀತೆಯಲ್ಲಿ 'ಕಪಿಲ ಪತಂಜಲ ಗೌತಮ ಜಿನನುತ ಭಾರತ ಜನನಿಯೆ ತನುಜಾತೆ' ಎಂದು ಅಭಿವ್ಯಕ್ತಗೊಂಡಿದೆ. ಇಲ್ಲಿ, ಕಪಿಲ ಪತಂಜಲರ ಜೊತೆಯಲ್ಲಿ ಬಂದರೂ, ಜಿನ ಎಂಬ ಪದದ ಪೂರ್ವದಲ್ಲಿ ಬಂದಿರುವುದರಿಂದ, ಇಲ್ಲಿನ ಗೌತಮ ನಿಸ್ಸಂಶಯವಾಗಿ ಬುದ್ಧನಿಗೆ ಸಂಬಂಧಿಸಿದ ಹೆಸರೇ ಆಗಿದೆ ಎನ್ನಬಹುದು. ಛಂದಸ್ಸಿನ ಅನುಕೂಲಕ್ಕಾಗಿ, ಬುದ್ಧ ಪದದ ಬದಲಾಗಿ ಗೌತಮ ಪದವನ್ನು ಕವಿ ಬಳಸಿರುವ, ಅಥವಾ ಹಿಂದಿನ ಅವತರಣಿಕೆಯಲ್ಲಿ ಇದ್ದುದನ್ನೇ ಉಳಿಸಿಕೊಂಡಿರುವ ಸಾಧ್ಯತೆ ಇದೆ.

'ಕರ್ನಾಟ ರಾಷ್ಟ್ರ ಗೀತೆ'ಯ 5ನೆಯ ಪಂಕ್ತಿಯ 3 ಮತ್ತು 4ನೇ ಸಾಲುಗಳಲ್ಲಿ 'ಹಿಂದೂ ಕ್ರೈಸ್ತ ಮುಸಲ್ಮಾನ ಪಾರಸಿಕ ಬೌದ್ಧರುದ್ಯಾನ' ಎಂಬ ಉಲ್ಲೇಖವಿದೆ. ಈ ಸಾಲಿನ ಸಂಸ್ಕರಿತ ರೂಪ ಈಗಿನ ನಾಡಗೀತೆಯಲ್ಲಿ 'ಹಿಂದೂ ಕ್ರೈಸ್ತ ಮುಸಲ್ಮಾನ ಪಾರಸಿಕ ಜೈನರುದ್ಯಾನ' ಎಂದಿದೆ. 'ಬೌದ್ಧ' ಪದದ ಬದಲಾಗಿ 'ಜೈನ' ಪದ ಬಂದಿರುವುದು ಸ್ಪಷ್ಟವಾಗಿದೆ. ಪೂರ್ವ ಕವಿತೆಯಲ್ಲಿದ್ದ ಬೌದ್ಧ ಪದವನ್ನು ತ್ಯಜಿಸಿ, ಹೊಸದರಲ್ಲಿ ಜೈನ ಪದವನ್ನು ಕವಿ ಸೇರಿಸಿದ್ದಾರೆ. ಹಾಗೆ ನೋಡಿದರೆ ಇಲ್ಲಿ ಛಂದಸ್ಸಿನ ಸಮಸ್ಯೆಯೂ ಇಲ್ಲ. ಇದು ಕವಿಯ ಪ್ರಯೋಗ ಮತ್ತು ಸ್ವಾತಂತ್ರ್ಯ ಕೂಡ. ಅದನ್ನು ಗೌರವಿಸುತ್ತಲೇ, ಅದಕ್ಕಿದ್ದಿರಬಹುದಾದ ಇನ್ನೊಂದು ಸಾಧ್ಯತೆಯನ್ನು ನಾವು ಪರಿಶೀಲಿಸಬಹುದಾಗಿದೆ.

ಗೌತಮ ಮತ್ತು ಜಿನ ಎಂಬ ಉಲ್ಲೇಖಗಳೊಂದಿಗೆ ಬುದ್ಧ ಮತ್ತು ತೀರ್ಥಂಕರರ ಉಲ್ಲೇಖ ಮೊದಲಿಗೇ ಬಂದಿದ್ದರೂ, ಮತ್ತೊಮ್ಮೆ ಜೈನ ಪದದ ಉಲ್ಲೇಖ ಬರಲು ಬಹುಶಃ, ಆಗ್ಗೆ ಕರ್ನಾಟಕದಲ್ಲಿ, ಹಿಂದೂ ಕ್ರೈಸ್ತ ಮುಸಲ್ಮಾನರಂತೆ ಜೈನರೂ ಬಹುಸಂಖ್ಯಾತರಾಗಿದ್ದುದೂ ಕಾರಣವಾಗಿರಬಹುದು. ಜೊತೆಗೆ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಪಾರವಾಗಿರುವ ಜೈನ ಸಾಹಿತ್ಯವೂ (ಜೈನಯುಗವೆಂದೇ ಗುರುತಿಸಿರುವುದು) ಕಾರಣ ವಿರಬಹುದು. ಮತ್ತೂ ಮುಂದುವರಿದು, ಶ್ರವಣಬೆಳಗೊಳ ಮೊದಲಾದ ನಾಡಿನ ಅಪಾರ ಜೈನಕೇಂದ್ರಗಳು, ಅವುಗಳಿಗೆ ಹೆಚ್ಚಿನ ಶ್ರೀಸಾಮಾನ್ಯ ಅನುಯಾಯಿಗಳಿರುವುದೂ ಕಾರಣ ವಿರಬಹುದು. ಆದರೆ, ನಂತರದ ಬೆಳವಣಿಗೆಯಲ್ಲಿ, ಕರ್ನಾಟಕದಲ್ಲಿ ಬೌದ್ಧ ಸಾಹಿತ್ಯ, ಸ್ಮಾರಕಗಳು ಸಾಕಷ್ಟು ಬೆಳಕಿಗೆ ಬಂದಿರುವುದನ್ನು, ಬೌದ್ಧ ಧರ್ಮವನ್ನು ಅನುಸರಿಸುವವರ ಸಂಖ್ಯೆ ಹೆಚ್ಚಳವಾಗಿರುವುದನ್ನು ಮರೆಯುವಂತಿಲ್ಲ.

ಈಗ ನಮ್ಮ ಮುಂದಿರುವ ಬಹುದೊಡ್ಡ ಸಮಸ್ಯೆ ಎಂದರೆ, ಸ್ವೀಕೃತ ನಾಡಗೀತೆಯೊಳಗೆ, ಅದೂ ಕವಿಯ ಮರಣಾನಂತರ ಹೆಸರುಗಳನ್ನು ಸೇರಿಸುತ್ತಾ ಹೋಗುವುದು ಎಷ್ಟು ಸರಿ ಎನ್ನುವುದು. 'ಕರ್ನಾಟ ರಾಷ್ಟ್ರ ಗೀತೆ'ಯಲ್ಲಿನ ಉಲ್ಲೇಖದಂತೆ 'ಪಾರಸಿಕ ಬೌದ್ಧರುದ್ಯಾನ' ಎಂದು ಹಾಡಬಹುದಾದರೂ ಅಥವಾ, ಜನಮನದ ಪ್ರತೀಕ್ಷೆ ಯಂತೆ, 'ಪಾರಸಿಕ ಬೌದ್ಧ ಜೈನರುದ್ಯಾನ' ಎಂದು ಬದಲಿಸ ಬಹುದಾದರೂ, ಇದು ಇಲ್ಲಿಗೇ ಕೊನೆಗೊಳ್ಳುತ್ತದೆ ಎಂದು ಹೇಳಲಾಗದು. ಹಿಂದೆ ಮಧ್ವ, ಈಗ ಬುದ್ಧ! ಮುಂದೆ ಇನ್ನು ಯಾರು ಯಾರ ಹೆಸರುಗಳಿಗೆ ಬೇಡಿಕೆ ಬರಬಹುದೋ ಬಲ್ಲವರಾರು? ಆದ್ದರಿಂದ ಈಗಿರುವ 'ಗೌತಮ' ಎಂಬ ಹೆಸರನ್ನೇ ಬುದ್ಧನಿಗೆ ಅನ್ವಯಿಸಿಕೊಂಡು, ನಾಡಗೀತೆಯೊಳಗೆ ಹೆಸರು ಸೇರಿಸುವ ಪರಂಪರೆಯನ್ನು ಮುಕ್ತಾಯಗೊಳಿಸುವ ಪ್ರಬುದ್ಧತೆ ಯನ್ನು ಕನ್ನಡ ಜನತೆ ತೋರಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪಶ್ಚಿಮ ಏಷ್ಯಾದಲ್ಲಿ ಯುದ್ಧ

ಭಾರತದಲ್ಲಿ ಕೃಷಿ ಬಿಕ್ಕಟ್ಟು ತೀವ್ರ

ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಿಂದ ತೈಲ–ಅನಿಲ ಪೂರೈಕೆ, ಕೈಗಾರಿಕೆ ಸೇರಿದಂತೆ ಭಾರತದ ಹಲವು ವಲಯಗಳಲ್ಲಿ ಬಿಕ್ಕಟ್ಟು ತಲೆದೋರಿದೆ. ಕೃಷಿ ರಂಗದ ಮೇಲೂ ಯುದ್ಧದ ಕರಿಮೋಡ ಆವರಿಸಿಕೊಳ್ಳುತ್ತಿದೆ. ಒಂದೆಡೆ, ಯುದ್ಧದಿಂದ ಪಶ್ಚಿಮ ಏಷ್ಯಾದ ದೇಶಗಳಿಗೆ ಭಾರತದಿಂದ ಆಹಾರ ಧಾನ್ಯ, ಹಣ್ಣು ಮುಂತಾದವುಗಳ ರಫ್ತು ಬಂದ್ ಆಗಿದೆ. ಇನ್ನೊಂದೆಡೆ, ರಾಸಾಯನಿಕ ಗೊಬ್ಬರ ಉತ್ಪಾದನೆ, ಆಮದಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಯುದ್ಧ ಇನ್ನು ಅಲ್ಪಕಾಲ ಮುಂದುವರಿದರೂ ದೇಶದ ಕೃಷಿ ಕ್ಷೇತ್ರದ ಮೇಲೆ ದೀರ್ಘಕಾಲದ ಪರಿಣಾಮಗಳು ಉಂಟಾಗಲಿವೆ. ದೇಶದಲ್ಲಿ ಆಹಾರ ಹಣದುಬ್ಬರ ಮತ್ತಷ್ಟು ಹೆಚ್ಚಾಗಲೂ ಇದು ಕಾರಣವಾಗುವ ಸಂಭವ ಇದೆ



ಹರಿಯಾಣದ ಲೋಹಾರು ಗ್ರಾಮದ ಮಹಿಳೆ ಗೋಧಿ ಕೊಯ್ಲಿನಲ್ಲಿ ತೊಡಗಿರುವುದು — ಪಿಟಿಐ ಚಿತ್ರ

‘ಕೊರತೆ ಇಲ್ಲ’

ಮುಂಗಾರಿಗೆ ಕೇಂದ್ರ ಕೃಷಿ ಇಲಾಖೆಯು ಸಜ್ಜಾಗಿದ್ದು, ದೇಶದಲ್ಲಿ ಬೀಜ, ಗೊಬ್ಬರ ಸೇರಿದಂತೆ ಯಾವ ಕೊರತೆಯೂ ಇಲ್ಲ ಎಂದು ಕೇಂದ್ರ ಸರ್ಕಾರವು ತಿಳಿಸಿದೆ. ಭತ್ತ, ಸೋಯಾಬೀನ್, ಮೆಕ್ಕೆಜೋಳ, ಶೇಂಗಾ ಮುಂತಾದ ಪ್ರಮುಖ ಬೆಳೆಗಳ 1.67 ಕೋಟಿ ಕ್ವಿಂಟಲ್ ಬೀಜ ಅಗತ್ಯವಿದ್ದರೆ, 1.86 ಕೋಟಿ ಕ್ವಿಂಟಲ್ ದಾಸ್ತಾನಿದೆ. ಮುಂಗಾರು ಹಂಗಾಮಿಗೆ 3.9 ಕೋಟಿ ಟನ್ (ಎಲ್‌ಎಂಟಿ) ರಸಗೊಬ್ಬರ ಅಗತ್ಯವಿದ್ದರೆ, ಸುಮಾರು 1.8 ಕೋಟಿ ಟನ್, ಅಂದರೆ ಶೇ 46ರಷ್ಟು ಆರಂಭಿಕ ದಾಸ್ತಾನು ಈಗಾಗಲೇ ಲಭ್ಯವಿದೆ. ಆರಂಭದಲ್ಲಿ ಮೂರರ ಒಂದರಷ್ಟು ಪ್ರಮಾಣದ ರಸಗೊಬ್ಬರ ದಾಸ್ತಾನಿದ್ದರೂ, ರೈತರ ಮುಂಗಾರು ಹಂಗಾಮಿನ ಬೇಡಿಕೆಯನ್ನು ಈಡೇರಿಸಬಹುದು ಎಂದು ಇಲಾಖೆ ತಿಳಿಸಿದೆ.

ರಸಗೊಬ್ಬರ ಉತ್ಪಾದನೆ ಕುಸಿತ

- **76.09** ಲಕ್ಷ ಟನ್ — 2025ರ ಮಾರ್ಚ್ 1–ಏಪ್ರಿಲ್ 30 ನಡುವೆ ದೇಶದಲ್ಲಿ ಉತ್ಪಾದನೆಯಾದ ರಸಗೊಬ್ಬರದ ಪ್ರಮಾಣ
- **64** ಲಕ್ಷ ಟನ್ — 2026ರ ಮಾರ್ಚ್–ಏಪ್ರಿಲ್ ನಡುವೆ ದೇಶದಲ್ಲಿ ಉತ್ಪಾದನೆಯಾದ ರಸಗೊಬ್ಬರದ ಪ್ರಮಾಣ
- **46.67** ಲಕ್ಷ ಟನ್ — 2025ರ ಮಾರ್ಚ್–ಏಪ್ರಿಲ್ ನಡುವೆ ದೇಶದಲ್ಲಿ ಉತ್ಪಾದನೆಯಾದ ಯೂರಿಯಾ ಪ್ರಮಾಣ
- **25.42** ಲಕ್ಷ ಟನ್ — 2026ರ ಮಾರ್ಚ್–ಏಪ್ರಿಲ್ ನಡುವೆ ದೇಶದಲ್ಲಿ ಉತ್ಪಾದನೆಯಾದ ಯೂರಿಯಾ ಪ್ರಮಾಣ
- **20%–25%** — ಕೊಲ್ಲಿ ರಾಷ್ಟ್ರಗಳಿಂದ ಭಾರತವು ಆಮದು ಮಾಡಿಕೊಳ್ಳುವ ರಸಗೊಬ್ಬರದ ಪ್ರಮಾಣ

● ಬಿ.ವಿ.ಶ್ರೀನಾಥ್

ಕರ್ನಾಟಕವೂ ಸೇರಿದಂತೆ ಭಾರತದ ಹಲವೆಡೆ ಮಳೆಯಾಗುತ್ತಿದ್ದು, ಕೃಷಿಕರು ಹೊಲ ಹದಗೊಳಿಸುವ ಕೆಲಸ ಆರಂಭಿಸಿದ್ದಾರೆ. ರಾಜ್ಯದಲ್ಲಿ ಬಹುತೇಕ ರೈತರು ಜೂನ್ ತಿಂಗಳಲ್ಲಿ ಬಿತ್ತನೆ ಮಾಡುತ್ತಾರೆ. ಆದರೆ, ಈ ಬಾರಿ ಇರಾನ್ ಯುದ್ಧವು ಹಲವು ರೀತಿಗಳಲ್ಲಿ ಕೃಷಿ ವಲಯದ ಮೇಲೆ ಪರಿಣಾಮ ಬೀರಲಿದ್ದು, ರೈತರಲ್ಲಿ ಆತಂಕ ಮೂಡಿಸಿದೆ. ತೈಲ ಮತ್ತು ರಸಗೊಬ್ಬರ ಪೂರೈಕೆ ವ್ಯವಸ್ಥೆಗೆ ಜಾಗತಿಕ ಮಟ್ಟದಲ್ಲಿ ಅಡೆತಡೆ ಉಂಟಾಗಿದ್ದು, ಭಾರತದಲ್ಲಿಯೂ ಇದು ಕೃಷಿ ಉತ್ಪಾದನೆ ಮತ್ತು ಆಹಾರ ಭದ್ರತೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಂಭವ ಇದೆ.

ಹಸಿರು ಕ್ರಾಂತಿಯ ಪೂರ್ವದಲ್ಲಿ ಭಾರತದ ಕೃಷಿ ವಲಯ ಕಚ್ಚಾ ವಸ್ತುಗಳ ವಿಚಾರದಲ್ಲಿ ಬಹುಮಟ್ಟಿಗೆ ಸ್ವಾವಲಂಬಿಯಾಗಿತ್ತು. ಉಳಲು ಎತ್ತುಗಳು, ಧಾನ್ಯ ಸಾಗಣೆಗೆ ಎತ್ತಿನ ಬಂಡಿಗಳು, ಹೊಲಕ್ಕೆ ಹಾಕಲು ಕೊಟ್ಟಿಗೆ ಗೊಬ್ಬರ ಹೀಗೆ ರೈತರ ಅವಲಂಬನೆ ಮತ್ತು ಖರ್ಚು ಮಿತವಾಗಿತ್ತು. ಸಾರಜನಕ (ನೈಟ್ರೋಜನ್–ಎನ್), ಪಾಸ್ಫರಸ್ (ಪಿ) ಮತ್ತು ಪೊಟ್ಯಾಷಿಯಂ (ಪಿ) ಮುಂತಾದ ರಾಸಾಯನಿಕಗಳನ್ನು ಹೊಂದಿದ್ದ ರಸಗೊಬ್ಬರಗಳ ಬಳಕೆ 69,800 ಟನ್‌ಗಳಷ್ಟಿತ್ತು (1950–51). ಕೇರಳದ ಕೊಚ್ಚಿ ಸಮೀಪ ಟ್ರಾವನ್‌ಕೋರ್‌ನಲ್ಲಿ ಮಾತ್ರ ರಸಗೊಬ್ಬರ ಕಾರ್ಖಾನೆ ಇತ್ತು. ಆದರೆ, 2024–25ನೇ ಸಾಲಿನಲ್ಲಿ ಎನ್‌ಪಿಕೆ ಆಧರಿಸಿದ ರಸಗೊಬ್ಬರಗಳು 3.29 ಕೋಟಿ ಟನ್ ಮಾರಾಟವಾಗಿವೆ. ಜಗತ್ತಿನಲ್ಲಿ ರಸಗೊಬ್ಬರಗಳ ಬಳಕೆಯಲ್ಲಿ ಚೀನಾ ಮೊದಲ ಸ್ಥಾನದಲ್ಲಿದ್ದರೆ, ಭಾರತ ಎರಡನೇ ಸ್ಥಾನದಲ್ಲಿದೆ. ದೇಶವು ರಸಗೊಬ್ಬರ ಉತ್ಪಾದನೆಯಲ್ಲಿ ಜಗತ್ತಿನಲ್ಲಿ ಮೂರನೇ ಸ್ಥಾನದಲ್ಲಿದೆ. ಆದರೆ, ಇಂದಿಗೂ ಆಮದಿನ ಮೇಲೆ ಹೆಚ್ಚು ಅವಲಂಬಿತವಾಗಿದೆ.

ಉತ್ಪಾದನೆ ಕುಸಿತ: ಡೈಅಮೋನಿಯಂ ಪಾಸ್ಫೇಟ್ (ಡಿಎಪಿ) ಮತ್ತು ಯೂರಿಯಾ ಇಂದು ದೇಶದ ರೈತರು ಬಳಸುವ ಪ್ರಮುಖ ರಸಗೊಬ್ಬರಗಳಾಗಿವೆ. ಇವುಗಳ ತಯಾರಿಕೆಗೆ ಅಗತ್ಯವಾದ ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲದ ಪೈಕಿ ಶೇ 50ರಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಈ ಅವಲಂಬನೆ ಈಗ ದೇಶದ ಕೃಷಿರಂಗವನ್ನು ಬಿಕ್ಕಟ್ಟಿಗೆ ತಳ್ಳಿದೆ. ಕಚ್ಚಾ ವಸ್ತುಗಳ ಕೊರತೆಯಿಂದ ದೇಶದಲ್ಲಿ ರಸಗೊಬ್ಬರಗಳ ಉತ್ಪಾದನೆ ಕುಸಿತ ಉಂಟಾಗಿದೆ.

ಇನ್ನೊಂದೆಡೆ, ಭಾರತವು ತನ್ನ ಅಗತ್ಯದ ಶೇ 20–ಶೇ 25ರಷ್ಟು ರಸಗೊಬ್ಬರಗಳನ್ನು ಕೊಲ್ಲಿ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಅವು ಬಹುತೇಕ ಹೊರ್ಮುಜ್ ಜಲಸಂಧಿ ಮೂಲಕವೇ ಸಾಗಣೆಯಾಗುತ್ತಿದ್ದವು. ಆದರೆ, ಈಗ ಯುದ್ಧದಿಂದ ಪೂರೈಕೆ ಸರಪಳಿಗೆ ಹೊಡೆತ ಬಿದ್ದಿದೆ. ಭಾರತಕ್ಕೆ ಗಮನಾರ್ಹ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ರಫ್ತು ಮಾಡುತ್ತಿದ್ದ ಚೀನಾ ಮತ್ತು ರಷ್ಯಾ ಕೂಡ ತಮ್ಮ ರಫ್ತು ಪ್ರಮಾಣವನ್ನು ಕಡಿಮೆ ಮಾಡಿವೆ. ಇದು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ.

ತೈಲ ಕೊರತೆಯ ಪೆಟ್ಟು: ಸ್ವಾತಂತ್ರ್ಯ ಗಳಿಸಿದ ಹೊಸದರಲ್ಲಿ ದೇಶದಲ್ಲಿ ಕೇವಲ 5 ಸಾವಿರ ಟ್ರ್ಯಾಕ್ಟರ್‌ಗಳಿದ್ದವು. ಆದರೆ, 2025–26ನೇ ಸಾಲಿನಲ್ಲಿ 11.6 ಲಕ್ಷ ಟ್ರ್ಯಾಕ್ಟರ್‌ಗಳು ಮಾರಾಟವಾಗಿವೆ. ಹೊಲ ಉಳುವುದರಿಂದ ಹಿಡಿದು ಧಾನ್ಯ ಸಾಗಣೆ, ಮಾರುಕಟ್ಟೆ ಇತ್ಯಾದಿ ಸಂದರ್ಭಗಳಲ್ಲಿ ಟ್ರ್ಯಾಕ್ಟರ್ ಬಳಕೆ ವ್ಯಾಪಕವಾಗಿದೆ. ತೈಲವು ಇಂದು ಕೃಷಿ ರಂಗದ ಅತ್ಯಂತ ಮೂಲಭೂತ ಅಗತ್ಯಗಳಲ್ಲಿ ಒಂದಾಗಿದೆ. ಪ್ರಸ್ತುತ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಪೂರೈಕೆ ಸಮರ್ಪಕವಾಗಿಯೇ ಇದೆ. ಆದರೆ, ಏಪ್ರಿಲ್‌ನಿಂದ ಆತಂಕದ ಸಂಚಾರಕ್ಕೆ ಅಡ್ಡಿ ಉಂಟಾದರೆ ಅದರ ಬಿಸಿ ಅನುಭವಿಸಬೇಕಾಗುವ ಸ್ಥಿತಿಯು ರೈತರನ್ನು ಅಲ್ಪಮಟ್ಟಿಗೆ ಅಧೀರರನ್ನಾಗಿಸಿದೆ. ಏತನ್ಮಧ್ಯೆ, ತೈಲದ ಕೊರತೆ ಉಂಟಾದರೆ, ಉತ್ಪಾದನಾ ವೆಚ್ಚವೂ ಹೆಚ್ಚಾಗುತ್ತದೆ.

ಭಾರತದಲ್ಲಿ ಕೃಷಿಯನ್ನು ಮಳೆಯೊಂದಿಗಿನ ಜೂಜಾಟ ಎಂದು ಹಿಂದಿನಿಂದಲೂ ಕರೆಯಲಾಗುತ್ತಿದೆ. ಆದರೆ, ಬದಲಾದ ಕಾಲಮಾನದಲ್ಲಿ ರೈತರು ಸರ್ಕಾರದ ನೀತಿ ನಿಯಮಗಳು, ತೀವ್ರ ಹವಾಮಾನ ವೈಪರೀತ್ಯಗಳು ಮತ್ತು ಜಾಗತಿಕ ಬಿಕ್ಕಟ್ಟುಗಳ ಪರಿಣಾಮಗಳನ್ನೂ ಎದುರಿಸಬೇಕಾಗಿದೆ. ಭಾರತದ ರೈತರು ಬೆಳೆ ಬೆಳೆಯಲು ರಸಗೊಬ್ಬರಗಳ ಮೇಲೆ ಅವಲಂಬಿತರಾಗಿದ್ದರೆ, ಸರ್ಕಾರವು ಆ ರಸಗೊಬ್ಬರಕ್ಕಾಗಿ ಆಮದನ್ನು ಅವಲಂಬಿಸಿದೆ. ಭಾರತದಲ್ಲಿ ಮಳೆಗಾಲ ಆರಂಭವಾಗುತ್ತಿರುವುದರಿಂದ ಸಹಜವಾಗಿಯೇ ರೈತರಲ್ಲಿ ಆತಂಕ ಮೂಡಿದೆ. ಪ್ರಸ್ತುತ ಯುದ್ಧಕ್ಕೆ ಕದನ ವಿರಾಮ ಘೋಷಿಸಲಾಗಿದೆ. ಆದರೆ, ಅಂತ್ಯವಾಗಿಲ್ಲ. ಈಗ ಯುದ್ಧ ನಿಂತರೂ, ಅದರ ಪರಿಣಾಮಗಳು, ಅದು ಪೂರೈಕೆ ವ್ಯವಸ್ಥೆಗೆ ಮಾಡಿರುವ ಹಾನಿ ಸರಿಯಾಗಲು ಅನೇಕ ತಿಂಗಳುಗಳೇ ಬೇಕು. ಯುದ್ಧವು ಈಗಾಗಲೇ ಹಲವು ವಲಯಗಳ ಮೇಲೆ ಪರಿಣಾಮ ಉಂಟುಮಾಡಿದೆ. ಆದರೆ, ದೇಶದಲ್ಲಿ ಅತಿ ಹೆಚ್ಚು ಜನರಿಗೆ ಉದ್ಯೋಗ ನೀಡಿರುವ, ಈಗಾಗಲೇ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವ ಕೃಷಿ ಕ್ಷೇತ್ರಕ್ಕೆ ಯುದ್ಧದಿಂದ ಹೆಚ್ಚು ಹಾನಿಯಾದರೆ, ಅದರ ಪರಿಣಾಮಗಳು ತೀವ್ರವಾಗಿರುತ್ತವೆ. ದೇಶದ ಆಹಾರ ಭದ್ರತೆಗೂ ಇದು ಭಂಗ ತರುತ್ತದೆ.



ಆಧಾರ: ಪಿಟಿಐ, ಡೌನ್ ಟು ಅರ್ಥ್, ಅಬ್ಸರ್ವರ್ ರಿಸರ್ಚ್ ಫೌಂಡೇಷನ್, ಮಾಧ್ಯಮ ವರದಿಗಳು

ಆಹಾರ ಹಣದುಬ್ಬರ ಏರಿಕೆ

ಭಾರತದ ಆಹಾರ ಹಣದುಬ್ಬರವು 2024ರಲ್ಲಿ ಸಾಕಷ್ಟು ಏರಿಕೆ ಕಂಡ ನಂತರ 2025ರಲ್ಲಿ ಗ್ರಾಹಕರಿಗೆ ಅಲ್ಪಮಟ್ಟದ ಸಮಾಧಾನ ನೀಡಿತ್ತು. ಗ್ರಾಹಕ ಆಹಾರ ಬೆಲೆ ಸೂಚ್ಯಂಕವು (ಸಿಎಫ್‌ಪಿಐ) ವರ್ಷದ ಬಹುತೇಕ ತಿಂಗಳುಗಳಲ್ಲಿ ಸ್ಥಿರವಾಗಿತ್ತು ಮತ್ತು ಕೆಲವೊಮ್ಮೆ ಇಳಿಕೆಯೂ ಆಗಿತ್ತು. ಆದರೆ, 2026ರ ಆರಂಭದಿಂದಲೇ ಆಹಾರ ಹಣದುಬ್ಬರವು ಏರತೊಡಗಿದೆ. ಜನವರಿಯಲ್ಲಿ ಶೇ 2.13ರಷ್ಟಿದ್ದ ಈ ಪ್ರಮಾಣವು ಫೆಬ್ರುವರಿಯ ಹೊತ್ತಿಗೆ ಶೇ 3.47ಕ್ಕೆ ಏರಿಕೆಯಾಗಿತ್ತು. ಮಾರ್ಚ್‌ನಲ್ಲಿ ಶೇ 3.87ಕ್ಕೆ ಏರಿದ್ದ ಆಹಾರ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ 4ಕ್ಕಿಂತ ಹೆಚ್ಚಾಗಬಹುದು ಎಂದು ಅಂದಾಜಿಸಲಾಗಿದೆ.

ಜಗತ್ತಿನ ಹಲವು ರಾಷ್ಟ್ರಗಳಲ್ಲಿಯೂ ಕೃಷಿ ಕ್ಷೇತ್ರದ ಮೇಲೆ ಯುದ್ಧ ಪರಿಣಾಮ ಬೀರಿದೆ. ಮುಂದಿನ ದಿನಗಳಲ್ಲಿ ಆಹಾರ ಧಾನ್ಯಗಳ ಬೆಲೆಯೂ ಹೆಚ್ಚಾಗಿ, ಬೆಲೆ ಹೆಚ್ಚಾಗುವ ಸಾಧ್ಯತೆ ಇದೆ. ಹೀಗಾಗಿ ಮುಂದಿನ ದಿನಗಳಲ್ಲಿ ಆಹಾರ ಹಣದುಬ್ಬರವು ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಆರ್ಥಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಕೊಳೆಯುತ್ತಿರುವ ಹಣ್ಣು, ತುಂಬಿದ ದಾಸ್ತಾನು

ಹೊರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆಗೆ ತಡೆ ಬಿದ್ದಿರುವುದರ ಹೊಡೆತವು ಭಾರತದ ರೈತರ ಮೇಲೆ ಬಿದ್ದಿದೆ. ಕೃಷಿ ಉತ್ಪನ್ನಗಳ ರಫ್ತಿನಲ್ಲಿ ಜಾಗತಿಕ ಮಟ್ಟದ ಅಗ್ರ 10 ದೇಶಗಳಲ್ಲಿ ಭಾರತವು ಒಂದಾಗಿದೆ. ಅಕ್ಕಿ, ಸಕ್ಕರೆ, ಎಣ್ಣೆಬೀಜಗಳು, ಸಂಬಾರ ಪದಾರ್ಥಗಳು, ಹಣ್ಣು ಮುಂತಾದ ವಸ್ತುಗಳನ್ನು ರಫ್ತು ಮಾಡುತ್ತಿದೆ. ಆದರೆ, ಯುದ್ಧವು ರಫ್ತು ವ್ಯವಸ್ಥೆಗೆ ಅಡ್ಡಿಯುಂಟುಮಾಡಿದೆ.

ಬಾಸ್ಮತಿ ಸೇರಿದಂತೆ ಭಾರತದಿಂದ ಅಕ್ಕಿಯು ಇರಾನ್, ಇರಾಕ್, ಯುಎಇ, ಸೌದಿ ಅರೇಬಿಯಾ, ಯೆಮನ್ ಮುಂತಾದ ರಾಷ್ಟ್ರಗಳಿಗೆ ರಫ್ತಾಗುತ್ತದೆ. ಇಸ್ರೇಲ್‌ಗೂ ಭಾರತದಿಂದ ಅಕ್ಕಿ ರಫ್ತಾಗುತ್ತದೆ. ಆದರೆ, ಯುದ್ಧದಿಂದ ಅಕ್ಕಿ ರಫ್ತಿಗೆ ಅಡಚಣೆ ಉಂಟಾಗಿದ್ದು, ಲಕ್ಷಾಂತರ ಟನ್ ದಾಸ್ತಾನು ಭಾರತದಲ್ಲಿಯೇ ಉಳಿದಿದೆ.

ಭಾರತದಿಂದ ಕೊಲ್ಲಿ ರಾಷ್ಟ್ರಗಳು ಸೇರಿದಂತೆ ಹಲವು ದೇಶಗಳಿಗೆ ರಫ್ತಾಗುತ್ತಿದ್ದ ಆಹಾರ ಧಾನ್ಯ, ಹಣ್ಣುಗಳು ಕೊಳೆಯುವಂತೆ ಆಗಿದೆ. ನಿದರ್ಶನಕ್ಕೆ ಮಹಾರಾಷ್ಟ್ರದ ರತ್ನಗಿರಿ ಮಾವು ದುಬೈ, ಕತಾರ್, ಯುಎಇಗೆ ರಫ್ತಾಗುತ್ತಿತ್ತು. ಆದರೆ, ಹೊರ್ಮುಜ್ ಅನ್ನು ನಿರ್ಬಂಧಿಸಿರುವುದರಿಂದ ಅಲ್ಲಿನ ವ್ಯಾಪಾರಿಗಳು ಮಾವು ವ್ಯಾಪಾರಕ್ಕೆ ಮುಂದಾಗಿಲ್ಲ. ಏಪ್ರಿಲ್–ಮೇ ಗರಿಷ್ಠ ಪ್ರಮಾಣದಲ್ಲಿ ಮಾವು ದೊರೆಯುವ ತಿಂಗಳುಗಳಾಗಿದ್ದು, ಹೆಚ್ಚು ದಿನ ದಾಸ್ತಾನು ಮಾಡುವ ಸೌಲಭ್ಯಗಳಿಲ್ಲದೇ ರೈತರು ಕಷ್ಟ ಅನುಭವಿಸುವಂತಾಗಿದೆ. ಇದರಿಂದ ಬೆಳೆಗಾರರು, ಮಾರಾಟಗಾರರು ಭಾರಿ ನಷ್ಟಕ್ಕೆ ಗುರಿಯಾಗಿದ್ದಾರೆ.

ಕೋಲ್ಕತ್ತಾದ ಚಹಾ ಪುಡಿ ರಫ್ತಿನದ್ದೂ ಇದೇ ಸ್ಥಿತಿ. ಭಾರತದ ಚಹಾ ಪುಡಿ ರಫ್ತು 2025ರಲ್ಲಿ ದಾಖಲೆ ಮಟ್ಟ ಮುಟ್ಟಿತ್ತು (28 ಕೋಟಿ ಕೆ.ಜಿ). ಈ ಪೈಕಿ 11.45 ಕೋಟಿ ಕೆ.ಜಿ ಇರಾನ್, ಇರಾಕ್ ಮತ್ತು ಯುಎಇ ಒಳಗೊಂಡ ಗಲ್ಫ್ ಕಾರಿಡಾರ್ ಮೂಲಕ ರಫ್ತಾಗಿದೆ. ಆದರೆ, ಈ ಬಾರಿ ಯುದ್ಧದ ಕಾರಣಕ್ಕೆ ಪಶ್ಚಿಮ ಬಂಗಾಳದ ಚಹಾ ಪುಡಿ ಕೇಳುವವರಿಲ್ಲದಂತಾಗಿದೆ. ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ಹೆಚ್ಚು ಟೀ ಉತ್ಪಾದನೆಯಾಗುತ್ತದೆ. ಆದರೆ, ದಾಸ್ತಾನು ಕೇಂದ್ರಗಳು ಈಗಾಗಲೇ ತುಂಬಿಹೋಗಿದ್ದು, ರೈತರಿಗೆ ದಿಕ್ಕು ತೋಚದಂತಾಗಿದೆ.

ರಾಷ್ಟ್ರೀಯ

ಸ್ಪೇಸ್‌ಎಕ್ಸ್‌ನಿಂದ ‘ದೃಷ್ಟಿ’ ಉಪಗ್ರಹ ಉಡ್ಡಯನ



ನವದೆಹಲಿ (ಪಿಟಿಐ): ಬೆಂಗಳೂರು ಮೂಲದ ಬಾಹ್ಯಾಕಾಶ ನವೋದ್ಯಮ ಗೆಲಾಕ್ಸ್‌ಐ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿರುವ ‘ಮಿಷನ್ ದೃಷ್ಟಿ’ ಉಪಗ್ರಹವನ್ನು ಸ್ಪೇಸ್‌ಎಕ್ಸ್ ಸಂಸ್ಥೆಯ ರಾಕೆಟ್ ಭಾನುವಾರ ಉಡ್ಡಯನ ಮಾಡಿತು.

‘ದೃಷ್ಟಿ’ಯನ್ನು ಹೊತ್ತ ರಾಕೆಟ್ ‘ಫಾಲ್ಕನ್–9’ ಕ್ಯಾಲಿಫೋರ್ನಿಯಾದ ಉಡ್ಡಯನ ನೆಲೆಯಿಂದ ನಭಕ್ಕೆ ಚಿಮ್ಮಿ, ಉಪಗ್ರಹವನ್ನು ಭೂ ಕಕ್ಷೆಗೆ ಯಶಸ್ವಿಯಾಗಿ ಸೇರಿಸಿತು’ ಎಂದು ಗೆಲಾಕ್ಸ್‌ಐ ಸಂಸ್ಥಾಪಕ ಹಾಗೂ ಸಿಇಒ ಸುಯಶ್ ಸಿಂಗ್ ತಿಳಿಸಿದ್ದಾರೆ.

‘ಕಕ್ಷೆಗೆ ಸೇರಿರುವ ಉಪಗ್ರಹ ತನ್ನ ಕಾರ್ಯಾಚರಣೆ ಆರಂಭಿಸುವಂತೆ ಮಾಡುವುದು ನಮ್ಮ ತಕ್ಷಣದ ಆದ್ಯತೆಯಾಗಿದೆ’ ಎಂದು ಅವರು ಹೇಳಿದ್ದಾರೆ. ‘ಮಿಷನ್ ದೃಷ್ಟಿ’ ಅಡಿ 2030ರ ವೇಳೆಗೆ 10 ಉಪಗ್ರಹಗಳನ್ನು ಭೂಕಕ್ಷೆಗೆ ಸೇರಿಸುವ ಗುರಿಯನ್ನು ಗೆಲಾಕ್ಸ್‌ಐ ಹೊಂದಿದೆ.

ವೈಶಿಷ್ಟ್ಯಗಳು

- ಮಿಷನ್ ದೃಷ್ಟಿ ವಿಶ್ವದ ಮೊದಲ ಆಪ್ಟೊಎಸ್‌ಎಆರ್ ಉಪಗ್ರಹವಾಗಿದೆ. ಎಲೆಕ್ಟ್ರೊ–ಆಪ್ಟಿಕಲ್ (ಇಒ) ಹಾಗೂ ಸಿಂಥೆಟಿಕ್ ಅಪರ್ಚರ್ ರೇಡಾರ್ (ಎಸ್‌ಎಆರ್) ಸಂವೇದಕಗಳನ್ನು ಒಂದೇ ಕಾರ್ಯಾಚರಣೆ ವೇದಿಕೆಯಲ್ಲಿ ಅಳವಡಿಸಿರುವ ಉಪಗ್ರಹ ಇದಾಗಿದೆ
- ಇಒ ಸಂವೇದಕಗಳಿಂದ ಪ್ರಖರ ಬಿಸಿಲು ಇದ್ದಾಗಲೂ ಅತ್ಯಂತ ನಿಚ್ಚಳ ಚಿತ್ರಗಳನ್ನು ಸೆರೆ ಹಿಡಿಯಲು ಸಾಧ್ಯವಾಗಲಿದೆ
- ಎಸ್‌ಎಆರ್ ಸಂವೇದಕಗಳು ಎಲ್ಲ ಋತುಮಾನಗಳಲ್ಲಿ ಹಾಗೂ ಎಲ್ಲ ಸಮಯದಲ್ಲಿ ಭೂಮಿಯ ಚಿತ್ರಗಳನ್ನು ಸೆರೆ ಹಿಡಿಯಲು ನೆರವಾಗಲಿವೆ
- ಭೂಮೇಲ್ಮೈ ಚಿತ್ರಗಳನ್ನು ಸೆರೆಹಿಡಿಯುವುದಕ್ಕೆ ಸಂಬಂಧಿಸಿ ಸಾಂಪ್ರದಾಯಿಕ ಸಾಧನಗಳು ಕೆಲ ಮಿತಿಗಳನ್ನು ಹೊಂದಿವೆ. ಈ ಕೊರತೆಗಳನ್ನು ‘ದೃಷ್ಟಿ’ ಉಪಗ್ರಹ ನಿವಾರಿಸಲಿದೆ
- ಭೂ ವೀಕ್ಷಣಾ ಉಪಗ್ರಹವಾಗಿಯೂ ಕಾರ್ಯನಿರ್ವಹಿಸುವುದರಿಂದ ರಕ್ಷಣಾ ಕ್ಷೇತ್ರ, ಕೃಷಿ, ವಿಪತ್ತು ನಿರ್ವಹಣೆ, ಸಾಗರಯಾನದ ಮೇಲೆ ಕಣ್ಗಾವಲು ಹಾಗೂ ಮೂಲಸೌಕರ್ಯಗಳ ಅಭಿವೃದ್ಧಿಗೆ ಯೋಜನೆ ರೂಪಿಸುವಲ್ಲಿ ಈ ಉಪಗ್ರಹ ನಿರ್ಣಾಯಕ ಪಾತ್ರ ವಹಿಸಲಿದೆ

ಛತ್ತೀಸಗಢ ಮದ್ಯ ಹಗರಣ, ಇ.ಡಿ.ದಾಳಿ

₹53 ಲಕ್ಷ ನಗದು, ಚಿನ್ನಾಭರಣ ವಶ

ನವದೆಹಲಿ (ಪಿಟಿಐ): ಛತ್ತೀಸಗಢದಲ್ಲಿ ನಡೆದಿದೆ ಎನ್ನಲಾದ ₹2,800 ಕೋಟಿ ಮೊತ್ತದ ಮದ್ಯ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ವಿವಿಧೆಡೆ ದಾಳಿ ನಡೆಸಿ ₹53 ಲಕ್ಷ ನಗದು ಮತ್ತು ₹4 ಕೋಟಿಗೂ ಹೆಚ್ಚು ಮೌಲ್ಯದ ಚಿನ್ನಾಭರಣಗಳನ್ನು ವಶಕ್ಕೆ ಪಡೆದಿದೆ.

ರಾಯಪುರ, ದುರ್ಗ್, ಭಿಲಾಯ್ ಮತ್ತು ಬಿಲಾಸ್‌ಪುರಗಳಲ್ಲಿರುವ ಮದ್ಯದ ವ್ಯಾಪಾರಿಗಳು, ಲೆಕ್ಕ ಪರಿಶೋಧಕರು, ಉದ್ಯಮಿಗಳ ಮನೆ ಮತ್ತು ಕಾರ್ಪೊರೇಟ್ ಸಂಸ್ಥೆಗಳ ಕಚೇರಿಗಳ ಮೇಲೆ ಏಪ್ರಿಲ್ 30ರಂದು ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದರು.

‘₹53 ಲಕ್ಷ ನಗದು, 3.23 ಕೆ.ಜಿ. ಚಿನ್ನದ ಆಭರಣ, ₹4.86 ಕೋಟಿ ಮೌಲ್ಯದ ಚಿನ್ನದ ಗಟ್ಟಿಗಳನ್ನು ಪರಿಶೀಲನೆಯಲ್ಲಿ ವಶಕ್ಕೆ ಪಡೆಯಲಾಗಿದೆ. ಆರೋಪವನ್ನು ಸಾಬೀತುಪಡಿಸುವ ಹಲವು ದಾಖಲೆಗಳು ಮತ್ತು ಡಿಜಿಟಲ್ ಸಾಕ್ಷ್ಯಗಳು ಸಿಕ್ಕಿವೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2019ರಿಂದ 2022ರ ನಡುವೆ ಭೂಪೇಶ್ ಬಾಘೆಲ್ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅಬಕಾರಿ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿ ಇ.ಡಿ ಈ ಹಿಂದೆಯೂ ಹಲವು ಬಾರಿ ದಾಳಿ ನಡೆಸಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


✗ **ಕಾರಿನಲ್ಲಿ** ಕುಳಿತ ಪುರುಷನಿಗೆ ಮಹಿಳೆಯೊಬ್ಬರು ಚಪ್ಪಲಿಯಿಂದ ಥಳಿಸುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮುಸ್ಲಿಂ ವ್ಯಕ್ತಿಯು ಮಹಿಳೆಗೆ ಕಿರುಕುಳ ನೀಡಿದ್ದರು. ಅದರಿಂದ ಕೆರಳಿದ ಆ ಮಹಿಳೆಯು ವ್ಯಕ್ತಿ ಕಾರಿನಲ್ಲಿ ಕುಳಿತಿದ್ದಾಗ ಚಪ್ಪಲಿಯಿಂದ ಥಳಿಸಿದರು. ಈ ಘಟನೆ ದೆಹಲಿ ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಈ ಸುದ್ದಿ ನಿಜವಲ್ಲ.



✓ **ವಿಡಿಯೊದ** ಕೀಫ್ರೇಮ್‌ಗಳನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಬಾಂಗ್ಲಾದೇಶದ ಹಲವು ಮಾಧ್ಯಮಗಳು ಇದೇ ವಿಡಿಯೊ ಅನ್ನು ಹಂಚಿಕೊಂಡಿರುವುದು ಕಂಡಿತು. ಇದು ಢಾಕಾ ವಿಶ್ವವಿದ್ಯಾಲಯದಲ್ಲಿ ನಡೆದ ಘಟನೆಯಾಗಿದೆ. ಹೊರಗಿನವನೊಬ್ಬ ವಿಶ್ವವಿದ್ಯಾಲಯಕ್ಕೆ ಬಂದು ಯುವತಿಯರನ್ನು ಚುಡಾಯಿಸುತ್ತಿದ್ದ, ವಿದ್ಯಾರ್ಥಿಗಳು ಅವನನ್ನು ಥಳಿಸಿದರು, ಘಟನೆಯು 2026ರ ಏ.26ರಂದು ನಡೆದಿದೆ ಎಂದು ವರದಿಗಳಲ್ಲಿ ಉಲ್ಲೇಖಿಸಲಾಗಿದೆ. ಘಟನೆ ನಡೆದಿರುವುದು ನಿಜ ಎಂದು ಢಾಕಾ ವಿ.ವಿ. ಒಪ್ಪಿಕೊಂಡಿದೆ. ಬಾಂಗ್ಲಾದೇಶದ ವಿಡಿಯೊ ಹಂಚಿಕೊಂಡು, ಅದಕ್ಕೆ ಕೋಮು ಆಯಾಮ ನೀಡಿ, ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಫ್ಯಾಕ್ಟ್‌ಲಿ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಮನುಷ್ಯ ಧರ್ಮ ಮಾತನಾಡುವ ಹೊತ್ತು

ನುಡಿ ಬೆಳಗು — ದಾದಾಪೀರ್ ನವಿಲೇಹಾಳ್



ನರಸಿಂಹಯ್ಯ ಬೆಣ್ಣೆದೋಸೆ ತಿನ್ನಲು ಹೋದರು. ಆ ಹೋಟೆಲಿನಲ್ಲಿ ದೋಸೆ ಹುಯ್ಯುವವನ ಹೊರತಾಗಿ ಯಾರೂ ಇರಲಿಲ್ಲ. ಇವರು ದೋಸೆ ಆರ್ಡರ್ ಮಾಡಿ ಮೊಬೈಲ್‌ನಲ್ಲಿ ಹೋಟೆಲ್ಲಿನ ಇಡೀ ಒಳಾವರಣವನ್ನು ವಿಡಿಯೊ ಮಾಡಿಕೊಂಡರು. ನರಸಿಂಹಯ್ಯ ದೋಸೆ ತಿಂದು ಮುಗಿಸುವಷ್ಟರಲ್ಲಿ ಮಕ್ಕಳು ಮರಿ ಸಮೇತ ಹದಿನೈದು ಇಪ್ಪತ್ತು ಮಂದಿ ಹೋಟೆಲ್ ಒಳಗೆ ಧಾವಿಸಿ ಬಂದು ಕುಳಿತರು. ದೋಸೆ ಹೋಟೆಲ್ ಗಿರಾಕಿಗಳಿಲ್ಲದೇ ಖಾಲಿ ಹೊಡೆಯುತ್ತಿದ್ದ ದೃಶ್ಯವನ್ನು ವಿಡಿಯೊ ಮಾಡಿದ್ದ ಇವರಿಗೆ ಸೌದೆ ಚಾಚುತ್ತಾ ಉರಿ ಹೆಚ್ಚಿಸುತ್ತಿದ್ದ ವ್ಯಕ್ತಿಯ ಕೆಲಸ ಒಂದು ರೂಪಕದಂತೆ ಕಂಡಿತು.

ಸಮಕಾಲೀನ ಸಮಾಜದ ವಸ್ತುಸ್ಥಿತಿ ಹೀಗೆಯೇ ಇದೆ ಅನಿಸಿತು. ಸಾಮಾನ್ಯ ಜನರು ತಮ್ಮ ಕೆಲಸ ಕಾರ್ಯಗಳ ನಡುವೆ ಏನನ್ನು ಮಾತಾಡುತ್ತಾರೆ, ಯಾವುದು ಅವರ ಮನಸ್ಸನ್ನು ಆವರಿಸಿದೆ, ಅವರನ್ನು ನಿಜಕ್ಕೂ ಕಾಡುತ್ತಿರುವ ಸಮಸ್ಯೆಗಳು ಯಾವುವು ಎಂದು ಆಲೋಚಿಸಿದರೆ ಆತಂಕವಾಗುತ್ತದೆ. ನಿತ್ಯದ ಬವಣೆಗಳಾದ ಹಸಿವು, ನಿರುದ್ಯೋಗ, ಕುದಿವ ಬಿಸಿಲು, ಬೆಲೆ ಏರಿಕೆಗಳ ನಡುವೆ ನೆಮ್ಮದಿಯನ್ನು ಕಾಣಲು ಜನ ರಾಜಕೀಯ ಬೆಳವಣಿಗೆಗಳನ್ನು ಆಸೆಗಣ್ಣುಗಳಿಂದ ನೋಡುತ್ತಾರೆ. ತಮ್ಮ ಅಸಹಾಯಕತೆಯ ಅರಿವಿದ್ದೂ ರಾಜಕಾರಣದಲ್ಲಿ ತಮ್ಮ ಬದುಕನ್ನು ಎತ್ತರಿಸುವಂತಹ ಏನಾದರೂ ನಡೆಯಬಹುದು ಎಂದು ಆಶಿಸುವವರು, ‘ಅಯ್ಯೋ, ಯಾರು ಬಂದರೆ ಏನು ರಾಗಿ ಬೀಸುವುದು ತಪ್ಪುತ್ತದೆಯೇ’ ಎಂದು ಹತಾಶೆಯ ಮಾತಾಡುವವರು ಒಟ್ಟಿಗೆ ಕಾಣಸಿಗುತ್ತಾರೆ. ತಬ್ಬಲಿಗಳೂ ಅಮಾಯಕರೂ ಆದ ಜನರನ್ನು ರಾಜಕೀಯದಲ್ಲಿ ಅಧಿಕಾರ ಎಂಬುದು ಕಾರ್ಯಕ್ರಮಗಳ ಮೂಲಕ ತಲುಪಬೇಕು.

ಆದರೆ, ಆಗುತ್ತಿರುವುದು ಏನು? ಜನರ ನೋವಿಗೆ ಮಿಡಿವ ಪ್ರಾಣಮಿತ್ರನಾಗಿರಬೇಕಾದ ರಾಜಕಾರಣ ದ್ವೇಷದ ಕುದಿಬಿಂದುವಿನಲ್ಲಿ ನಿಲ್ಲಿಸಿ ನೈತಿಕವಾಗಿ ಸೋತು ಹೋಗಿದೆ. ಉದ್ಯೋಗ ಇಲ್ಲದವರೇ ಎಲ್ಲೆಲ್ಲೂ ಕಾಣುತ್ತಿದ್ದಾರೆ. ಅವರ ಅಸಹಾಯಕತೆಯೇ ರಾಜಕಾರಣದ ಬಂಡವಾಳವಾಗುತ್ತಿದೆ. ಜನರ ನಿರೀಕ್ಷೆ ಮತ್ತು ಆಕ್ರೋಶಗಳನ್ನು ತಣಿಸಲಾಗದೆ ರಾಜಕೀಯ ನೈತಿಕತೆ ನಕಾರಾತ್ಮಕ ಪರ್ಯಾಯಗಳನ್ನು ನಂಬಿ ಹೊರಟಂತಿದೆ. ನಾವು ಭಾರತೀಯರು ಎಂಬ ಹೆಮ್ಮೆ ನಮ್ಮದು ಎಂದು ಹೇಳುತ್ತಲೇ ಎಲ್ಲ ಬಗೆಯ ಒಡಕು ತುಂಬುವ ವಿಕಾರಗಳು ಮುನ್ನೆಲೆಗೆ ಬಂದುನಿಂತಿವೆ. ಚರಿತ್ರೆ, ದೇವರು, ಧರ್ಮ, ಜಾತಿ, ಗಂಡು ಹೆಣ್ಣು ಎಂಬ ಸಂಗತಿಗಳು ನಮ್ಮ ಖಾಸಗಿ ಬದುಕಿನ ಭಾಗಗಳಾಗಿವೆ. ಅವು ನಮ್ಮ ಸಾರ್ವಜನಿಕ ಜೀವನದಲ್ಲಿ ಎಂದೂ ಇಲ್ಲದ ಆತಂಕವನ್ನೂ, ಅಭದ್ರತೆಯನ್ನೂ ತಂದಂತಿವೆ.

ರಾಜಕೀಯ ಅಧಿಕಾರದ ನಿಜವಾದ ಪಾಲುದಾರರಾದ ಜನರ ಜೀವನವು ಚರಿತ್ರೆಯಿಂದ ಹಿಂಸೆಯನ್ನು, ಒಬ್ಬರ ದೈವದಿಂದ ಅನ್ಯ ದೈವದ ಅಣಕವನ್ನು, ಧರ್ಮದಿಂದ ಅಧರ್ಮವನ್ನು, ಜಾತಿಯಿಂದ ಅಸಹನೆಯನ್ನು ಆರಿಸಿಕೊಂಡಂತಿದೆ. ಇದೆಲ್ಲವೂ ಒಟ್ಟಾಗಿ ದ್ವೇಷ ಜ್ವಾಲೆಯ ಉಲ್ಬಣಕ್ಕೆ ಕಾರಣವಾದಂತಿದೆ. ಅಂದರೆ ಇಡೀ ಸಮಾಜ ಪರಸ್ಪರ ಮತ್ಸರದಿಂದ ಕುದಿಯುತ್ತಲೇ ಇರುವಂತೆ ನೋಡಿಕೊಳ್ಳುತ್ತಿರುವ ವಿಕಾರಪೂರ್ಣ ರಾಜಕಾರಣ ದೋಸೆ ಹುಯ್ಯಲು ಹೆಂಚನ್ನು ಸದಾ ಸನ್ನದ್ಧವಾಗಿಡುವ ಹೋಟೆಲ್ಲಿನವನ ಮನಃಸ್ಥಿತಿಯನ್ನು ಹೋಲುತ್ತದೆ. ಧರ್ಮ ದೇವರು ಮತ್ತು ಚರಿತ್ರೆಗಳ ಹುಸಿನಿರೂಪಣೆಗಳ ಕುರಿತಾದ ನಂಬಿಕೆಯು ಸತ್ಯ ನಾಶಕ್ಕೆ ನಾಂದಿಯಾಗಿದೆ. ಚುನಾವಣೆಯಲ್ಲಿ ಮತದಾರರೆಂಬ ಗಿರಾಕಿಗಳು ಬಂದ ಒಡನೆಯೇ ದೋಸೆ ಹಾಕಿ ವ್ಯಾಪಾರ ಲಾಭ ಗಿಟ್ಟಿಸುವ ಹೋಟೆಲ್ಲಿನವನ ಜಾಣ್ಮೆಯನ್ನು ಅನುಕರಿಸಿದಂತಾಗಿದೆ.


ಧರ್ಮ, ದೇವರು ನಮ್ಮ ಬೌದ್ಧಿಕ ಕುತೂಹಲವನ್ನು ತಣಿಸಬೇಕೇ ಹೊರತು ನಮ್ಮಲ್ಲಿ ಒಡಕಿನ ಹಾಲಾಹಲವನ್ನು ಸುರಿದು ಸಾಯಿಸಬಾರದು. ನಮ್ಮ ನೆಲ ಸದಾ ಕುಲುಮೆಯ ಹಾಗೆ ಉರಿಯುವಂತೆ ಮಾಡಿ ಅದರ ಬಿಸಿಯಲ್ಲಿ ಮೈಕಾಯಿಸಿಕೊಳ್ಳುವುದರ ವಿರುದ್ಧ ಧರ್ಮ ಮಾತನಾಡಬೇಕು. ಇದು ನಿಜವಾಗಿಯೂ ಜನರು ಅನ್ನ ದೇವರನ್ನು, ಧರ್ಮವು ಜನಸತ್ಯಕಾರಣವನ್ನು ಆರಾಧಿಸುವ ಹೊತ್ತು. ❖

ಪದಬಂಧ 6392

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇವಲೋಕದ ಸ್ತ್ರೀ (4)
3.ವಾಸವಿರುವ ಜಾಗದಲ್ಲಿ ಹರಡಿರುವ ಪರಿಮಳ (4)
5.ಮಧುರ ಫಲಗಳನ್ನು ಬಿಡುವ ವೃಕ್ಷ (2)
6.ಕಳೆಯುವ ಲೆಕ್ಕ (5)
8.ಗಡಿಯಲ್ಲಿರುವ ವ್ಯಾಯಾಮ ಶಾಲೆ (3)
9.ಇದಂತೂ ಕೆಲಸಕ್ಕೆ ಬಾರದ ಮಾತು (5)
11.ಬಯ್ಯಲು ಈ ಆಸೆಯೂ ಕಾರಣವೇ? (3)
12.ಹೊಸಿಲ ಹತ್ತಿರ ನಿಂತು ಆಡಿರುವ ಕೆಟ್ಟ ಮಾತು (5)
15.ಹಲಗೆಗಾಗಿ ಬೆಳೆದ ಶತೃತ್ವ! (2)
16.ಕೊನೆಗೆ ಹಾರವನ್ನಿಟ್ಟು ಹೋಗಲಾಡಿಸುವುದು (4)
17.ಸುಗಂಧ ಲೇಪನವನ್ನು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1.ಕೇಳಲು ಹಿತಕರವಾದುದು (3)
2.ಗಣಿತವನ್ನು ಬಲ್ಲವನು (3)
3.ಅಸುರನ ಹತ್ತಿರವಿರುವ ದೇವತೆ (2)
4.ಗಡಿ ಹತ್ತಿರ ತಲೆದೋರಿದ ಶೀತ (3)
5.ಮನಸ್ಸು ಇಲ್ಲಿ ಚಿಕ್ಕದಾಗಿದೆ! (2)
7.ಸೊಗಸಾಗಿಯೂ ಕಾಣುತ್ತಿರುವ ಶುಭಚಿಹ್ನೆ (3)
8.ಜಾಗಟೆ ಸದ್ದಿಗೇ ಆದ ಗೊಂದಲ (3)
9.ಧಾನ್ಯ ಕುಟ್ಟಲು ಬಳಸುತ್ತಿದ್ದ ಸಾಧನ (3)
10.ಸಾಲ ಮಾಡಿ ಖರೀದಿಸಿರುವ ಮಾವು (3)
11.ಸ್ಲೇಟಿನ ಮೇಲೆ ಬರೆಯಲು ಬಳಸುವ ಸಾಧನ (3)
12.ಹೊರಗೆ ಆವರಿಸಿರುವ ಧೂಮ (2)
13.ಅದೃಷ್ಟವಂತ ಇಲ್ಲಿದ್ದಾನೆ (3)
14.ಸೆರೆಮನೆ ಹತ್ತಿರವಿರುವ ಕುದುರೆ (3)
15.ಹಮ್ಮೀರನಿಗೊಲಿದಿರುವ ಶಿವ (2)



6391ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮದುಮಗ 3.ಒಡ್ಡೋಲಗ 5.ಜುಲುಮೆ 6.ರಿಕಾಪು 8.ಕಪಾಳ 9.ಕಾಗೆಬಂಗಾರ 10.ಉಸಿರು 11.ನಗದು 13.ಸಂಭಾವ್ಯ 15.ರಣಭೇರಿ 16.ನತದೃಷ್ಟ

ಮೇಲಿಂದ ಕೆಳಕ್ಕೆ:
1.ಮದಕರಿ 2.ಗಲೀಜು 3.ಒಲುಮೆ 4.ಗಟ್ಟಿಕುಳ 7.ಪುಕಾರು 8.ಕರನ 10.ಉಪಕಾರ 12.ದುರಾದೃಷ್ಟ 13.ಸಂಚಾರಿ 14.ವ್ಯಸನ

ಸುಡೊಕು 6775

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4		7		8			2	6
								8
6		5		9		4		
	2		6				3	5
5		3	2		1	8		9
	1				9		4	2
	6			2		3		
		8	9					7
	5			3	4		9	

6774 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ತಿದ್ದುಪಡಿ: ಭಾನುವಾರ ಸಂಚಿಕೆಯಲ್ಲಿ 6390ರ ಪದಬಂಧ ಹಾಗೂ 6773ರ ಸುಡೊಕು ತಪ್ಪಾಗಿ ಪುನರಾವರ್ತನೆಯಾಗಿದೆ. ಶನಿವಾರ ಪ್ರಕಟವಾದ ಪದಬಂಧ 6391ಹಾಗೂ ಸುಡೊಕು 6774ರ ಉತ್ತರಗಳನ್ನು ಇಲ್ಲಿ ನೀಡಲಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

04 ಮೇ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ತೃತೀಯ ಅಹೋರಾತ್ರ ನಕ್ಷತ್ರ: ಅನುರಾಧ ಗಂ. 9-58 ಯೋಗ: ಪರಿಘ ಗಂ. 23-20 ಕರಣ: ವಣಿಜ ಗಂ. 16-13, ಮೇಷ ಮಾಸದ 21 ನೇ ದಿನ. ಮಳೆ ನಕ್ಷತ್ರ : ಭರಣಿ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00, ಸೂರ್ಯೋದಯ : 06-12 ಸೂರ್ಯಾಸ್ತ : 06-43, ಮುಸ್ಲಿಂ ದಿನಾಂಕ : 16 ಜುಲ್ಕಾದಾ , ಅದೃಷ್ಟ ಸಂಖ್ಯೆ : 5, 8

ಮೇಷ: ವಾದ ವಿವಾದಗಳಲ್ಲಿ ಸೋಲನ್ನು ಎದುರು ನೋಡಿದರೂ ಅದರಿಂದಾಗಿ ತಪ್ಪು ತಿಳಿವಳಿಕೆಗಳು ದೂರಾಗಲಿವೆ. ಹೊಸ ಯೋಜನೆಗಳ ಬಗೆಗೆ ಸ್ನೇಹಿತರಲ್ಲಿ ಚರ್ಚಿಸಿ. ಒತ್ತಡಗಳಿಂದ ಹೊರಬರುವಿರಿ.

ವೃಷಭ: ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಿ. ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳವಾಗುವುದು. ಅನಿರೀಕ್ಷಿತ ಪ್ರಯಾಣದ ಸಂಭವವಿದೆ.

ಮಿಥುನ: ಸೃಜನಾತ್ಮಕ ಕಲ್ಪನೆಯನ್ನು ಸೂಕ್ತ ರೀತಿಯಲ್ಲಿ ಬಳಕೆ ಮಾಡಿ. ಹಿರಿಯ ಸಹೋದ್ಯೋಗಿಯೊಬ್ಬರ ಸಲಹೆ ಸೂಕ್ತ ಎನಿಸಲಿದೆ. ಹಿರಿಯರನ್ನು ಭಕ್ತಿಯಿಂದ ನೋಡಿ.

ಕರ್ಕಾಟಕ: ದೊಡ್ಡ ಕನಸುಗಳನ್ನು ಸಾಕಾರಗೊಳಿಸುವಲ್ಲಿ ದಿನ ಸೂಕ್ತವಾಗಿದೆ. ಮಾಡುವ ಎಲ್ಲಾ ಕೆಲಸಗಳೂ ಉತ್ತಮ ಉದ್ದೇಶವನ್ನೇ ಹೊಂದಿರುವುದು. ಸಾಲ ತೆಗೆದುಕೊಳ್ಳುವ ನಿರ್ಧಾರ ಸರಿಯಲ್ಲ.

ಸಿಂಹ: ಆಫೀಸಿನಲ್ಲಿ ಮಹತ್ವದ ಯೋಜನೆಯೊಂದಕ್ಕೆ ಸೃಜನಾತ್ಮಕ ಕಲೆಯನ್ನು ಉಪಯೋಗಿಸಿಕೊಳ್ಳುವಿರಿ. ಅದರ ಫಲವಾಗಿ ಅಧಿಕಾರಿಗಳಿಗೆ ಗಮನಾರ್ಹ ವ್ಯಕ್ತಿಯಾಗುವಿರಿ. ಒಪ್ಪಿಕೊಂಡ ಸಂಬಂಧದಿಂದ ಪ್ರತಿಷ್ಠೆ ಹೆಚ್ಚಲಿದೆ.

ಕನ್ಯಾ: ಮುಖ್ಯ ವಿಚಾರಗಳನ್ನು ಹೆಂಡತಿಯೊಂದಿಗೆ ಚರ್ಚಿಸುವುದಕ್ಕೆ ಸಮಯ ನೋಡುವುದು ಸೂಕ್ತ. ಕಬ್ಬಿಣ ಮುಂತಾದ ಕಟ್ಟಡ ನಿರ್ಮಾಣದ ಸಾಮಗ್ರಿಗಳಿಂದ ಲಾಭವಿದೆ. ಸಹವರ್ತಿಗಳು ಬೆಂಬಲಕ್ಕೆ ಬರುವರು.

ತುಲಾ: ನಿರುದ್ಯೋಗಸ್ಥರಿಗೆ ಹೊರರಾಜ್ಯವೊಂದರಲ್ಲಿ ಕೆಲಸ ನಿರ್ವಹಿಸುವ ಅವಕಾಶ ಎದುರಾದರೆ ಒಪ್ಪಿಕೊಳ್ಳಿ. ನದಿತೀರದಲ್ಲಿ ಜಮೀನನ್ನು ಹೊಂದಿದವರಿಗೆ ಕೆಲವು ಸಮಸ್ಯೆಗಳು ಸಂಭವಿಸಬಹುದು.

ವೃಶ್ಚಿಕ: ವೃತ್ತಿ ಜೀವನಕ್ಕೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವಾಗ ಗೊಂದಲ ಉಂಟಾಗಬಹುದು. ಶ್ರಮಕ್ಕೆ ಸಹಕಾರಗಳು ಒದಗಲಿವೆ. ಅನನ್ಯ ಭಕ್ತಿಯಿಂದ ಮಲ್ಲಿಕಾರ್ಜುನನನ್ನು ಆರಾಧಿಸಿ. ಕಾರ್ಯಸಿದ್ಧಿಯಾಗುವುದು.

ಧನು: ಹೊಸ ಬದುಕನ್ನು ಆರಂಭಿಸಲು ಬೇಕಾದ ಅವಕಾಶದ ಬಾಗಿಲು ತೆರೆಯುವುದು. ಆದಾಯದಲ್ಲಿ ವೃದ್ಧಿ ಕಂಡರೂ ನೆಮ್ಮದಿಯ ಕೊರತೆ ಎದ್ದುಕಾಣಲಿದೆ. ವ್ಯವಹಾರದಲ್ಲಿ ಹೆಚ್ಚಿನ ವಿಚಾರವಂತಿಕೆಯಿಂದ ವ್ಯವಹರಿಸಿ.

ಮಕರ: ವ್ಯಕ್ತಿಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವ ಬದಲಾಗಿ ಜವಾಬ್ದಾರಿಯಲ್ಲಿರುವ ಎಲ್ಲಾ ಕಾರ್ಯಗಳ ಮೇಲೂ ಗಮನ ಹರಿಸಿ. ಮಗಳ ವಿದೇಶ ಪ್ರಯಾಣದ ತಯಾರಿಯಲ್ಲಿ ಭಾಗಿಯಾಗುವಿರಿ.

ಕುಂಭ: ವೃತ್ತಿಯಲ್ಲಿ ಮೇಲಧಿಕಾರಿಗಳಿಗೂ ನಿಮಗೂ ಹೊಂದಾಣಿಕೆ ಮೂಡುವುದು ಕಷ್ಟವೆನಿಸಲಿದೆ. ನಿಶ್ಚಿತ ಯೋಜನೆಗಳಿಗೆ ಸಿದ್ಧತೆಗಳೊಡನೆ ಸನ್ನದ್ಧರಾಗುವ ಬಗ್ಗೆ ಗಮನವಿರಲಿ. ವೈದ್ಯಕೀಯ ಖರ್ಚು ಹೆಚ್ಚಲಿದೆ.

ಮೀನ: ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭವೊಂದು ಬರಲಿದೆ. ಕಿರುತೆರೆಯಲ್ಲಿ ಅಭಿನಯಿಸಲು ಅವಕಾಶಗಳು ಸಿಗಲಿವೆ. ತಂದೆಯವರು ನಿಮ್ಮ ನೆರವಿಗೆ ನಿಲ್ಲಲಿದ್ದಾರೆ.

ಗುಂಡಣ್ಣ



ಗಿಗ್ ಕಾರ್ಮಿಕರಿಗೆ ವಿಶ್ರಾಂತಿ ತಾಣ

ಬಿಸಿಲಿನಿಂದ ರಕ್ಷಿಸಲು ಕಂಪನಿಗಳಿಂದ ವಿವಿಧ ಕ್ರಮ



ನವದೆಹಲಿ (ಪಿಟಿಐ): ವಿಪರೀತವಾದ ಬಿಸಿಗಾಳಿಯಿಂದ ರಕ್ಷಿಸಿಕೊಳ್ಳಲು ಡೆಲಿವರಿ ಪಾಲುದಾರರಿಗೆ ವಿಶ್ರಾಂತಿ ತಾಣಗಳನ್ನು ನಿರ್ಮಾಣ ಮಾಡುವುದು ಸೇರಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ವಿವಿಧ ಕಂಪನಿಗಳು ತಿಳಿಸಿವೆ.

ದೇಶದ ಹಲವು ಪ್ರದೇಶಗಳಲ್ಲಿ ತಾಪಮಾನವು 40 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗಿದೆ. ವಿವಿಧ ಉತ್ಪನ್ನಗಳನ್ನು ಗ್ರಾಹಕರಿದ್ದಲ್ಲಿಗೆ ತಲುಪಿಸುವ ಡೆಲಿವರಿ ಪಾಲುದಾರರು ವಾಹನ ದಟ್ಟಣೆಯ ನಡುವೆ ಈ ಸುಡು ಬಿಸಿಲಿನಲ್ಲಿ ದ್ವಿಚಕ್ರ ವಾಹನಗಳಲ್ಲಿ ಸಂಚರಿಸುತ್ತಿದ್ದಾರೆ. ಇದರಿಂದ ಅವರು ನಿರ್ಜಲೀಕರಣ, ಬಿಸಿಲಿನ ತಾಪಕ್ಕೆ ತುತ್ತಾಗುತ್ತಿದ್ದಾರೆ.

ತ್ವರಿತವಾಗಿ ವಸ್ತುಗಳನ್ನು ಗ್ರಾಹಕರಿಗೆ ತಲುಪಿಸಬೇಕಾದ ಒತ್ತಡದಿಂದ ಗಿಗ್ ಕಾರ್ಮಿಕರು ಮಧ್ಯಾಹ್ನದ ಬಿಸಿಲಿನಲ್ಲಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗಾಗಿ, ಕೆಲವು ಕಂಪನಿಗಳು ಹವಾನಿಯಂತ್ರಿತ ವಿಶ್ರಾಂತಿ ತಾಣಗಳನ್ನು ಕೂಡ ಸ್ಥಾಪಿಸಲು ಮುಂದಾಗಿವೆ.

ಇ-ಕಾಮರ್ಸ್ ವಲಯದ ಅಮೆಜಾನ್‌ನ ಕ್ವಿಕ್ ಕಾಮರ್ಸ್ ವಿಭಾಗವಾಗಿರುವ 'ಅಮೆಜಾನ್ ನೌ' ಮೂಲಕ 'ಪ್ರಾಜೆಕ್ಟ್ ಆಶ್ರಯ' ಹೆಸರಿನಲ್ಲಿ ಪ್ರಮುಖ ನಗರಗಳಲ್ಲಿ 100 ಹವಾನಿಯಂತ್ರಿತ ವಿಶ್ರಾಂತಿ ತಾಣಗಳನ್ನು ಆರಂಭಿಸಲಾಗಿದೆ. ಈ ತಾಣದಲ್ಲಿ ಕುಡಿಯುವ ನೀರು, ಚಾರ್ಜಿಂಗ್ ಪಾಯಿಂಟ್, ಆರಾಮದಾಯಕ ಆಸನಗಳು, ಶೌಚಾಲಯ, ಪ್ರಥಮ ಚಿಕಿತ್ಸೆ ನೆರವು ಸೇರಿದಂತೆ ವಿವಿಧ ಸೌಲಭ್ಯಗಳಿವೆ. ಅಲ್ಲದೆ ಗಿಗ್ ಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣೆ ಮಾಡಲಾಗುತ್ತದೆ ಎಂದು ತಿಳಿಸಿದೆ.

ಇದೇ ರೀತಿ ಜೊಮಾಟೊ ಕಂಪನಿ ಸಹ, ರೆಸ್ಟೋರೆಂಟ್ ಪಾಲುದಾರು, ಟಿವಿಎಸ್ ಮತ್ತು ಶೆಲ್ ಕಂಪನಿಗಳೊಂದಿಗೆ ಪಾಲುದಾರಿಕೆ ಮಾಡಿಕೊಂಡಿದ್ದು, 5 ಸಾವಿರಕ್ಕೂ ಅಧಿಕ ವಿಶ್ರಾಂತಿ ತಾಣಗಳನ್ನು ನಿರ್ಮಿಸಿದೆ. ಜೊಮಾಟೊ ಮತ್ತು ಬ್ಲಿಂಕಿಟ್ ಡೆಲಿವರಿ ಪಾಲುದಾರರಿಗೆ ಆರೋಗ್ಯ ವಿಮೆಯನ್ನು ನೀಡುತ್ತಿದೆ.

ಸರಕುಗಳನ್ನು ದಾಸ್ತಾನು ಮಾಡುವ ಕೇಂದ್ರಗಳು (ಡಾರ್ಕ್‌ಸ್ಟೋರ್) ಮತ್ತು ಕಂಪನಿಯ ಕೇಂದ್ರಗಳಲ್ಲಿ ಪ್ರತ್ಯೇಕವಾಗಿ ಜಾಗವನ್ನು ಮೀಸಲಿರಿಸಿ, ಹವಾನಿಯಂತ್ರಿತ ವ್ಯವಸ್ಥೆ ಕಲ್ಪಿಸಲಾಗಿದೆ. ಇದು ಪಾಲುದಾರರಿಗೆ ಬಿಸಿಲಿನಿಂದ ರಕ್ಷಣೆ ನೀಡಲಿದೆ ಎಂದು ಜೆಪ್ಟೊ ತಿಳಿಸಿದೆ.

ಎಟರ್ನಲ್ ಮತ್ತು ಸ್ವಿಗ್ಗಿ ಕಂಪನಿಗಳು ತಂಪಾಗಿಸುವ ಜಾಕೆಟ್‌ಗಳನ್ನು ಬಿಡುಗಡೆ ಮಾಡಿವೆ. ಜೊಮಾಟೊ ಸಬ್ಸಿಡಿ ದರದಲ್ಲಿ ಹಗುರವಾದ ಸನ್‌ಸ್ಕ್ರೀನ್ ಜಾಕೆಟ್‌ಗಳನ್ನು ನೀಡುತ್ತಿದೆ, ವಿವಿಧ ಕಂಪನಿಗಳು ಒಆರ್‌ಎಸ್, ಗ್ಲುಕೋಸ್ ಸ್ಯಾಚೆಟ್‌ಗಳು ಮತ್ತು ಎಲೆಕ್ಟ್ರೋಲೈಟ್ ಪೌಡರ್‌ಗಳನ್ನು ಒಳಗೊಂಡಿರುವ ಬೇಸಿಗೆಯ ಕಿಟ್‌ಗಳನ್ನು ಪಾಲುದಾರರಿಗೆ ನೀಡುತ್ತಿವೆ.

> **ಬಿಸಿಲಿನಿಂದ ರಕ್ಷಿಸಿಕೊಳ್ಳಲು ನಮ್ಮ ಪಾಲುದಾರರಿಗೆ ಎಲೆಕ್ಟ್ರೋಲೈಟ್ ಪೌಡರ್, ಪಾನೀಯಗಳು ಸೇರಿದಂತೆ ಅಗತ್ಯ ವಸ್ತುಗಳು ಮತ್ತು ನೆರವು ನೀಡಲಾಗುತ್ತಿದೆ**
> **ಆಶುತೋಷ್ ಟಪಾರಿಯಾ,**
> ಬಿಗ್ ಬಾಸ್ಕೆಟ್‌ನ ಹಿರಿಯ ಅಧಿಕಾರಿ

ಮಾರುತಿ ಸುಜುಕಿ ಪಾಲು ಶೇ 42

ನವದೆಹಲಿ (ಪಿಟಿಐ): ದೇಶದ ಕಾರು ಮಾರುಕಟ್ಟೆಯಲ್ಲಿ ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಪಾಲು ಏಪ್ರಿಲ್ ತಿಂಗಳಿನಲ್ಲಿ ಶೇ 42ಕ್ಕೆ ಹೆಚ್ಚಳವಾಗಿದೆ.

ಮಾರುತಿ ಸುಜುಕಿಯು, ದೇಶದ ಅತಿದೊಡ್ಡ ಕಾರು ತಯಾರಿಕಾ ಕಂಪನಿಯಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ತಿಂಗಳಿನಲ್ಲಿ ಕಂಪನಿಯ ಮಾರುಕಟ್ಟೆ ಪಾಲು ಶೇ 39ರಷ್ಟಿತ್ತು. ಏಪ್ರಿಲ್ ತಿಂಗಳಿನಲ್ಲಿ ದೇಶೀಯವಾಗಿ ಕಂಪನಿಯ 1.91 ಲಕ್ಷ ಕಾರುಗಳು ಮಾರಾಟವಾಗಿದೆ. ಹೀಗಾಗಿ ಕಂಪನಿಯ ಪಾಲು ಶೇ 3ರಷ್ಟು ಹೆಚ್ಚಳವಾಗಿದೆ.

'ಪ್ರಯಾಣಿಕ ವಾಹನಗಳ ಮಾರಾಟದಲ್ಲಿನ ಹೆಚ್ಚಳವು ಕಂಪನಿಯ ಮಾರುಕಟ್ಟೆ ಪಾಲು ಏರಿಕೆಗೆ ಕಾರಣ' ಎಂದು ಮಾರುತಿ ಸುಜುಕಿ ಇಂಡಿಯಾದ ಮಾರುಕಟ್ಟೆ ಮತ್ತು ಮಾರಾಟ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಪಾರ್ಥೊ ಬ್ಯಾನರ್ಜಿ ಹೇಳಿದ್ದಾರೆ.

ಕಳೆದ ವರ್ಷದ ಏಪ್ರಿಲ್‌ನಲ್ಲಿ ಕಂಪನಿಯ 68,244 ಕಾರುಗಳು ಮಾರಾಟವಾಗಿದ್ದವು. ಅದು ಈ ಬಾರಿ 96,725ಕ್ಕೆ ಏರಿಕೆಯಾಗಿದೆ. ಎಸ್‌ಯುವಿ ಮಾರಾಟದಲ್ಲಿ ಶೇ 141ರಷ್ಟು ಜಿಗಿತವಾಗಿದ್ದು, 55,065 ವಾಹನಗಳು ಮಾರಾಟವಾಗಿವೆ ಎಂದು ತಿಳಿಸಿದ್ದಾರೆ.

ರಾಜ್ಯದ ಕರಾವಳಿ ಪ್ರವಾಸೋದ್ಯಮವು ವೇಗವಾಗಿ ಬೆಳೆಯದಿರಲು ಮುಖ್ಯ ಕಾರಣವೇನು?

- ಕಟ್ಟುನಿಟ್ಟಾದ ನಿಯಮಗಳು
- ಸರ್ಕಾರದ ಇಚ್ಛಾಶಕ್ತಿಯ ಕೊರತೆ
- ಸರಿಯಾದ ಪ್ರಚಾರ, ಸುರಕ್ಷತೆ ಸೌಲಭ್ಯ ಇಲ್ಲದಿರುವುದು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು: 100 ಕ್ಕೆ ₹590, 12 ಕ್ಕೆ ₹84
ಮೈಸೂರು: 100 ಕ್ಕೆ ₹595

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ) ₹300-555
ದ್ವಿತಳಿ (ಬಿ.ವಿ) ₹388-709

ಸರ್ಕಾರಕ್ಕೆ ಸಾಲ ನೀಡಿ, ಬಡ್ಡಿ ಗಳಿಸಿ

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ದೇಶದ ಹಣಕಾಸು ಮಾರುಕಟ್ಟೆಯಲ್ಲಿ ಈಗ ಸಾಮಾನ್ಯ ಹೂಡಿಕೆದಾರರಿಗೂ ಪ್ರಮುಖ ಸ್ಥಾನ ಸಿಕ್ಕಿದೆ. ಈ ಹಿಂದೆ ದೊಡ್ಡ ಬ್ಯಾಂಕ್‌ಗಳು ಮತ್ತು ವಿಮಾ ಕಂಪನಿಗಳಿಗೆ ಮಾತ್ರ ಸೀಮಿತವಾಗಿದ್ದ ಸರ್ಕಾರಿ ಸಾಲಪತ್ರಗಳ (ಬಾಂಡ್) ಮಾರುಕಟ್ಟೆ, ಈಗ ಸಾಮಾನ್ಯ ಜನರಿಗೂ ಮುಕ್ತವಾಗಿದೆ. ಕಷ್ಟಪಟ್ಟು ಸಂಪಾದಿಸಿದ ಹಣಕ್ಕೆ ಬ್ಯಾಂಕ್ ನಿಶ್ಚಿತ ಠೇವಣಿಗಿಂತ (ಎಫ್.ಡಿ) ಹೆಚ್ಚಿನ ಸುರಕ್ಷತೆ ಮತ್ತು ಆಕರ್ಷಕ ಬಡ್ಡಿ ಬೇಕೆಂದಿದ್ದರೆ, ಆರ್‌ಬಿಐ ರಿಟೇಲ್ ಡೈರೆಕ್ಟ್ ಅತ್ಯುತ್ತಮ ಆಯ್ಕೆ.

ಏನಿದು ರಿಟೇಲ್ ಡೈರೆಕ್ಟ್?: ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಆರಂಭಿಸಿರುವ ಈ ಯೋಜನೆಯು ಸಣ್ಣ ಹೂಡಿಕೆದಾರರಿಗೆ ನೇರವಾಗಿ ಸರ್ಕಾರಿ ಸೆಕ್ಯೂರಿಟಿಗಳಲ್ಲಿ ಹಣ ಹೂಡಿಕೆ ಮಾಡಲು ಅವಕಾಶ ನೀಡುತ್ತದೆ. ಇಲ್ಲಿ ನೀವು ಸರ್ಕಾರಕ್ಕೆ ಸಾಲ ನೀಡುತ್ತೀರಿ ಮತ್ತು ಅದಕ್ಕೆ ಪ್ರತಿಯಾಗಿ ಸರ್ಕಾರ ನಿಮಗೆ ಬಡ್ಡಿ ಪಾವತಿಸುತ್ತದೆ. ಈ ವ್ಯವಸ್ಥೆಯಲ್ಲಿ ಯಾವುದೇ ಮ್ಯೂಚುವಲ್ ಫಂಡ್ ಕಂಪನಿಗಳಾಗಲಿ, ಬ್ಯಾಂಕ್‌ಗಳಾಗಲಿ ಮಧ್ಯವರ್ತಿಗಳಾಗಿ ಇರುವುದಿಲ್ಲ. ಇದರಿಂದಾಗಿ ನೀವು ಯಾವುದೇ ಕಮಿಷನ್ ನೀಡುವ ಅಗತ್ಯವಿಲ್ಲ, ಲಾಭದ ಪೂರ್ಣ ಪಾಲು ನಿಮ್ಮ ಖಾತೆಗೆ ಸೇರುತ್ತದೆ.

ದುಡ್ಡಿಗೆ ಪೂರ್ಣ ಗ್ಯಾರಂಟಿ: ಯಾವುದೇ ಹೂಡಿಕೆಯ ಮೊದಲ ಆದ್ಯತೆ ಸುರಕ್ಷತೆ. ಯಾವುದೇ ಬ್ಯಾಂಕ್ ಆದರೂ ಅಲ್ಲಿ ನಿಮ್ಮ ಠೇವಣಿಗೆ ಕೇವಲ ₹5 ಲಕ್ಷದವರೆಗೆ ಮಾತ್ರ ವಿಮೆ ಇರುತ್ತದೆ. ಅಂದರೆ ಬ್ಯಾಂಕ್ ದಿವಾಳಿಯಾದರೆ ನೀವು ಎಷ್ಟೇ ದೊಡ್ಡ ಮೊತ್ತ ಇಟ್ಟಿದ್ದರೂ ನಿಮಗೆ ಸಿಗುವುದು ಗರಿಷ್ಠ ₹5 ಲಕ್ಷ ಮಾತ್ರ. ಆದರೆ ಆರ್‌ಬಿಐ ಬಾಂಡ್‌ಗಳಲ್ಲಿ ನೀವು ತೊಡಗಿಸುವ ಪ್ರತಿ ರೂಪಾಯಿಗೂ ಭಾರತ ಸರ್ಕಾರದ ಗ್ಯಾರಂಟಿ ಇರುತ್ತದೆ. ಅಂದರೆ, ನಿಮ್ಮ ಹಣಕ್ಕೆ ಇಲ್ಲಿ ಶೇ 100ರಷ್ಟು ರಕ್ಷಣೆ ಇದೆ. ಇದರ ಅರ್ಥ, ಕೇಂದ್ರ ಸರ್ಕಾರವು ನಿಮ್ಮ ಅಸಲು ಮತ್ತು ಬಡ್ಡಿಯನ್ನು ಪಾವತಿಸುವ ಹೊಣೆ ಹೊತ್ತುಕೊಳ್ಳುತ್ತದೆ. ಖಾಸಗಿ ಕಂಪನಿಗಳು ಅಥವಾ ಸಣ್ಣ ಬ್ಯಾಂಕ್‌ಗಳು ದಿವಾಳಿಯಾಗುವ ಸಾಧ್ಯತೆ ಇರಬಹುದು, ಆದರೆ ಸರ್ಕಾರವು ತನ್ನ ಸಾಲವನ್ನು ಮರುಪಾವತಿಸದಿರುವ ಸಾಧ್ಯತೆ ಅತ್ಯಂತ ವಿರಳ. ಹೀಗಾಗಿ, ಇದು ಭಾರತದಲ್ಲಿ ಲಭ್ಯವಿರುವ ಒಂದು ಅತ್ಯಂತ ಸುರಕ್ಷಿತ ಹೂಡಿಕೆಯಾಗಿದೆ.

ಆಯ್ಕೆಗಳ ಭಂಡಾರ: ಆರ್‌ಬಿಐ ಪೋರ್ಟಲ್‌ನಲ್ಲಿ ಹಣಕಾಸಿನ ಗುರಿಗಳಿಗೆ ಅನುಗುಣವಾಗಿ ವಿವಿಧ ಆಯ್ಕೆಗಳಿವೆ.

1. ಫ್ಲೋಟಿಂಗ್ ರೇಟ್ ಸೇವಿಂಗ್ಸ್ ಬಾಂಡ್ಸ್ (ಎಫ್‌ಆರ್‌ಎಸ್‌ಬಿ): ಪ್ರಸ್ತುತ ಇದು ಸುಮಾರು ಶೇ 8.05ರಷ್ಟು ಬಡ್ಡಿ ನೀಡುತ್ತಿದೆ. ಇದರ ವಿಶೇಷವೆಂದರೆ, ಮಾರುಕಟ್ಟೆಯಲ್ಲಿ ಬಡ್ಡಿ ದರ ಏರಿಕೆಯಾದಂತೆ ನಿಮ್ಮ ಲಾಭವೂ ಹೆಚ್ಚಾಗುತ್ತದೆ. ಪ್ರತಿ 6 ತಿಂಗಳಿಗೊಮ್ಮೆ ಬಡ್ಡಿ ದರವನ್ನು ಪರಿಷ್ಕರಿಸಲಾಗುತ್ತದೆ. ಇದರ ಅವಧಿ 7 ವರ್ಷ.

2. ಟ್ರೆಜರಿ ಬಿಲ್‌ಗಳು (ಟಿ-ಬಿಲ್‌ಗಳು): ಇದು ಅಲ್ಪಾವಧಿಯ ಹೂಡಿಕೆ. 91 ದಿನಗಳು, 182 ದಿನಗಳು ಅಥವಾ 364 ದಿನಗಳವರೆಗೆ ಹಣವನ್ನು ತೊಡಗಿಸಬಹುದು. ಉಳಿತಾಯ ಖಾತೆಗಿಂತ ಹೆಚ್ಚಿನ ಲಾಭ ಬೇಕು ಎನ್ನುವವರಿಗೆ ಇದು ಸೂಕ್ತ.

3. ಸರ್ಕಾರಿ ಸೆಕ್ಯೂರಿಟಿಗಳು: ಇದು ದೀರ್ಘಾವಧಿಯ ಹೂಡಿಕೆ. 2 ವರ್ಷದಿಂದ ಹಿಡಿದು 40 ವರ್ಷಗಳವರೆಗೆ ನೀವು ಸ್ಥಿರ ಬಡ್ಡಿ ದರವನ್ನು ಲಾಕ್ ಮಾಡಬಹುದು. ನಿವೃತ್ತಿ ಜೀವನದ ಯೋಜನೆ ಮಾಡುವವರಿಗೆ ಇದು ಹೇಳಿ ಮಾಡಿಸಿದಂತಿದೆ.

ಬಡ್ಡಿ ದರ: 2026ರ ಸಾಲಿನಲ್ಲಿ ಫ್ಲೋಟಿಂಗ್ ರೇಟ್ ಬಾಂಡ್‌ಗಳು ಸುಮಾರು ಶೇ 8.05ರಷ್ಟು ಬಡ್ಡಿಯನ್ನು ನೀಡುತ್ತಿವೆ. ಈ ಬಡ್ಡಿಯನ್ನು ವರ್ಷಕ್ಕೆ ಎರಡು ಬಾರಿ (ಜೂನ್ ಮತ್ತು ಡಿಸೆಂಬರ್‌ನಲ್ಲಿ) ನಿಮ್ಮ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುತ್ತದೆ. ಕನಿಷ್ಠ ಹೂಡಿಕೆಯ ಮೊತ್ತ ಕೇವಲ ₹1 ಸಾವಿರ ಆಗಿರುವುದರಿಂದ, ಸಣ್ಣ ಉಳಿತಾಯ ಮಾಡುವವರಿಗೂ ಇದು ಅನುಕೂಲಕರ. ಇಲ್ಲಿ ಯಾವುದೇ ಏಜೆಂಟ್ ಅಥವಾ ಮಧ್ಯವರ್ತಿಗಳಿಲ್ಲದ ಕಾರಣ ನೀವು ಯಾವುದೇ ಕಮಿಷನ್ ನೀಡಬೇಕಿಲ್ಲ.

ಗಮನಿಸಬೇಕಾದ ಅಂಶವೆಂದರೆ, ಈ ಬಡ್ಡಿಯು ತೆರಿಗೆಗೆ ಒಳಪಡುತ್ತದೆ. ನಿಮ್ಮ ವಾರ್ಷಿಕ ಆದಾಯದ ಸ್ಲ್ಯಾಬ್‌ಗೆ ಅನುಗುಣವಾಗಿ ನೀವು ತೆರಿಗೆ ಪಾವತಿಸಬೇಕಾಗುತ್ತದೆ.

ಸಂದಿಗ್ಧ ಸಂದರ್ಭದಲ್ಲಿ ಹಣ ಹಿಂಪಡೆಯುವಿಕೆ: ಸರ್ಕಾರಿ ಸಾಲಪತ್ರಗಳು ದೀರ್ಘಾವಧಿಯದ್ದಾಗಿದ್ದರೂ, ಹಣದ ತುರ್ತು ಅಗತ್ಯವಿದ್ದರೆ ಇವುಗಳನ್ನು ಮಾರಾಟ ಮಾಡಲು ಅವಕಾಶವಿದೆ. ಆರ್‌ಬಿಐನ ಎನ್‌ಡಿಎಸ್-ಒಎಂ ಎಂಬ ಎಲೆಕ್ಟ್ರಾನಿಕ್ ವೇದಿಕೆ ಮೂಲಕ ನೀವು ನಿಮ್ಮ ಬಳಿಯಿರುವ ಬಾಂಡ್‌ಗಳನ್ನು ಇತರ ಹೂಡಿಕೆದಾರರಿಗೆ ಮಾರಾಟ ಮಾಡಬಹುದು. ಆದರೂ, ಫ್ಲೋಟಿಂಗ್ ರೇಟ್ ಬಾಂಡ್‌ಗಳಲ್ಲಿ 7 ವರ್ಷಗಳ ಲಾಕ್-ಇನ್ ಅವಧಿ ಇರುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು (ಹಿರಿಯ ನಾಗರಿಕರಿಗೆ ಇದರಲ್ಲಿ ವಿನಾಯಿತಿ ಇದೆ).

ಒಂದಷ್ಟು ಸಲಹೆ: ಷೇರು ಮಾರುಕಟ್ಟೆಯ ಅಪಾಯ ಬೇಡ ಎನ್ನುವವರಿಗೆ ಮತ್ತು ನಿಶ್ಚಿತ ಠೇವಣಿಗಳಿಗಿಂತ ಹೆಚ್ಚಿನ ಸುರಕ್ಷತೆ ಬಯಸುವವರಿಗೆ ಆರ್‌ಬಿಐ ರಿಟೇಲ್ ಬಾಂಡ್‌ಗಳು ವರದಾನ. ಒಂದೇ ಕಡೆ ದೊಡ್ಡ ಮೊತ್ತವನ್ನು ಹೂಡುವ ಬದಲು, ಸ್ವಲ್ಪ ಸ್ವಲ್ಪ ಹಣವನ್ನು ಬೇರೆ ಬೇರೆ ಅವಧಿಯ ಬಾಂಡ್‌ಗಳಲ್ಲಿ ಹೂಡಿ (ಉದಾಹರಣೆಗೆ: ಕೆಲವು ಹಣವನ್ನು 1 ವರ್ಷದ ಟಿ-ಬಿಲ್‌ನಲ್ಲಿ, ಇನ್ನುಳಿದ ಹಣವನ್ನು 7 ವರ್ಷದ ಎಫ್‌ಆರ್‌ಎಸ್‌ಬಿಯಲ್ಲಿ). ಇದರಿಂದ ನಿಮಗೆ ತುರ್ತು ಸಂದರ್ಭದಲ್ಲಿ ಹಣದ ಲಭ್ಯತೆಯೂ ಇರುತ್ತದೆ ಮತ್ತು ಲಾಭವೂ ಹೆಚ್ಚಾಗಿರುತ್ತದೆ. ನೆನಪಿಡಿ, ಯಾವುದೇ ಹೂಡಿಕೆ ಮಾಡುವ ಮುನ್ನ ಅಧ್ಯಯನ ಮಾಡಿ. ಸರಿಯಾದ ಮಾಹಿತಿ ಇಲ್ಲದಿದ್ದರೆ ಸೆಬಿ ನೋಂದಾಯಿತ ಹಣಕಾಸು ತಜ್ಞರ ನೆರವು ಪಡೆಯಿರಿ.

> **ಖಾತೆ ತೆರೆಯುವ ಸರಳ ವಿಧಾನ**
>
> ಹೂಡಿಕೆ ಆರಂಭಿಸಲು ನೀವು https://rbiretaildirect.org.in/#/ ಪೋರ್ಟಲ್‌ನಲ್ಲಿ ರಿಟೇಲ್ ಡೈರೆಕ್ಟ್ ಗಿಲ್ಟ್ (ಆರ್‌ಡಿಜಿ) ಖಾತೆಯನ್ನು ತೆರೆಯಬೇಕು. ಇದಕ್ಕೆ ನಿಮ್ಮ ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್ ಮತ್ತು ಸಕ್ರಿಯವಾಗಿರುವ ಬ್ಯಾಂಕ್ ಖಾತೆಯ ವಿವರಗಳು ಅಗತ್ಯ. ನೋಂದಣಿ ಪ್ರಕ್ರಿಯೆಯ ನಂತರ ಆನ್‌ಲೈನ್ ಮೂಲಕವೇ ವಿಡಿಯೊ ಕೆವೈಸಿ ಪೂರ್ಣಗೊಳಿಸಬೇಕಾಗುತ್ತದೆ. ಅಧಿಕಾರಿಗಳು ವಿಡಿಯೊ ಕರೆ ಮೂಲಕ ನಿಮ್ಮ ದಾಖಲೆಗಳನ್ನು ಪರಿಶೀಲಿಸಿದ ನಂತರ ನಿಮ್ಮ ಖಾತೆ ಸಕ್ರಿಯಗೊಳ್ಳುತ್ತದೆ. ಒಮ್ಮೆ ಖಾತೆ ತೆರೆದರೆ, ನೀವು ಹರಾಜು ಪ್ರಕ್ರಿಯೆಗಳಲ್ಲಿ ಭಾಗವಹಿಸಬಹುದು ಅಥವಾ ಮೊಬೈಲ್ ಆ್ಯಪ್ ಮೂಲಕ ಸೆಕೆಂಡರಿ ಮಾರ್ಕೆಟ್‌ನಲ್ಲಿ ಬಾಂಡ್‌ಗಳನ್ನು ಖರೀದಿಸಬಹುದು.

WAN-IFRA | COLOR QUALITY CLUB 2026-28 | V1

ಗ್ರಾಹಕರ ದತ್ತಾಂಶವನ್ನು ಸೈಬರ್ ದಾಳಿಯಿಂದ ರಕ್ಷಿಸಲು ಈ ಕ್ರಮ

ಹೆಚ್ಚಲಿದೆ ಬ್ಯಾಂಕ್‌ಗಳ ಐ.ಟಿ ಸೇವಾ ವೆಚ್ಚ



ನವದೆಹಲಿ (ಪಿಟಿಐ): ಗ್ರಾಹಕರ ದತ್ತಾಂಶವನ್ನು ರಕ್ಷಿಸಲು, ಹಣಕಾಸಿನ ಸಂಪನ್ಮೂಲವನ್ನು ಕಾಪಾಡಿಕೊಳ್ಳಲು ಐ.ಟಿ. ಸೇವೆಗಳ ಮೇಲಿನ ವೆಚ್ಚವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಮುಂದಾಗಿವೆ.

ಆ್ಯಂಥ್ರೋಪಿಕ್ ಕಂಪನಿಯ ಮೈಥೋಸ್ ಎ.ಐ. ಪರಿಕರವು ಹಣಕಾಸಿನ ದತ್ತಾಂಶದ ಭದ್ರತೆಗೆ ಸವಾಲಾಗಬಹುದು ಎಂಬ ಭೀತಿ ವ್ಯಕ್ತವಾಗಿದೆ. ಬ್ಯಾಂಕಿಂಗ್ ಸಂಸ್ಥೆಗಳ ಸೈಬರ್ ಭದ್ರತಾ ವ್ಯವಸ್ಥೆಯಲ್ಲಿನ ದೌರ್ಬಲ್ಯಗಳನ್ನು ಗುರುತಿಸುವ ಸಾಮರ್ಥ್ಯವು ಈ ಪರಿಕರಕ್ಕೆ ಇದೆ, ಅದನ್ನು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅಡ್ಡಿ ಸೃಷ್ಟಿಸುವ ಕೆಲಸಕ್ಕೆ ಬಳಸಬಹುದು ಎಂಬ ಆತಂಕ ಇದೆ. ಇದು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಐ.ಟಿ ಸೇವೆಗಳ ಮೇಲಿನ ವೆಚ್ಚ ಹೆಚ್ಚು ಮಾಡುವ ತೀರ್ಮಾನಕ್ಕೆ ಬರಲು ಕಾರಣವಾಗಿದೆ.

ಹೊಸ ಸವಾಲಿನ ಕಾರಣದಿಂದಾಗಿ ಬ್ಯಾಂಕ್‌ಗಳು ತಾವು ಸೈಬರ್ ದಾಳಿಗೆ ತುತ್ತಾಗಬಹುದಾದ ಅಪಾಯವನ್ನು ಕಡಿಮೆ ಮಾಡಿಕೊಳ್ಳಲು ಐ.ಟಿ ಸೇವೆಗಳ ಮೇಲಿನ ಹೂಡಿಕೆಯನ್ನು ಹೆಚ್ಚು ಮಾಡಬೇಕಾಗುತ್ತದೆ ಎಂದು ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್‌ನ ಎಂ.ಡಿ ಹಾಗೂ ಸಿಇಒ ಸ್ವರೂಪ್ ಕುಮಾರ್ ಸಹಾ ಹೇಳಿದ್ದಾರೆ.

ಹೊಸ ತಂತ್ರಜ್ಞಾನವು ಒಡ್ಡಿರುವ ಸವಾಲನ್ನು ಎದುರಿಸುವ ಉದ್ದೇಶದಿಂದ ತಮ್ಮ ಬ್ಯಾಂಕ್ ಐ.ಟಿ ವೆಚ್ಚಗಳನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿ ಜಾಸ್ತಿ ಮಾಡಲಿದೆ ಎಂದು ಸಹಾ ತಿಳಿಸಿದ್ದಾರೆ.

ಬ್ಯಾಂಕ್‌ಗಳ ಕಂಪ್ಯೂಟರ್ ವ್ಯವಸ್ಥೆಯಲ್ಲಿನ ದೌರ್ಬಲ್ಯವನ್ನು ಗುರುತಿಸಿ, ಅವುಗಳ ಮೇಲೆ ಸೈಬರ್ ದಾಳಿ ನಡೆಸುವ ಸಾಮರ್ಥ್ಯವನ್ನು ಮೈಥೋಸ್ ಪ್ರದರ್ಶಿಸಿದ ನಂತರದಲ್ಲಿ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮುನ್ನೆಚ್ಚರಿಕೆಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಬ್ಯಾಂಕ್‌ಗಳಿಗೆ ಒತ್ತಾಯಿಸಿದ್ದರು. ಈ ಹಿನ್ನೆಲೆಯಲ್ಲಿ ಬ್ಯಾಂಕ್‌ಗಳ ಮುಖ್ಯಸ್ಥರ ಮಾತುಗಳು ಮಹತ್ವ ಪಡೆಯುತ್ತವೆ.

ಇಂತಹ ಸವಾಲುಗಳನ್ನು ಎದುರಿಸಲು ಕೇಂದ್ರ ಸರ್ಕಾರವು ಎಸ್‌ಬಿಐ ಅಧ್ಯಕ್ಷ ಸಿ.ಎಸ್. ಸೆಟ್ಟಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿದೆ. ಮೈಥೋಸ್‌ನಿಂದಾಗಿ ಎದುರಾಗಬಹುದಾದ ಸವಾಲುಗಳನ್ನು ಗುರುತಿಸಿ, ಅವುಗಳಿಗೆ ಪರಿಹಾರ ತಿಳಿಸುವ ಹೊಣೆಯನ್ನು ಈ ಸಮಿತಿಗೆ ವಹಿಸಲಾಗಿದೆ.

ಮೈಥೋಸ್ ಪರಿಕರವು ವಿವಿಧೆಡೆ ನೀತಿ ನಿರೂಪಕರ ಪಾಲಿಗೆ ಎಚ್ಚರಿಕೆಯ ಕರೆಗಂಟೆಯಾಗಿ ಕಂಡಿದೆ. ಈ ಪರಿಕರವು ಬ್ಯಾಂಕಿಂಗ್ ವ್ಯವಸ್ಥೆಗೆ ಹಾಗೂ ಅದು ಬಳಕೆ ಮಾಡುತ್ತಿರುವ ಹಳೆಯ ತಂತ್ರಜ್ಞಾನ ವ್ಯವಸ್ಥೆಗೆ ಸವಾಲು ಎಂದು ತಜ್ಞರು ಭಾವಿಸಿದ್ದಾರೆ.

ಆ್ಯಂಥ್ರೋಪಿಕ್ ಕಂಪನಿಯ ಕ್ಲಾಡ್ ಮೈಥೋಸ್ ಪರಿಕರವನ್ನು ಪ್ರಾಯೋಗಿಕ ಬಳಕೆಗಾಗಿ ಏಪ್ರಿಲ್ 7ರಂದು ಬಿಡುಗಡೆ ಮಾಡಲಾಗಿದೆ. ಈ ಪರಿಕರವು ಮನುಷ್ಯರಿಗಿಂತ ಹೆಚ್ಚಿನ ಸಾಮರ್ಥ್ಯದ ಹ್ಯಾಕಿಂಗ್ ಪರಿಣತಿ ಹೊಂದಿದೆ ಎಂಬುದು ಪರೀಕ್ಷೆಗಳ ಸಂದರ್ಭದಲ್ಲಿ ಗೊತ್ತಾಗಿದೆ.

> **ಬ್ಯಾಂಕ್‌ನ ಐ.ಟಿ ಸೇವೆಗಳ ವೆಚ್ಚ ಜಾಸ್ತಿ ಮಾಡಲಾಗುತ್ತದೆ, ಹೆಚ್ಚಳದಲ್ಲಿನ ಬಹುದೊಡ್ಡ ಪಾಲು ಸೈಬರ್ ಭದ್ರತೆಗೆ ವಿನಿಯೋಗ ಆಗುತ್ತದೆ**
> **ಅಶ್ವನಿ ಕುಮಾರ್,**
> ಯುಕೊ ಬ್ಯಾಂಕ್‌ನ ಎಂ.ಡಿ ಹಾಗೂ ಸಿಇಒ

ಗಡಿ ವಿದ್ಯಾರ್ಥಿಗಳಿಗೆ ವಿದ್ಯೆ ಗಗನ ಕುಸುಮ

ಒಂದನೇ ಪುಟದಿಂದ...

ಈ ಪ್ರದೇಶಗಳು ಭೌಗೋಳಿಕವಾಗಿ ಬೇರೆ ರಾಜ್ಯದಲ್ಲಿದ್ದರೂ, ಸಾಂಸ್ಕೃತಿಕ, ಭಾವನಾತ್ಮಕವಾಗಿ ಕರ್ನಾಟಕದೊಂದಿಗೆ ಅವಿನಾಭಾವ ಸಂಬಂಧ ಹೊಂದಿವೆ. ಪ್ರಸ್ತುತ ಈ ಭಾಗಗಳಲ್ಲಿ 65ಕ್ಕೂ ಹೆಚ್ಚು ಕನ್ನಡ ಮಾಧ್ಯಮ ಶಾಲೆಗಳಿವೆ. ಇನ್ನು ತೆಲಂಗಾಣದ ಮೆದಕ್, ಮೆಹಬೂಬ್‌ನಗರ, ಹೈದರಾಬಾದ್ ನಗರಗಳಲ್ಲಿಯೂ ಕನ್ನಡ ಮಾಧ್ಯಮ ಶಾಲೆಗಳಿವೆ. ಸುಮಾರು 12,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲೇ ವ್ಯಾಸಂಗ ಮಾಡುತ್ತಿದ್ದಾರೆ.

'10ನೇ ತರಗತಿಯ ನಂತರ ವ್ಯಾಸಂಗಕ್ಕಾಗಿ ಕರ್ನಾಟಕಕ್ಕೆ ಬರುವ ನಮ್ಮ ಮಕ್ಕಳಿಗೆ ಕಾಲೇಜು ಮತ್ತು ವೃತ್ತಿಶಿಕ್ಷಣ ಕೋರ್ಸ್ ಹಂತದಲ್ಲಿ ಪ್ರವೇಶ ನಿರಾಕರಿಸಲಾಗುತ್ತಿದೆ. ಕನ್ನಡ ಮಾಧ್ಯಮದಲ್ಲಿ ಓದಿದ ಮಕ್ಕಳು ಭರವಸೆ ಕಳೆದುಕೊಳ್ಳುತ್ತಿದ್ದಾರೆ' ಎಂದು ಆಂಧ್ರ ಪ್ರದೇಶದ ಡಿ. ಹಿರೇಹಾಳ್ ಮಂಡಲದ ಕನ್ನಡ ಶಿಕ್ಷಕ ಹಿರೇಹಾಳಪ್ಪ ಬೇಸರ ವ್ಯಕ್ತಪಡಿಸಿದ್ದಾರೆ.

'ಖಾಸಗಿ ಕಾಲೇಜುಗಳಲ್ಲಿ ಈ ವಿದ್ಯಾರ್ಥಿಗಳಿಂದ ಅಧಿಕ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಸರ್ಕಾರಿ ವಸತಿ ನಿಲಯಗಳಲ್ಲಿ ಪ್ರವೇಶ ಸಿಗುತ್ತಿಲ್ಲ. ಮಕ್ಕಳು ಕನ್ನಡದಿಂದ ವಿಮುಖರಾಗುತ್ತಿದ್ದಾರೆ. ಪರಿಣಾಮವಾಗಿ, ಕಳೆದ ವರ್ಷ ಆದೋನಿಯಲ್ಲಿ 3 ಕನ್ನಡ ಶಾಲೆಗಳು ಮುಚ್ಚಿವೆ. ಇದು ಆಂಧ್ರದಲ್ಲಿ ಕನ್ನಡದ ಅಸ್ತಿತ್ವಕ್ಕೆ ಸಂಚಕಾರ ತಂದಿದೆ' ಎಂದು ತಿಳಿಸಿದರು.

> **ಗಡಿ ಭಾಗದ ಕನ್ನಡ ಸಂಘ, ಕರ್ನಾಟಕ ಭಾಗದ ಕಾಲೇಜುಗಳ ಸಭೆಯನ್ನು ಶೀಘ್ರ ಕರೆಯಲಾಗುವುದು. ಹೊರನಾಡ ಕನ್ನಡಿಗರ ವಿಚಾರದಲ್ಲಿ ತಾರತಮ್ಯ ಆಗದಂತೆ ನೋಡಿಕೊಳ್ಳಲಾಗುವುದು**
> **ನಾಗೇಂದ್ರ ಪ್ರಸಾದ್ ಕೆ.**
> ಜಿಲ್ಲಾಧಿಕಾರಿ, ಬಳ್ಳಾರಿ

> **ಆಂಧ್ರ ಪ್ರದೇಶದಲ್ಲಿ ಕಲಿತ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕೆ ಕರ್ನಾಟಕ ಸರ್ಕಾರ ನೆರವಾಗಬೇಕು. ಹೊರನಾಡಿನಲ್ಲಿ ಕನ್ನಡದ ಬಲವರ್ಧನೆ ಮಾಡಬೇಕು**
> **ಗಿರಿಜಾಪತಿ,**
> ಆಂಧ್ರ ಪ್ರದೇಶ ಕನ್ನಡ ಶಿಕ್ಷಕ ಸಂಘದ ಅಧ್ಯಕ್ಷ

ಮಣಿಪುರ ಸಂಘರ್ಷಕ್ಕೆ 3 ವರ್ಷ

ಇಂಫಾಲ್/ ಚುರಾಚಾಂದಪುರ (ಪಿಟಿಐ): ಮಣಿಪುರದಲ್ಲಿ ಕುಕಿ ಮತ್ತು ಮೈತೇಯಿ ಸಮುದಾಯಗಳ ನಡುವಿನ ಜನಾಂಗೀಯ ಸಂಘರ್ಷಕ್ಕೆ ಭಾನುವಾರ ಮೂರು ವರ್ಷವಾಗಿದೆ. ಇದರ ಅಂಗವಾಗಿ ಕುಕಿ ಮತ್ತು ಮೈತೇಯಿ ಸಮುದಾಯಗಳು ರ‍್ಯಾಲಿ, ಸಭೆ ಮತ್ತು ಬಂದ್ ಆಚರಿಸಿದವು.

ಜನಗಣತಿಗೆ ಮುನ್ನ ಎನ್‌ಆರ್‌ಸಿ ಅನುಷ್ಠಾನ ಮತ್ತು ಮಣಿಪುರದ ಆಡಳಿತ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ರಕ್ಷಿಸುವಂತೆ ಒತ್ತಾಯಿಸಿ ಮೈತೇಯಿ ಸಮುದಾಯ ಇಂಫಾಲ್‌ನ ಅನೇಕ ಜಿಲ್ಲೆಗಳಲ್ಲಿ ಭಾನುವಾರ ಮೆರವಣಿಗೆ ಆಯೋಜಿಸಿತ್ತು. ಕುಕಿ ಝೋ ಸಂಘಟನೆಗಳು ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಬಂದ್ ಮತ್ತು ಚುರಾಚಾಂದಪುರ ಜಿಲ್ಲೆಯಲ್ಲಿ ಸಭೆಗಳನ್ನು ನಡೆಸಿದವು. 2023ರ ಮೇ 3ರಂದು ಕುಕಿ ಮತ್ತು ಮೈತೇಯಿ ಸಮುದಾಯಗಳ ನಡುವೆ ಸಂಘರ್ಷ ಆರಂಭವಾಯಿತು. ಇದರಲ್ಲಿ 260 ಮಂದಿ ಮೃತಪಟ್ಟಿದ್ದು, ಸಾವಿರಾರು ನಿವಾಸಿಗಳು ಸ್ಥಳಾಂತರಗೊಂಡಿದ್ದಾರೆ. ಮಣಿಪುರದಲ್ಲಿ ಒಂದು ವರ್ಷ ರಾಷ್ಟ್ರಪತಿ ಆಳ್ವಿಕೆ ಹೇರಲಾಗಿತ್ತು.

ಈಜು...

ಪಿಟಿಐ ಚಿತ್ರ



ಉತ್ತರ ಪ್ರದೇಶದ ಕಾನ್ಪುರದಲ್ಲಿ ಮಕ್ಕಳು ಬಿಸಿಲಿನ ತಾಪದಿಂದ ರಕ್ಷಿಸಿಕೊಳ್ಳಲು ಕಾಲುವೆಯಲ್ಲಿ ಈಜಾಡಿದರು

ದೋಣಿ ದುರಂತ ಮೃತರ ಸಂಖ್ಯೆ 13ಕ್ಕೆ

ಜಬಲ್ಪುರ್ (ಪಿಟಿಐ): ಮಧ್ಯಪ್ರದೇಶದ ಜಬಲ್ಪುರ್ ದೋಣಿ ದುರಂತದಲ್ಲಿ ಸಾವಿಗೀಡಾದವರ ಸಂಖ್ಯೆ 13ಕ್ಕೆ ಏರಿದೆ.

5 ವರ್ಷದ ಬಾಲಕ ಮತ್ತು ಆತನ ದೊಡ್ಡಪ್ಪನ ಮೃತದೇಹ ಭಾನುವಾರ ಪತ್ತೆಯಾಗಿದೆ.

ಇದರೊಂದಿಗೆ ದುರಂತದಲ್ಲಿ ನಾಪತ್ತೆಯಾಗಿದ್ದ 13 ಮಂದಿಯ ಮೃತದೇಹವೂ ಪತ್ತೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ದುರಂತಕ್ಕೀಡಾದ ದೋಣಿಯಲ್ಲಿ 41 ಮಂದಿ ಪ್ರಯಾಣಿಕರಿದ್ದರು ಈ ಪೈಕಿ 28 ಮಂದಿಯನ್ನು ರಕ್ಷಿಸಲಾಗಿದೆ.

'ಖಾಲಿಸ್ತಾನ ಉಗ್ರರು ರಾಷ್ಟ್ರೀಯ ಭದ್ರತೆಗೆ ಬೆದರಿಕೆ'

ಒಟ್ಟಾವಾ, ಕೆನಡಾ (ಪಿಟಿಐ): 'ಖಾಲಿಸ್ತಾನದ ಉಗ್ರರು ದೇಶದ ಭದ್ರತೆಗೆ ಬೆದರಿಕೆಯಾಗಿದ್ದಾರೆ' ಎಂದು ಕೆನಡಾದ ಗುಪ್ತಚರ ಸಂಸ್ಥೆಯು ಘೋಷಣೆ ಮಾಡಿದೆ. ಹಿಂಸಾತ್ಮಕ ಉಗ್ರಗಾಮಿ ಕಾರ್ಯಸೂಚಿಯನ್ನು ಜಾರಿಗೊಳಿಸಲು ಗುಂಪು ತನ್ನ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದೆ.

'ಕೆನಡಾದ ಖಾಲಿಸ್ತಾನಿ ಉಗ್ರಗಾಮಿ ಗುಂಪು ನಿರಂತರವಾಗಿ ಹಿಂಸಾಚಾರದಲ್ಲಿ ತೊಡಗಿದ್ದು, ಕೆನಡಾದ ಭದ್ರತೆ ಹಾಗೂ ಹಿತಾಸಕ್ತಿಗಳಿಗೆ ನಿರಂತರ ಬೆದರಿಕೆಯೊಡ್ಡುತ್ತಿದೆ' ಎಂದು ಕೆನಡಾ ಭದ್ರತಾ ಗುಪ್ತಚರ ಸೇವೆಯು ಬಿಡುಗಡೆಗೊಳಿಸಿದ 2025ರ ಸಾರ್ವಜನಿಕ ವರದಿಯಲ್ಲಿ ತಿಳಿಸಿದೆ.

'ಸಂಘಟನೆಯ ಕೆಲವು ಸದಸ್ಯರು ದೇಶದ ನಾಗರಿಕರೊಂದಿಗೆ ಉತ್ತಮ ನಂಟು ಹೊಂದಿದ್ದಾರೆ. ತಮ್ಮ ಹಿಂಸಾಚಾರ ಕಾರ್ಯಸೂಚಿಯನ್ನು ಜಾರಿಗೊಳಿಸಲು ದೇಶದ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದ್ದು, ದೇಣಿಗೆ ಸಂಗ್ರಹಿಸಿ, ಹಿಂಸಾಚಾರದ ಕೃತ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ' ಎಂದು ವರದಿಯಲ್ಲಿ ತಿಳಿಸಲಾಗಿದೆ.

ಕೆನಡಾ ಸರ್ಕಾರವು ಶುಕ್ರವಾರ ತನ್ನ ವೆಬ್‌ಸೈಟ್‌ನಲ್ಲಿ ಈ ವರದಿಯನ್ನು ಪ್ರಕಟಿಸಿದೆ.

ಉತ್ಪಾದನಾ ಕೋಟಾ ಹೆಚ್ಚಿಸಿದ 'ಒಪೆಕ್+'



ವಿಯೆನ್ನಾ (ಎಎಫ್‌ಪಿ): ಸೌದಿ ಅರೇಬಿಯಾ, ರಷ್ಯಾ ಮತ್ತು 'ಒಪೆಕ್ + ' ಸಂಘಟನೆಯ ಇತರ ಐದು ದೇಶಗಳು ಭಾನುವಾರ ತಮ್ಮ ಕಚ್ಚಾ ತೈಲ ಉತ್ಪಾದನೆ ಕೋಟಾವನ್ನು ಜಾಸ್ತಿ ಮಾಡಿವೆ.

ಯುಎಇ ದೇಶವು ಸಂಘಟನೆಯಿಂದ ದಿಢೀರ್ ಹೊರನಡೆದ ನಂತರ ಸಂಘಟನೆಯಲ್ಲಿ ನಿರಂತರತೆಯನ್ನು ಖಾತರಿಪಡಿಸುವ ಉದ್ದೇಶದಿಂದ ಅವು ಹೀಗೆ ಮಾಡಿವೆ ಎನ್ನಲಾಗಿದೆ.

ಕಚ್ಚಾ ತೈಲವನ್ನು ಉತ್ಪಾದಿಸುವ ಏಳು ಪ್ರಮುಖ ದೇಶಗಳು ಜೂನ್‌ನಲ್ಲಿ ಪ್ರತಿದಿನದ ಉತ್ಪಾದನೆಯನ್ನು 1.88 ಲಕ್ಷ ಬ್ಯಾರಲ್‌ನಷ್ಟು ಹೆಚ್ಚು ಮಾಡಲಿವೆ. ಕಚ್ಚಾ ತೈಲದ ಮಾರುಕಟ್ಟೆಯಲ್ಲಿ ಸ್ಥಿರತೆಯನ್ನು ತರುವ ಉದ್ದೇಶದಿಂದ ಹೀಗೆ ಮಾಡಲಾಗುತ್ತದೆ ಎಂದು 'ಒಪೆಕ್ + 'ನ ಪ್ರಕಟಣೆ ತಿಳಿಸಿದೆ. ಆದರೆ ಹೇಳಿಕೆಯಲ್ಲಿ ಯುಎಇ ಬಗ್ಗೆ ಯಾವುದೇ ಉಲ್ಲೇಖ ಇಲ್ಲ.

ಯುಎಇ ಬಗ್ಗೆ ಯಾವುದೇ ಉಲ್ಲೇಖ ಇಲ್ಲದಿರುವುದು ಸಂಬಂಧಗಳು ಬಿಗುವಿನಿಂದ ಕೂಡಿರುವುದರ ಸೂಚನೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಅಮೆರಿಕಕ್ಕೆ ಇರಾನ್ ಇತ್ತೀಚೆಗೆ ಸಲ್ಲಿಸಿದ್ದ ಪ್ರಸ್ತಾವದಲ್ಲಿ ಉಲ್ಲೇಖ

ಯುದ್ಧ ಅಂತ್ಯಗೊಳಿಸಲು 30 ದಿನ ಗಡುವು

ದುಬೈ/ವಾಷಿಂಗ್ಟನ್ (ಎಪಿ/ಪಿಟಿಐ): ಅಮೆರಿಕಕ್ಕೆ ಇರಾನ್ ಇತ್ತೀಚೆಗೆ ಸಲ್ಲಿಸಿರುವ ಪ್ರಸ್ತಾವವು, ಉಭಯ ದೇಶಗಳ ನಡುವಿನ ಕದನ ವಿರಾಮವನ್ನು ವಿಸ್ತರಿಸುವ ಬದಲು ಯುದ್ಧವನ್ನು ಸಂಪೂರ್ಣವಾಗಿ ಕೊನೆಗೊಳಿಸುವ ಹಾಗೂ ಈ ಸಮಸ್ಯೆಗಳನ್ನು 30 ದಿನಗಳಲ್ಲಿ ಪರಿಹರಿಸುವ ಗುರಿಯನ್ನು ಹೊಂದಿದೆ.

ಅಮೆರಿಕದ ಒಂಬತ್ತು ಅಂಶಗಳ ಯೋಜನೆಗೆ ಪ್ರತಿಯಾಗಿ ಸಲ್ಲಿಸಿರುವ 14 ಅಂಶಗಳ ಪ್ರಸ್ತಾವದಲ್ಲಿ ಕದನ ವಿರಾಮವನ್ನು ವಿಸ್ತರಿಸುವ ಬದಲು ಯುದ್ಧವನ್ನೇ ನಿಲ್ಲಿಸಬೇಕು. ಇರಾನ್ ಮೇಲಿನ ಆರ್ಥಿಕ ನಿರ್ಬಂಧಗಳನ್ನು ಅಮೆರಿಕ ಹಿಂಪಡೆಯಬೇಕು. ಬಂದರುಗಳ ಮೇಲಿನ ನಿರ್ಬಂಧವನ್ನು ತೆರವುಗೊಳಿಸಬೇಕು. ಈ ಪ್ರದೇಶದಿಂದ ಅಮೆರಿಕ ತನ್ನ ಸೇನಾ ಪಡೆಗಳನ್ನು ಹಿಂತೆಗೆದುಕೊಳ್ಳಬೇಕು. ಲೆಬನಾನ್‌ನಲ್ಲಿ ಇಸ್ರೇಲ್ ನಡೆಸುತ್ತಿರುವ ಕಾರ್ಯಾಚರಣೆ ಸೇರಿದಂತೆ ಎಲ್ಲ ದಾಳಿಗಳನ್ನು ನಿಲ್ಲಿಸಬೇಕು ಎಂಬ ಅಂಶಗಳನ್ನು ಇರಾನ್ ಪ್ರಸ್ತಾಪಿಸಿದೆ ಎಂದು ಇರಾನ್‌ನ 'ನೂರ್' ನ್ಯೂಸ್ ಏಜೆನ್ಸಿ ಹಾಗೂ ಅಮೆರಿಕದ 'ಆಕ್ಸಿಯೋಸ್' ಸುದ್ದಿ ಸಂಸ್ಥೆ ವರದಿ ಮಾಡಿವೆ.

'ಅಮೆರಿಕದ ದಿಗ್ಬಂಧನ ವಿಫಲ': 'ಹೊರ್ಮುಜ್ ಜಲಸಂಧಿಯ ವಿಚಾರದಲ್ಲಿ ಹಿಂದೆ ಸರಿಯುವುದಿಲ್ಲ. ಅದು ಯುದ್ಧಪೂರ್ವ ಪರಿಸ್ಥಿತಿಗೆ ಮರಳುವುದಿಲ್ಲ' ಎಂದು ಇರಾನ್ ಸಂಸತ್‌ನ ಉಪ ಸಭಾಧ್ಯಕ್ಷ ಅಲಿ ನಿಕ್ಜಾದ್ ತಿಳಿಸಿದ್ದಾರೆ.

ಹೊರ್ಮುಜ್ ಜಲಸಂಧಿಯ ಅತ್ಯಂತ ಕಿರಿದಾದ ಭಾಗಕ್ಕೆ ಸಮೀಪವಿರುವ ಲಾರಕ್ ದ್ವೀಪದ ಬಂದರಿಗೆ ಭಾನುವಾರ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

'ಹೊರ್ಮುಜ್ ಜಲಸಂಧಿಯು ಇರಾನ್‌ಗೆ ಸೇರಿದೆ. ಯುದ್ಧದ ಸಮಯದಲ್ಲಿ ಹಾನಿಗೊಳಗಾದ ಆಸ್ತಿಗಳಿಗೆ ಪರಿಹಾರ ಒದಗಿಸಲು ದೇಶವು ಶ್ರಮಿಸುತ್ತಿದೆ. ಟ್ರಂಪ್ ಅವರ ದಿಗ್ಬಂಧನವು ವಿಫಲವಾಗಲಿದೆ' ಎಂದು ಹೇಳಿದ್ದಾರೆ. 'ಅಮೆರಿಕ ಅಥವಾ ಇಸ್ರೇಲ್‌ಗೆ ಸಂಬಂಧವಿಲ್ಲದ ಯಾವುದೇ ಹಡಗು ಶುಲ್ಕ ಪಾವತಿಸಿದ ನಂತರವೇ ಹಾದುಹೋಗಲು ಅವಕಾಶ ನೀಡಲಾಗುತ್ತದೆ' ಎಂದು ತಿಳಿಸಿದ್ದಾರೆ.

ಅರಾಘ್ಚಿ– ಬುಸೈದಿ ಚರ್ಚೆ: ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಒಮಾನ್ ವಿದೇಶಾಂಗ ಸಚಿವ ಬದ್ರ್ ಅಲ್ ಬುಸೈದಿ ಅವರೊಂದಿಗೆ ಭಾನುವಾರ ಮಾತನಾಡಿದ್ದಾರೆ.

ಯುದ್ಧದ ಆರಂಭಕ್ಕೂ ಮುನ್ನ ಅಮೆರಿಕ ಮತ್ತು ಇರಾನ್ ನಡುವೆ ನಡೆದ ಹಿಂದಿನ ಸುತ್ತಿನ ಮಾತುಕತೆಗಳ ಉಸ್ತುವಾರಿಯನ್ನು ಬುಸೈದಿ ವಹಿಸಿದ್ದರು.

ಹದಗೆಡುತ್ತಿದೆ ನರ್ಗಿಸ್ ಆರೋಗ್ಯ: 'ಇರಾನ್‌ನ ಮಾನವ ಹಕ್ಕು ಹೋರಾಟಗಾರ್ತಿ, ನೊಬೆಲ್ ಶಾಂತಿ ಪುರಸ್ಕಾರ ವಿಜೇತೆ ನರ್ಗಿಸ್ ಮೊಹಮ್ಮದಿ ಅವರ ಆರೋಗ್ಯ ತೀವ್ರವಾಗಿ ಹದಗೆಡುತ್ತಿದೆ.

'ಚಿಕಿತ್ಸೆ ಕೊಡಿಸಲು ನರ್ಗಿಸ್ ಅವರನ್ನು ರಾಜಧಾನಿ ಟೆಹರಾನ್‌ಗೆ ಕರೆದೊಯ್ಯಲು ಅನುಮತಿ ನೀಡಬೇಕೆಂದು ಮನವಿ ಮಾಡುತ್ತಿದ್ದರೂ ಇರಾನ್ ಗುಪ್ತಚರ ಸಚಿವಾಲಯ ಒಪ್ಪುತ್ತಿಲ್ಲ' ಎಂದು ಕುಟುಂಬಸ್ಥರು ಬೇಸರ ವ್ಯಕ್ತಪಡಿಸಿದ್ದಾರೆ.

ಬಹು– ಹಂತದ ಪ್ರಸ್ತಾವ ಸಲ್ಲಿಸಿದ ಇರಾನ್

ಒಂದನೇ ಪುಟದಿಂದ...

ಆದರೆ, ಇದಕ್ಕೆ ಪ್ರತಿಯಾಗಿ ಅಮೆರಿಕ ತನ್ನ ಸೇನಾ ನಿಯೋಜನೆಯನ್ನು ಕಡಿಮೆ ಮಾಡಬೇಕು. ಇರಾನ್ ತೈಲ ರಫ್ತಿನ ಮೇಲಿನ ನಿರ್ಬಂಧವನ್ನು ರದ್ದುಪಡಿಸಬೇಕು ಎಂಬ ಷರತ್ತುಗಳನ್ನು ವಿಧಿಸಲಾಗಿದೆ.

ಎರಡನೇ ಅಂಶವು, ಸಮುದ್ರ ಮಾರ್ಗದ ಮೂಲಕ ನಡೆಯುತ್ತಿದ್ದ ತೈಲ ಸಾಗಣೆಯ ಮರು ಸ್ಥಾಪನೆಯನ್ನು ಅಣ್ವಸ್ತ್ರ ಮಾತುಕತೆಗಳಿಂದ ಪ್ರತ್ಯೇಕಿಸುವುದನ್ನು ಪ್ರಸ್ತಾಪಿಸುತ್ತದೆ. ಅಂದರೆ, ಅಣ್ವಸ್ತ್ರ ಚಟುವಟಿಕೆಗಳ ಬಗ್ಗೆ ಯಾವುದೇ ಭರವಸೆ ನೀಡುವುದಕ್ಕೂ ಮೊದಲು ಆರ್ಥಿಕ ವ್ಯವಹಾರಗಳು ನಡೆಯಬೇಕು ಎಂದು ಇರಾನ್ ವಾದಿಸುತ್ತಿದೆ.

ಮೂರನೇ ಅಂಶವು, ಅಣ್ವಸ್ತ್ರ ತಯಾರಿಕೆ ಕುರಿತ ಷರತ್ತುಬದ್ಧ ಬದಲಾವಣೆಗಳಿಗೆ ಸಂಬಂಧಿಸಿದೆ. ಶಾಂತಿಯುತ ಪರಮಾಣು ಶಕ್ತಿಯ ಹಕ್ಕನ್ನು ಪ್ರತಿಪಾದಿಸುತ್ತಲೇ, ಯುರೇನಿಯಂ ಸಮೃದ್ಧೀಕರಣದ ಮಿತಿಗಳು ಹಾಗೂ ಸುಧಾರಿತ ಮೇಲ್ವಿಚಾರಣಾ ಕಾರ್ಯ ವಿಧಾನಗಳ ಬಗ್ಗೆ ಚರ್ಚಿಸಲು ಇರಾನ್ ಮುಕ್ತ ಮನಸ್ಸು ತೋರಿಸಿದೆ. ಆದರೆ, ಇದು ನಿರ್ಬಂಧಗಳ ಸಡಿಲಿಕೆಯನ್ನು ಖಾತರಿಪಡಿಸುವ ವಿಶಾಲ ಒಪ್ಪಂದದ ವ್ಯಾಪ್ತಿಯಲ್ಲಿ ಮಾತ್ರ ಇರಬೇಕು ಎಂದು ಇರಾನ್ ಹೇಳಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ನಿಯಮಗಳ ಅಡಿಯಲ್ಲಿ ನಾಗರಿಕ ಬಳಕೆಗಾಗಿ ಪರಮಾಣು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ತನ್ನ ಹಕ್ಕಿಗೆ ಅಧಿಕೃತ ಮಾನ್ಯತೆಯನ್ನು ಇರಾನ್ ಬಯಸುತ್ತಿದೆ ಎಂದು ಮತ್ತೊಂದು ಮೂಲ ತಿಳಿಸಿದೆ.

ಇದರ ಜೊತೆಗೆ, ಈ ವಿಷಯದ ಕುರಿತು ಆಗುವ ಯಾವುದೇ ಒಪ್ಪಂದವು ದೀರ್ಘಕಾಲ ಇರಬೇಕು. ಯಾವುದೇ ದೇಶವು ಏಕಪಕ್ಷೀಯವಾಗಿ ಆ ಒಪ್ಪಂದದಿಂದ ಹಿಂದೆ ಸರಿಯುವುದಿಲ್ಲ ಎಂಬ ಭರವಸೆ ನೀಡಬೇಕು ಎಂದು ಇರಾನ್ ಬಯಸುತ್ತಿದೆ.

> **'ಅನುಚಿತವಾಗಿ ವರ್ತಿಸಿದರೆ ಮತ್ತೆ ದಾಳಿ'**
>
> ಒಂದನೇ ಪುಟದಿಂದ...
>
> ಪಾಮ್ ಬೀಚ್‌ನಿಂದ ಮಿಯಾಮಿಗೆ ಹೋಗುವ ಮಾರ್ಗಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಇರಾನ್ ಜತೆಗೆ ಒಪ್ಪಂದಕ್ಕೆ ಬರುವ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ.
>
> 'ಇರಾನ್ ಕಳೆದ 47 ವರ್ಷಗಳಲ್ಲಿ ಮಾನವಕುಲಕ್ಕೆ ಮತ್ತು ಜಗತ್ತಿಗೆ ಮಾಡಿದ ಹಾನಿಗೆ ಇನ್ನೂ ಸರಿಯಾದ ಬೆಲೆ ತೆತ್ತಿಲ್ಲ' ಎಂದು ಹೇಳಿದ್ದಾರೆ.
>
> 'ಇರಾನ್ ತಪ್ಪಾಗಿ ವರ್ತಿಸಿದರೆ, ಏನಾದರೂ ಕೆಟ್ಟದ್ದನ್ನು ಮಾಡಿದರೆ ಖಂಡಿತವಾಗಿ ದಾಳಿ ನಡೆಸುವ ಸಾಧ್ಯತೆ ಇದೆ' ಎಂದು ಎಚ್ಚರಿಕೆ ನೀಡಿದ್ದಾರೆ.

ಮುಖ್ಯಾಂಶಗಳು

- ಉದ್ವಿಗ್ನತೆ ಕಡಿಮೆ ಮಾಡುವ ಉದ್ದೇಶ ಹೊಂದಿದ ಪ್ರಸ್ತಾವ
- ಅಮೆರಿಕದ ಸೇನಾ ಪಡೆ ಹಿಂಪಡೆಯಲು ಇರಾನ್ ಒತ್ತಾಯ
- ತೈಲ ರಫ್ತಿನ ಮೇಲಿನ ನಿರ್ಬಂಧ ರದ್ದುಪಡಿಸಲು ಆಗ್ರಹ


ಚಿತ್ರತಂಡ

‘ಎಜ್ಯುಕೇಟೆಡ್ ಬುಲ್ಸ್’ ಎಂದ ಹೊಸಬರು

ಬಹುತೇಕ ಹೊಸ ಕಲಾವಿದರಿಂದಲೇ ಕೂಡಿರುವ ‘ಎಜ್ಯುಕೇಟೆಡ್ ಬುಲ್ಸ್’ ಚಿತ್ರದ ಟ್ರೇಲರ್ ಮತ್ತು ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಚಿತ್ರಕ್ಕೆ ಜಿ.ಕೆ.ಮುದ್ದುರಾಜ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಕಳೆದ ನಾಲ್ಕು ದಶಕಗಳಿಂದ ಚಿತ್ರರಂಗದಲ್ಲಿರುವೆ. ಅಂಬರೀಷ್, ದೇವರಾಜ್, ಜಗ್ಗೇಶ್, ಶಶಿಕುಮಾರ್ ಮುಂತಾದ ನಾಯಕರಿಗೆ ಚಿತ್ರ ನಿರ್ದೇಶಿಸಿದ್ದೆ. ಇದು ನನ್ನ 41ನೇ ಚಿತ್ರ. ಸಂಪೂರ್ಣ ಹೊಸ ಕಲಾವಿದರನ್ನು ಹಾಕಿಕೊಂಡು ಈ ಚಿತ್ರ ಮಾಡಿರುವೆ. ನಿರ್ಮಾಣದ ಜವಾಬ್ದಾರಿಯನ್ನೂ ಹೊತ್ತಿರುವೆ. ಎಲ್ಲಾ ಕಲಾವಿದರು ಹೊಸಬರು ಎನಿಸದಂತೆ ನಟಿಸಿದ್ದಾರೆ. ನಾಲ್ಕು ಜನ ವಿದ್ಯಾವಂತರಿಗೆ ಸಮಾಜದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳಬೇಕೆಂಬ ಹಂಬಲ. ಇವರ ಆಸೆಯನ್ನು ಕೆಲವರು ದುರುಪಯೋಗಪಡಿಸಿಕೊಳ್ಳುತ್ತಾರೆ. ಆಗ ಅವರು ಸಂಕಷ್ಟಕ್ಕೆ ಸಿಲುಕಿಕೊಳ್ಳುತ್ತಾರೆ. ಅದರಿಂದ ಏನೆಲ್ಲ ಆಗುತ್ತದೆ ಎಂಬುದೇ ಕಥೆ. ವಿದ್ಯೆಯ ಜತೆ ಬುದ್ಧಿ ಸ್ವಲ್ಪ ಜಾಸ್ತಿಯೇ ಇರಬೇಕು ಎಂಬ ಪರಿಕಲ್ಪನೆಯಲ್ಲಿ ಮಾಡಿದ ಚಿತ್ರವಿದು. ಸೆನ್ಸಾರ್ ಮುಗಿದಿದೆ. ಶೀಘ್ರದಲ್ಲಿ ಬಿಡುಗಡೆ ದಿನಾಂಕ ಘೋಷಿಸುತ್ತೇವೆ’ ಎಂದರು ನಿರ್ದೇಶಕ.

ನೀರಜ್‌ಗೆ ಪೂರ್ವಿಕಾ ಜೋಡಿಯಾಗಿದ್ದಾರೆ. ಅಜಯ್ ಕುಮಾರ್, ತೇಜಸ್ ಕುಮಾರ್, ರಾಕೇಶ್, ಚಿದಾನಂದ್, ಭವ್ಯ ಉಳಿದ ಪಾತ್ರಗಳಲ್ಲಿ ನಟಿಸಿದ್ದಾರೆ. ಸೂರಜ್ ಜೋಯಿಸ್ ಸಂಗೀತ ನಿರ್ದೇಶನವಿದೆ.

‘ಈವರೆಗೆ 15 ಚಿತ್ರಗಳಿಗೆ ಸಂಗೀತ ನೀಡಿರುವೆ. ಈ ಚಿತ್ರದಲ್ಲಿ ಎರಡು ಹಾಡುಗಳಿವೆ. ಸಂದೇಶದ ಜತೆಗೆ ಮನರಂಜನೆ ಇರುವ ಚಿತ್ರವಿದು. ಹಿನ್ನೆಲೆ ಸಂಗೀತವನ್ನೂ ನೀಡಿರುವೆ’ ಎಂದರು ಸಂಗೀತ ನಿರ್ದೇಶಕ.

ರತಿಂದ್ ಗೌಡ ಛಾಯಾಚಿತ್ರಗ್ರಹಣ, ಸಂಜೀವರೆಡ್ಡಿ ಸಂಕಲನವಿದೆ. ಎಂ.ಪಿ.ಅರುಣ್‌ಕುಮಾರ್ ಕಥೆ, ಹರೀಶ್ ಸಂಭಾಷಣೆ, ರಾಮ್ ನಾರಾಯಣ್ ಸಾಹಿತ್ಯವಿರುವ ಚಿತ್ರ ಬೆಂಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿದೆ.

ಜೂ.4ರಂದು ‘ಪೆದ್ದಿ’ ತೆರೆಗೆ


ರಾಮ್‌ಚರಣ್

ತೆಲುಗು ನಟ ರಾಮ್‌ಚರಣ್ ಅಭಿನಯದ ಬಹು ನಿರೀಕ್ಷಿತ ಚಿತ್ರ ‘ಪೆದ್ದಿ’ ಬಿಡುಗಡೆಗೆ ಕೊನೆಗೂ ಮುಹೂರ್ತ ಕೂಡಿಬಂದಿದೆ. ಬುಚ್ಚಿ ಬಾಬು ಸನಾ ಆ್ಯಕ್ಷನ್ ಕಟ್ ಹೇಳಿರುವ ಚಿತ್ರ ಜೂನ್ 4ರಂದು ತೆರೆ ಕಾಣಲಿದೆ.

ಎರಡು ಸಲ ಚಿತ್ರದ ಬಿಡುಗಡೆ ದಿನಾಂಕವನ್ನು ಮುಂದೂಡಲಾಗಿತ್ತು. ಮೊದಲಿಗೆ ಚಿತ್ರತಂಡ ಮಾರ್ಚ್ 27ಕ್ಕೆ ಚಿತ್ರ ಬಿಡುಗಡೆ ಘೋಷಿಸಿತ್ತು. ಆ ಬಳಿಕ ಏ.30ಕ್ಕೆ ಅದನ್ನು ಬದಲಿಸಿತ್ತು, ಕೆಲವು ಭಾಗಗಳ ಮರುಚಿತ್ರೀಕರಣದಿಂದ ಚಿತ್ರ ಬಿಡುಗಡೆ ವಿಳಂಬವಾಗಿದೆ ಎನ್ನಲಾಗಿದೆ.

ಈ ಸಿನಿಮಾದಲ್ಲಿ ನಾಯಕಿಯಾಗಿ ಜಾಹ್ನವಿ ಕಪೂರ್ ನಟಿಸಿದ್ದು, ನಟ ಶಿವರಾಜ್‌ಕುಮಾರ್ ಪ್ರಮುಖ ಪಾತ್ರದಲ್ಲಿದ್ದಾರೆ. ಜಗಪತಿ ಬಾಬು, ದಿವ್ಯೇಂದು ಶರ್ಮಾ ಸೇರಿದಂತೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ.

‘ಪೆದ್ದಿ’ ಸ್ಪೋರ್ಟ್ಸ್ ಆ್ಯಕ್ಷನ್ ಡ್ರಾಮಾ ಆಗಿದ್ದು, ಎ.ಆರ್. ರೆಹಮಾನ್ ಸಂಗೀತ ನಿರ್ದೇಶನವಿದೆ. ವೃದ್ಧಿ ಸಿನಿಮಾಸ್ ಬ್ಯಾನರ್ ಬಂಡವಾಳ ಹೂಡಿದ್ದು, ಆರ್. ರತ್ನವೇಲು ಛಾಯಾಚಿತ್ರಗ್ರಹಣ, ನವೀನ್ ನೂಲಿ ಸಂಕಲನವಿದೆ.

ಬುಲ್‌ಡಾಗ್ ಚಿತ್ರೀಕರಣ ಪೂರ್ಣ


ಪೃಥ್ವಿ ಅಂಬಾರ್

ಪೃಥ್ವಿ ಅಂಬಾರ್ ಚೊಚ್ಚಲ ನಿರ್ದೇಶನದ ‘ಬುಲ್‌ಡಾಗ್’ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಪೂರ್ಣಗೊಂಡಿದೆ. ಕನ್ನಡ ಮತ್ತು ತುಳು ಭಾಷೆಗಳಲ್ಲಿ ಸಿನಿಮಾ ಸಿದ್ಧಗೊಳ್ಳುತ್ತಿದೆ.

‘ಹಲವು ಸಿನಿಮಾಗಳಲ್ಲಿ ನಟಿಸಿದ ನಂತರ ಇದೇ ಮೊದಲ ಸಲ ನಿರ್ದೇಶನಕ್ಕೆ ಕೈಹಾಕಿದ್ದೇನೆ. ದಕ್ಷಿಣ ಕನ್ನಡದ ನಾಲ್ವರು ಹುಡುಗರ ಕಥೆ. ಈ ನಾಲ್ವರು ಯಾವುದೋ ಕಾರಣಕ್ಕೆ ಬೆಂಗಳೂರಿಗೆ ಬರುತ್ತಾರೆ. ಎರಡು ತಿಂಗಳ ಅಂತರದಲ್ಲಿ ನಡೆಯುವ ಈ ಕಥೆಯಲ್ಲಿ ಬೆಂಗಳೂರಿಗೆ ಬಂದವರು ಮಾಡುವ ಎಡವಟ್ಟುಗಳಿವೆ. ಅವರು ವಾಪಸ್ ಊರಿಗೆ ಹೋಗುವವರೆಗೆ ನಡೆಯುವ ಘಟನೆಗಳೇ ಚಿತ್ರಕಥೆ. ಚಿತ್ರದ ಪಾತ್ರಗಳು ಬೆಂಗಳೂರಿನಲ್ಲಿದ್ದಾಗ ಕನ್ನಡದಲ್ಲಿ ಮತ್ತು ಊರಿನಲ್ಲಿದ್ದಾಗ ತುಳುವಿನಲ್ಲಿ ಮಾತನಾಡುತ್ತವೆ. ಹಾಗಾಗಿ ಇದನ್ನು ತುಳು ಅಥವಾ ಕನ್ನಡ ಸಿನಿಮಾ ಎಂದು ಪ್ರತ್ಯೇಕಿಸಲು ಸಾಧ್ಯವಿಲ್ಲ’ ಎಂದಿದ್ದಾರೆ ನಿರ್ದೇಶಕ.

‘ಬುಲ್‌ಡಾಗ್’ ಪಾತ್ರದಲ್ಲಿ ಪೃಥ್ವಿ ಅಂಬಾರ್ ಅವರೇ ನಟಿಸಿದ್ದಾರೆ. ಲಾಂಚು ಲಾಲ್ ಚಿತ್ರಕ್ಕೆ ಬಂಡವಾಳ ಹೂಡಿದ್ದು, ಚಿಂತುಮಪ್ಪಲ್ ಛಾಯಾಚಿತ್ರಗ್ರಹಣ, ನಿಶಾನ್ ರೈ ಸಂಗೀತ ಸಂಯೋಜನೆ, ಗಣೇಶ್ ನೀರ್ಚಾಲ್ ಸಂಕಲನವಿದೆ. ಸಿಹಿ ಗೌಡ, ಆರಾಧನಾ ಭಟ್, ಪ್ರಜ್ವಲ್ ಪೈ, ನವೀನ್ ಡಿ ಪಡೀಲ್, ಅರವಿಂದ ಬೋಳಾರ್, ಭೋಜರಾಜ ವಾಮಂಜೂರು, ಪ್ರಕಾಶ್ ತೂಮಿನಾಡು ಮೊದಲಾದವರು ಚಿತ್ರದಲ್ಲಿದ್ದಾರೆ.

‘ಶ್ರೀಮತಿ ಸಿಂಧೂರ’ ಟೀಸರ್ ಬಿಡುಗಡೆ


ವಿಜಯ ರಾಘವೇಂದ್ರ, ಪ್ರಿಯಾ

ವಿಜಯ ರಾಘವೇಂದ್ರ ನಾಯಕನಾಗಿ ನಟಿಸಿರುವ ‘ಶ್ರೀಮತಿ ಸಿಂಧೂರ’ ಚಿತ್ರದ ಟೀಸರ್ ಮತ್ತು ನಾಲ್ಕು ಹಾಡುಗಳು ಪತ್ರಿಕೆಗೆ ಬಿಡುಗಡೆಗೊಂಡವು. ಕೌಟುಂಬಿಕ ಕಥಾಹಂದರವಿರುವ ಚಿತ್ರಕ್ಕೆ ಆರ್.ಅನಂತರಾಜು ನಿರ್ದೇಶನವಿದೆ. ಡಿ.ಎನ್.ನಾಗಿರೆಡ್ಡಿ ಕಥೆ ಬರೆದಿರುವುದರ ಜತೆಗೆ, ಆರ್ ಆ್ಯಂಡ್ ಆರ್ ಎಂಟರ್‌ಪ್ರೈಸಸ್ ಅಡಿಯಲ್ಲಿ ಬಂಡವಾಳ ಹೂಡಿದ್ದಾರೆ.

‘ಅಂಜನೇಯನ ಹಾಡು ಸಿನಿಮಾದ ಆಕರ್ಷಣೆ. ಕೈಲಾಶ್ ಖೇರ್ ಹಾಡಿದ್ದಾರೆ. ಯುವತಿಯೊಬ್ಬಳು ಮದುವೆಯಾದರೆ ಶ್ರೀಮತಿ ಆಗುತ್ತಾಳೆ. ಸಿಂಧೂರ ಎನ್ನುವುದು ಆಕೆಗೆ ಸಿಗುವ ಗೌರವ. ಅದೇ ರೀತಿ ಜವಾಬ್ದಾರಿ ಇರುವ ಹುಡುಗನೊಬ್ಬ ಇಷ್ಟಪಟ್ಟ ಹುಡುಗಿಯನ್ನು ಮದುವೆ ಆಗುತ್ತಾನೆ. ಮುಂದೆ ಆತನ ಬದುಕಿನಲ್ಲಿ ಅನೇಕ ತಿರುವುಗಳು ಎದುರಾಗುತ್ತವೆ. ಇದರಿಂದ ಆತ ಯಾವ ದಿಕ್ಕಿಗೆ ಹೋಗುತ್ತಾನೆ?, ಅವನ ಬದುಕಿನಲ್ಲಿ ಏನೆಲ್ಲ ಬದಲಾವಣೆಗಳು ಆಗುತ್ತವೆ ಎಂಬುದೇ ಕಥೆ. ಸಂಸಾರದಲ್ಲಿ ದ್ವೇಷವಿರದೆ ಇರಬೇಕು. ನಾವು ನಂಬಿದ ದೇವರು ಎಂದಿಗೂ ಕೈ ಬಿಡುವುದಿಲ್ಲ ಎಂಬ ಸಂದೇಶವಿದೆ. ಇದೊಂದು ಕೌಟುಂಬಿಕ ಕಥೆಯ, ಮನರಂಜನೀಯ ಸಿನಿಮಾ’ ಎಂದರು ನಿರ್ದೇಶಕ.

‘ಈಗಿನ ಸಿನಿಮಾಗಳ ಟ್ರೆಂಡ್ ಹೊಡಿ, ಬಡಿ, ಹಾರರ್, ಥ್ರಿಲ್ಲರ್ ಕಥೆಗಳೇ ಇವೆ. ಇವುಗಳ ಮಧ್ಯೆ ಅಪ್ಪಟ ಕುಟುಂಬ ಸಮೇತ ಮನಸ್ಸಿಗೆ ಮುದ ನೀಡುವ ಚಿತ್ರ ಇದಾಗಿದೆ. ಇದನ್ನು ಯಾವ ವರ್ಗಕ್ಕೆ ಬೇಕಾದರೂ ಸೇರಿಸಬಹುದು. ಯಾವ ಕಾಲಕ್ಕಾದರೂ ಜನ ಇಂತಹ ಚಿತ್ರವನ್ನು ಇಷ್ಟಪಡುತ್ತಾರೆ. ಚಿತ್ರದಲ್ಲಿ ಗ್ರಾಫಿಕ್ಸ್ ಕೆಲಸ ತುಂಬ ನೀಡುತ್ತದೆ’ ಎಂದರು ವಿಜಯ ರಾಘವೇಂದ್ರ.

ವಿಜಯ ರಾಘವೇಂದ್ರಗೆ ಪ್ರಿಯಾ ಹೆಗ್ಡೆ ಜೋಡಿಯಾಗಿದ್ದಾರೆ. ಡಿ.ಎನ್.ಲೀಲೋ ಮತ್ತೊರ್ವ ನಾಯಕ. ಗಣೇಶ್ ರಾವ್ ಕೇಸರಕರ್, ರೇಖಾ.ದಿ.ಗೌಡ, ಪ್ರಸನ್ನ ಬಾಗಿನ, ಉಗ್ರಂ ರವಿ, ಮಾಸ್ಟರ್ ಮೌರ್ಯ ಮುಂತಾದವರು ಚಿತ್ರದಲ್ಲಿದ್ದಾರೆ.

‘ಸಿನಿಮಾ ಮಾಡಬೇಕೆಂಬುದು ನನ್ನ ಇಷ್ಟು ವರ್ಷಗಳ ಕನಸು. ಅಪ್ಪು ಜತೆ ಸಿನಿಮಾ ಮಾಡಲು ನಾನು, ಈ ಚಿತ್ರದ ಕಾರ್ಯಕಾರಿ ನಿರ್ಮಾಪಕ ಗಂಗಾಧರ್ ಯೋಜನೆ ಹಾಕಿಕೊಂಡಿದ್ದೆವು. ಅದು ಸಾಧ್ಯವಾಗಲಿಲ್ಲ. ಈಗ ಅವರ ಕುಟುಂಬದ ಕುಡಿಯೊಂದಿಗೆ ಸಿನಿಮಾ ಮಾಡಿರುವುದು ಖುಷಿ ಕೊಟ್ಟಿದೆ. ಒಂದು ವೇಳೆ ಸಿನಿಮಾ ಗೆದ್ದರೆ, ಲಾಭವನ್ನು ಸಿನಿಮಾಕ್ಕೆ ದುಡಿದವರೆಲ್ಲರಿಗೂ ಹಂಚುತ್ತೇನೆ’ ಎಂದರು ಡಿ.ಎನ್.ನಾಗಿರೆಡ್ಡಿ.

ರಾಜೇಶ್ ರಾಮನಾಥ್ ಸಂಗೀತ, ಪಿ.ಕೆ.ಹೆಚ್.ದಾಸ್ ಛಾಯಾಚಿತ್ರಗ್ರಹಣವಿದೆ. ಮೂಡಿಗೆರೆ, ಸಕಲೇಶಪುರ, ಚಿಕ್ಕಮಗಳೂರು ಮುಂತಾದೆಡೆ ಚಿತ್ರೀಕರಣಗೊಂಡಿದೆ.

‘ಆರ್‌ಟಿಐ: ಸಂಗಾತಿಯ ಆದಾಯ ವಿವರ ಬಹಿರಂಗ ಸಲ್ಲ’

ಮುಖ್ಯಾಂಶಗಳು
- ವೈಯಕ್ತಿಕ ಮಾಹಿತಿ ನೀಡಲು ಅವಕಾಶವಿಲ್ಲ: ದೆಹಲಿ ಹೈಕೋರ್ಟ್
- ಸಿಐಸಿ ನೀಡಿದ್ದ ಆದೇಶ ರದ್ದು

ನವದೆಹಲಿ (ಪಿಟಿಐ): ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಅರ್ಜಿ ಸಲ್ಲಿಸುವ ಮೂಲಕ ಯಾವುದೇ ವ್ಯಕ್ತಿಯು ತನ್ನ ಸಂಗಾತಿಯ ಆದಾಯದ ವಿವರಗಳನ್ನು ಪಡೆಯಲು ಸಾಧ್ಯವಿಲ್ಲ ಎಂದು ದೆಹಲಿ ಹೈಕೋರ್ಟ್ ತೀರ್ಪು ನೀಡಿದೆ.

ಕಾಯ್ದೆಯ ಸೆಕ್ಷನ್ 8(1)(ಜೆ) ಅಡಿಯಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸದ ಹೊರತು, ವೈಯಕ್ತಿಕ ಮಾಹಿತಿ ಬಹಿರಂಗಪಡಿಸುವುದಕ್ಕೆ ಅವಕಾಶವಿಲ್ಲ. ಸುಪ್ರೀಂ ಕೋರ್ಟ್ ಪ್ರಕಾರ, ವ್ಯಕ್ತಿಯ ಆದಾಯ ತೆರಿಗೆ ರಿಟರ್ನ್‌ಗಳು ಆ ವರ್ಗಕ್ಕೆ ಸೇರುತ್ತವೆ ಎಂದು ನ್ಯಾಯಮೂರ್ತಿ ಪುರುಷೇಂದ್ರ ಕುಮಾರ್ ಕೌರವ್ ತಿಳಿಸಿದ್ದಾರೆ.

ಅರ್ಜಿದಾರರ ಪತಿಯ ತೆರಿಗೆಗೆ ಒಳಪಡುವ ಆದಾಯದ ವಿವರಗಳನ್ನು ಬಹಿರಂಗಪಡಿಸುವಂತೆ ಆದಾಯ ತೆರಿಗೆ ಅಧಿಕಾರಿಗಳಿಗೆ ನಿರ್ದೇಶಿಸಿ ಕೇಂದ್ರ ಮಾಹಿತಿ ಆಯುಕ್ತರು (ಸಿಐಸಿ) ನೀಡಿದ್ದ 2021ರ ಆದೇಶವನ್ನು ಪ್ರಶ್ನಿಸಿ, ಅವರ ಪತಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯಿತು.

ಸಿಐಸಿ ನೀಡಿದ್ದ ಆದೇಶವನ್ನು ಕಾನೂನುಬದ್ಧವಲ್ಲ ಎಂದು ರದ್ದುಗೊಳಿಸಿದ ಹೈಕೋರ್ಟ್, ಪತ್ನಿ ಕೋರಿದ ಮಾಹಿತಿಯು ಅರ್ಜಿದಾರರ ವೈಯಕ್ತಿಕ ಮಾಹಿತಿಯಾಗಿದ್ದು, ಅದು ಸಾರ್ವಜನಿಕ ಹಿತಾಸಕ್ತಿ ಅಡಿಯಲ್ಲಿ ಬರುವುದಿಲ್ಲ ಎಂದು ಏಪ್ರಿಲ್ 28ರಂದು ತೀರ್ಪು ನೀಡಿದೆ.

ಸಾರ್ವಜನಿಕ ಅಧಿಕಾರಿಗಳ ಕೆಲಸದಲ್ಲಿ ಪಾರದರ್ಶಕತೆಯನ್ನು ಉತ್ತೇಜಿಸಲು ಆರ್‌ಟಿಐ ಕಾಯ್ದೆ ಜಾರಿಗೆ ತರಲಾಗಿದೆ. ಸಾರ್ವಜನಿಕರ ಮೇಲೆ ಯಾವುದೇ ಪರಿಣಾಮ ಬೀರದ ವ್ಯಕ್ತಿಗಳ ವೈಯಕ್ತಿಕ ಮಾಹಿತಿಯನ್ನು ಬಹಿರಂಗಪಡಿಸಲು ಈ ಕಾಯ್ದೆ ಅವಕಾಶ ನೀಡುವುದಿಲ್ಲ ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ.

ಪತಿಯಿಂದ ಸೂಕ್ತ ಎನ್ನುವಷ್ಟು ಜೀವನಾಂಶ ಪಡೆಯುವುದಕ್ಕೆ ಪೂರಕವಾಗಿ ನಿರ್ವಹಣಾ ಹಕ್ಕು ಪ್ರತಿಪಾದಿಸಲು ಆರ್‌ಟಿಐ ಕಾಯ್ದೆಯಡಿ ಅವರ ಆದಾಯದ ವಿವರಗಳನ್ನು ಪಡೆಯುವ ಅಗತ್ಯವಿದೆ ಎಂದು ಪತ್ನಿ ವಾದಿಸಿದರು.

ಈ ವಾದವನ್ನು ಒಪ್ಪದ ನ್ಯಾಯಾಲಯ, ಎರಡೂ ಕಡೆಯವರು ತಮ್ಮ ಆದಾಯ, ಆಸ್ತಿ ಮತ್ತು ಹೊಣೆಗಾರಿಕೆಗಳ ಕುರಿತು ಪ್ರಮಾಣ ಪತ್ರಗಳನ್ನು ಸಲ್ಲಿಸಿ ಪರಿಹಾರಗಳನ್ನು ಪಡೆದುಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ ಎಂದು ಹೇಳಿದೆ.

ಥಾಮಸ್ ಕಪ್: ಭಾರತಕ್ಕೆ ಕಂಚು

ಸೆಮಿಫೈನಲ್‌ನಲ್ಲಿ ಫ್ರಾನ್ಸ್ ವಿರುದ್ಧ ಸೋಲು
ಆಯುಷ್, ಪ್ರಣಯ್, ಶ್ರೀಕಾಂತ್‌ಗೆ ನಿರಾಸೆ


ಭಾರತದ ಆಯುಷ್ ಶೆಟ್ಟಿ

ಹಾರ್ಸೆನ್ಸ್, ಡೆನ್ಮಾರ್ಕ್ (ಪಿಟಿಐ): ಭಾರತ ಪುರುಷರ ತಂಡವು ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ 0–3 ಅಂತರದಿಂದ ಫ್ರಾನ್ಸ್ ತಂಡಕ್ಕೆ ಮಣಿಯಿತು. ಇದರೊಂದಿಗೆ ಪ್ರಶಸ್ತಿಯನ್ನು ಮರಳಿ ಪಡೆಯುವ ನಿರೀಕ್ಷೆಯಲ್ಲಿದ್ದ ಭಾರತದ ಷಟ್ಲರ್‌ಗಳಿಗೆ ನಿರಾಸೆಯಾಯಿತು.

2022ರಲ್ಲಿ ಮೊದಲ ಬಾರಿ ಚಾಂಪಿಯನ್ ಆಗಿದ್ದ ಭಾರತ ತಂಡವು 2024ರಲ್ಲಿ ಕ್ವಾರ್ಟರ್ ಫೈನಲ್‌ನಲ್ಲಿ ಚೀನಾ ತಂಡಕ್ಕೆ ಸೋತು ಹೊರಬಿದ್ದಿತ್ತು. ಈ ಬಾರಿ ಸೆಮಿಫೈನಲ್ ಪ್ರವೇಶಿಸುವ ಮೂಲಕ ಕನಿಷ್ಠ ಕಂಚಿನ ಪದಕ ಖಚಿತ ಪಡಿಸಿಕೊಂಡಿತ್ತು. 1952, 1955 ಮತ್ತು 1979ರ ಬಳಿಕ ಭಾರತಕ್ಕೆ ಲಭಿಸಿದ ನಾಲ್ಕನೇ ಕಂಚು ಇದಾಗಿದೆ.

ಫ್ರಾನ್ಸ್ ತಂಡವು ಈ ಗೆಲುವಿನೊಂದಿಗೆ ಫೈನಲ್‌ಗೆ ಲಗ್ಗೆಯಿಟ್ಟಿತು. ಡೆನ್ಮಾರ್ಕ್ (2016) ಬಳಿಕ ಪ್ರಶಸ್ತಿ ಸುತ್ತು ತಲುಪಿದ ಯುರೋಪಿನ ಎರಡನೇ ರಾಷ್ಟ್ರ ಎಂಬ ಹಿರಿಮೆಗೂ ಪಾತ್ರವಾಯಿತು. ಫೈನಲ್‌ನಲ್ಲಿ 14 ಬಾರಿಯ ಚಾಂಪಿಯನ್ ಚೀನಾ ತಂಡವನ್ನು ಎದುರಿಸಲಿದೆ.

ನಾಲ್ಕರ ಘಟ್ಟದ ಹಣಾಹಣಿಗೆ ಅನುಭವಿ ಲಕ್ಷ್ಯ ಸೇನ್ ಅನುಪಸ್ಥಿತಿ ಭಾರತಕ್ಕೆ ದುಬಾರಿಯಾಗಿ ಪರಿಣಮಿಸಿತು. ಮೂರು ಸಿಂಗಲ್ಸ್ ಪಂದ್ಯಗಳಲ್ಲಿ ಆಯುಷ್ ಶೆಟ್ಟಿ, ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್. ಪ್ರಣಯ್ ಅವರಿಗೆ ಒಂದೇ ಒಂದು ಗೇಮ್ ಅನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಫ್ರಾನ್ಸ್ ಆಟಗಾರರು ಏಕಪಕ್ಷೀಯ ಗೆಲುವು ಸಾಧಿಸಿದರು.

ಮೊದಲ ಸಿಂಗಲ್ಸ್‌ನಲ್ಲಿ ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತ ಆಯುಷ್ 11-21, 9-21ರಿಂದ ವಿಶ್ವದ ನಾಲ್ಕನೇ ಕ್ರಮಾಂಕದ ಕ್ರಿಸ್ಟೊ ಪೊಪೊವ್ ಅವರಿಗೆ ಸೋತರು. ಕೇವಲ 39 ನಿಮಿಷದಲ್ಲಿ ಕ್ರಿಸ್ಟೊ ಅವರು ಜಯ ಸಾಧಿಸಿ, ಫ್ರಾನ್ಸ್‌ಗೆ ಆರಂಭಿಕ ಮುನ್ನಡೆ ಒದಗಿಸಿದರು. ಎರಡನೇ ಸಿಂಗಲ್ಸ್‌ನಲ್ಲಿ ಅನುಭವಿ ಶ್ರೀಕಾಂತ್ 16-21, 18-21ರಿಂದ ವಿಶ್ವ ಕ್ರಮಾಂಕದಲ್ಲಿ 10ನೇ ಸ್ಥಾನದಲ್ಲಿರುವ ಅಲೆಕ್ಸ್ ಲ್ಯಾನಿಯರ್ ಅವರಿಗೆ ಮಣಿದರು. ಮೂರನೇ ಸಿಂಗಲ್ಸ್‌ನಲ್ಲಿ ಪ್ರಣಯ್ 19–21, 16–21ರಿಂದ ತೋಮಾ ಜೂನಿಯರ್ ಪೊಪೊವ್ ಅವರಿಗೆ ಶರಣಾದರು. ಇದರೊಂದಿಗೆ ಫ್ರಾನ್ಸ್ 3–0 ಜಯ ಸಾಧಿಸಿತು. ಭಾರತ ತಂಡದ ಅಭಿಯಾನಕ್ಕೂ ತೆರೆಬಿತ್ತು.

ಫೈನಲ್‌ನಲ್ಲಿ ಎಡವಿದ ಧಾಮ್ನೆ

ನವದೆಹಲಿ (ಪಿಟಿಐ): ಭಾರತದ ಉದಯೋನ್ಮುಖ ಟೆನಿಸ್ ಆಟಗಾರ ಮಾನಸ್ ಧಾಮ್ನೆ ತಮ್ಮ ಚೊಚ್ಚಲ ಎಟಿಪಿ ಚಾಲೆಂಜರ್ ಟೂರ್ನಿಯ ಅಂತಿಮ ಸುತ್ತಿನಲ್ಲಿ ಎಡವಿದರು. ಕಜಾಕಸ್ತಾನದ ಶಿಮ್ಕೆಂಟ್‌ನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಅವರು ಬೆಲ್ಜಿಯಂನ ಬೂವಯ್ಸಾರ್ ಗದಮೊವ್ರಿ ಅವರಿಗೆ ಸೋತರು.

ಅನುಭವಿ ಆಟಗಾರ ಬೂವಯ್ಸಾರ್ 7–6 (8), 6–4 ರಿಂದ 18 ವರ್ಷ ವಯಸ್ಸಿನ ಧಾಮ್ನೆ ಅವರನ್ನು ಸೋಲಿಸಿದರು. ಟೈಬ್ರೇಕರ್‌ವರೆಗೆ ವಿಸ್ತರಿಸಿದ ಮೊದಲ ಸೆಟ್‌ನಲ್ಲಿ ಸೋತಿದ್ದು ಧಾಮ್ನೆ ಆಟದ ಮೇಲೆ ಪರಿಣಾಮ ಬೀರಿದಂತೆ ಕಂಡಿತು. ಎರಡನೇ ಸೆಟ್‌ನ ಆರಂಭದಲ್ಲಿ ಬ್ರೇಕ್ ಪಡೆದ ಬೂವಯ್ಸಾರ್ ಎರಡು ಗಂಟೆಗೂ ಹೆಚ್ಚು ಕಾಲ ನಡೆದ ಪಂದ್ಯ ಗೆದ್ದುಕೊಂಡರು.

ಧಾಮ್ನೆ ಸೋಮವಾರ ಪ್ರಕಟಗೊಳ್ಳಲಿರುವ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಅಗ್ರ 400ರೊಳಗೆ ಸ್ಥಾನ ಪಡೆಯುವುದು ಖಚಿತವಾಗಿದೆ. ಜೀವನಶ್ರೇಷ್ಠ 384ನೇ ಕ್ರಮಾಂಕ ಪಡೆಯುವ ಸಾಧ್ಯತೆಯಿದೆ.

ವಿಮಾನದ ತುರ್ತು ನಿರ್ಗಮನ ಬಾಗಿಲು ತೆರೆದ ವ್ಯಕ್ತಿ ಸೆರೆ

ಚೆನ್ನೈ: ಚೆನ್ನೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದ ವಿಮಾನವು ನಿಲುಗಡೆ ಸ್ಥಳದತ್ತ ಚಲಿಸುತ್ತಿರುವಾಗಲೇ ಪ್ರಯಾಣಿಕರೊಬ್ಬರು ತುರ್ತು ನಿರ್ಗಮನ ಬಾಗಿಲು ತೆರೆದು, ಹೊರ ಹಾರಿದ ಘಟನೆ ಭಾನುವಾರ ನಡೆದಿದೆ.

ಶಾರ್ಜಾದಿಂದ ಚೆನ್ನೈಗೆ ಬಂದಿದ್ದ 231 ಪ್ರಯಾಣಿಕರಿದ್ದ ಅರೇಬಿಯಾ ವಿಮಾನದಲ್ಲಿ ಈ ಘಟನೆ ನಡೆದಿದ್ದು, ಕೆಲ ಸಮಯ ಆತಂಕ ಸೃಷ್ಟಿಸಿತು. ರನ್‌ವೇಯಿಂದ ನಿಲುಗಡೆಗಾಗಿ ವಿಮಾನ ನಿಧಾನವಾಗಿ ಚಲಿಸುತ್ತಿದ್ದಾಗ ಪುದುಕೊಟ್ಟೈನ ಪ್ರಯಾಣಿಕರೊಬ್ಬರು ಈ ಕೃತ್ಯ ಎಸಗಿದ್ದಾರೆ. ಇದಕ್ಕೂ ಮುನ್ನ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು, ಎರಡು ಬಾರಿ ವಾಂತಿ ಮಾಡಿಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

ತಕ್ಷಣವೇ ಎಚ್ಚೆತ್ತ ಪೈಲಟ್ ವಿಮಾನ ನಿಲ್ಲಿಸಿ, ವಿಮಾನ ನಿಲ್ದಾಣದ ಆಡಳಿತಾಧಿಕಾರಿಗಳಿಗೆ ಮಾಹಿತಿ ನೀಡಿದರು. ಸಿಐಎಸ್‌ಎಫ್ ಸಿಬ್ಬಂದಿ, ಬಾಂಬ್ ನಿಷ್ಕ್ರಿಯ ತಜ್ಞರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ವಿಮಾನದಿಂದ ಹಾರಿದ ಪ್ರಯಾಣಿಕನಿಗೆ ಗಾಯಗಳಾಗಿದ್ದು, ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ ಎಂದೂ ಮೂಲಗಳು ಹೇಳಿವೆ.

ಸರ್ಕಾರದ ವಿರುದ್ಧ ಹೇಳಿಕೆ: ಐಎಎಸ್ ಅಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ


ಎನ್‌.ಪ್ರಶಾಂತ್

ತಿರುವನಂತಪುರ (ಕೇರಳ): ರಾಜ್ಯ ಸರ್ಕಾರದ ವಿರುದ್ಧ ಹೇಳಿಕೆ ನೀಡಿದ್ದಕ್ಕಾಗಿ ಐಎಎಸ್ ಅಧಿಕಾರಿಯನ್ನು ಅಮಾನತು ಮಾಡಲಾಗಿದೆ.

ಮುಖ್ಯ ಕಾರ್ಯದರ್ಶಿ ಎ.ಜಯತಿಲಕ್ ಅವರನ್ನು ಟೀಕಿಸಿದ ಆರೋಪದ ಮೇಲೆ 2007ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಎನ್.ಪ್ರಶಾಂತ್ ಅವರನ್ನು ಅಮಾನತುಗೊಳಿಸಲಾಗಿದೆ.

ಸರ್ಕಾರದ ಅನುಮತಿ ಪಡೆಯದೇ, ಮಾಧ್ಯಮಗಳಲ್ಲಿ ಸಂದರ್ಶನ ನೀಡಿದ ಕಾರಣಕ್ಕಾಗಿ ಮತ್ತೊಬ್ಬ ಐಎಎಸ್ ಅಧಿಕಾರಿ ಬಿ.ಅಶೋಕ್ ಅವರನ್ನು ಕಳೆದ ವಾರ ಅಮಾನತು ಮಾಡಲಾಗಿತ್ತು.

ಎನ್. ಪ್ರಶಾಂತ್ ಅವರು ಜಯತಿಲಕ್ ವಿರುದ್ಧ ಹಲವು ಸಲ ಮಾಧ್ಯಮಗಳಲ್ಲಿ ಬಹಿರಂಗವಾಗಿ ಟೀಕಿಸಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ಗಳನ್ನು ಮಾಡಿದ್ದರು.

ಹಜ್: ಪ್ರಯಾಣ ದರ ಪರಿಷ್ಕರಣೆಯ ಸುತ್ತೋಲೆ ವಾಪಸ್‌ಗೆ ಒತ್ತಾಯ


ನವದೆಹಲಿ (ಪಿಟಿಐ): ಪ್ರತಿಯೊಬ್ಬ ಹಜ್ ಯಾತ್ರಿಕರು ವಿಮಾನ ಪ್ರಯಾಣ ದರವನ್ನು ಹೆಚ್ಚುವರಿಯಾಗಿ ₹10 ಸಾವಿರ ಪಾವತಿಸುವಂತೆ ಭಾರತೀಯ ಹಜ್ ಸಮಿತಿ ಹೊರಡಿಸಿರುವ ಸುತ್ತೋಲೆಯನ್ನು ಹಿಂಪಡೆಯುವಂತೆ ಕಾಂಗ್ರೆಸ್ ಒತ್ತಾಯಿಸಿದೆ.

‘ಮೋದಿ ಸರ್ಕಾರ ಸಾಮಾನ್ಯ ಕುಟುಂಬಗಳು ಭರಿಸಲು ಸಾಧ್ಯವಾಗದ ರೀತಿಯಲ್ಲಿ ವಿಮಾನ ದರವನ್ನು ಏರಿಕೆ ಮಾಡಿದೆ’ ಎಂದು ಅದು ಆರೋಪಿಸಿದೆ.

ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನಿಂದ ಈ ವರ್ಷ ಜಾಗತಿಕವಾಗಿ ವಿಮಾನ ಇಂಧನ (ಎಟಿಎಫ್) ಬೆಲೆಯಲ್ಲಿ ತೀವ್ರ ಏರಿಕೆಯಾಗಿದ್ದು, ಈ ಕಾರಣದಿಂದ ಹಜ್ ಸಮಿತಿಯು ಈ ವರ್ಷ ಪ್ರತಿ ಹಜ್ ಯಾತ್ರಿಕರ ವಿಮಾನ ಪ್ರಯಾಣ ದರವನ್ನು ₹10 ಸಾವಿರದಷ್ಟು ಹೆಚ್ಚಿಸಿದೆ.

‘ಪಶ್ಚಿಮ ರಾಷ್ಟ್ರಗಳಲ್ಲಿನ ಬಿಕ್ಕಟ್ಟಿನಿಂದ ಅನಿರೀಕ್ಷಿತವಾಗಿ ಎದುರಾಗುವ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು, 2026ರ ಹಜ್ ಯಾತ್ರೆಯ ವಿಮಾನ ದರವನ್ನು ಒಮ್ಮೆ ಮಾತ್ರ ಪರಿಷ್ಕರಿಸಲು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ಅನುಮೋದನೆ ನೀಡಿದೆ’ ಎಂದು ಭಾರತೀಯ ಹಜ್ ಸಮಿತಿ ಹೊರಡಿಸಿದ ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ.

ರಸಾಯನ ವಿಜ್ಞಾನಿಗಳ ಜತೆ ನಂಟು


ಸಲೀಂ ಡೋಲಾ

ನವದೆಹಲಿ (ಪಿಟಿಐ): ಇತ್ತೀಚೆಗೆ ಟರ್ಕಿಯಿಂದ ಕರೆತರಲಾದ ಅಂತರರಾಷ್ಟ್ರೀಯ ಮಾದಕವಸ್ತು ಕಳ್ಳ ಸಾಗಣೆದಾರ ಮೊಹಮ್ಮದ್ ಸಲೀಂ ಡೋಲಾನ ಜಾಲದ ಕುರಿತು ತನಿಖೆ ನಡೆಸುತ್ತಿರುವ ಪೊಲೀಸರು, ಆತ ಕೆಲ ರಸಾಯನ ವಿಜ್ಞಾನಿಗಳು, ಔಷಧ ಪೂರೈಕೆದಾರರ ಜತೆ ನಂಟು ಹೊಂದಿರುವುದನ್ನು ಪತ್ತೆ ಮಾಡಿದ್ದಾರೆ.

ಭೂಗತ ಪಾತಕಿ ದಾವೂದ್ ಇಬ್ರಾಹಿಂ ಆಪ್ತನಾಗಿರುವ ಡೋಲಾನನ್ನು ನ್ಯಾಯಾಲಯವು ಮೇ 8ರವರೆಗೆ ಮಾದಕವಸ್ತು ನಿಗ್ರಹ ದಳದ (ಎನ್‌ಸಿಬಿ) ಕಸ್ಟಡಿಗೆ ನೀಡಿತ್ತು.

ಬೆಂಕಿ ಅವಘಡ: 9 ಮಂದಿ ಸಾವು

ಒಂದನೇ ಪುಟದಿಂದ...

‘ಸೆಂಟ್ರಲ್ ಲಾಕಿಂಗ್ ಸಿಸ್ಟಂ ಅಳವಡಿಕೆ, ಕಟ್ಟಡದ ಹಿಂಭಾಗದಲ್ಲಿ ದಪ್ಪ ಕಬ್ಬಿಣದ ಜಾಲರಿ ಹಾಗೂ ಕಟ್ಟಡದ ಹೊರಗೆ ತೆರಳಲು ಒಂದೇ ಮೆಟ್ಟಿಲು ಇದ್ದ ಕಾರಣ ಸಾವಿನ ಸಂಖ್ಯೆ ಹೆಚ್ಚಾಯಿತು. ಎಲ್ಲ ಬಾಗಿಲುಗಳು ಲಾಕ್ ಆಗಿದ್ದ ಕಾರಣ ಮನೆ ಒಳಗೆ ಇದ್ದವರು ಹೊರಬರುವುದು ಕಷ್ಟಕರವಾಯಿತು. ಚಾವಣಿಯ ಮೇಲೆ ಹೋಗುವ ದಾರಿಯಲ್ಲೂ ಮೃತದೇಹಗಳು ಇದ್ದವು. ಚಾವಣಿಗೆ ಹೋಗುವ ಬಾಗಿಲಿಗೆ ಬೀಗ ಹಾಕಿದ್ದರಿಂದ ಅವರು ಜೀವ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.

12 ಅಗ್ನಿಶಾಮಕ ವಾಹನಗಳು ಬೆಂಕಿ ನಂದಿಸುವ ಕಾರ್ಯದಲ್ಲಿ ನಿರತವಾಗಿದ್ದವು. ‘ಕಟ್ಟಡ ತುಂಬಾ ದಟ್ಟ ಹೊಗೆ ಆವರಿಸಿತ್ತು. ಇದರಿಂದ ಕಾರ್ಯಾಚರಣೆಗೆ ಅಡ್ಡಿಯಾಯಿತು.


ಮೃತರ ಕುಟುಂಬಸ್ಥರು ಕಣ್ಣೀರಿಟ್ಟರು —ಪಿಟಿಐ ಚಿತ್ರ

ಕಟ್ಟಡದೊಳಗೆ ಬೆಂಕಿಯಲ್ಲಿ ಸಿಲುಕಿದ್ದವರ ಆರ್ತನಾದ ಕೇಳುತ್ತಿತ್ತು’ ಎಂದು ರಕ್ಷಣಾ ಸಿಬ್ಬಂದಿ ತಿಳಿಸಿದ್ದಾರೆ.


ಅಯಾನ್ ಪುಟಾಣೆ

ಚೆಸ್: 10 ವರ್ಷದ ಅಯಾನ್‌ಗೆ ಕಿರೀಟ

ಬೆಂಗಳೂರು: ಕರ್ನಾಟಕ ರಾಜ್ಯ ಚೆಸ್ ಚಾಂಪಿಯನ್‌ಷಿಪ್ ಗೆದ್ದ ಅತಿ ಕಿರಿಯ ಆಟಗಾರ ಎಂಬ ಗೌರವಕ್ಕೆ ನಗರದ ಹತ್ತು ವರ್ಷ ವಯಸ್ಸಿನ ಪ್ರತಿಭೆ ಅಯಾನ್ ಪುಟಾಣೆ ಪಾತ್ರರಾಗಿದ್ದಾರೆ. ಭಾನುವಾರ ಮುಕ್ತಾಯಗೊಂಡ ಈ ಚಾಂಪಿಯನ್‌ಷಿಪ್‌ನಲ್ಲಿ ಅಯಾನ್ 9 ಸುತ್ತುಗಳಿಂದ 8 ಪಾಯಿಂಟ್ಸ್ ಕಲೆಹಾಕಿದನು.

ತೀವ್ರ ಪೈಪೋಟಿ ಕಂಡುಬಂದ ಈ ಕೂಟದಲ್ಲಿ ಬೆಂಗಳೂರಿನವರೇ ಆದ ಕೃಷ್ಣ, ಸುದರ್ಶನ ಭಟ್ ಮತ್ತು ಸಿದ್ಧಾರ್ಥ ಪೂಂಜಾ ಅವರೂ ಎಂಟು ಪಾಯಿಂಟ್ಸ್ ಪಡೆದರು. ಆದರೆ ಟೈಬ್ರೇಕ್ ಆಧಾರದಲ್ಲಿ ಕ್ರಮವಾಗಿ ಎರಡು, ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿದರು.

ಕನಕಪುರ ರಸ್ತೆಯ ಪ್ರೆಸ್ಟೀಜ್ ಸ್ರೀಹರಿ ಖೋಡೆ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಸಭಾಂಗಣದಲ್ಲಿ ಅಕ್ಷಯಕಲ್ಪ ಪ್ರಾಯೋಜಕತ್ವದಲ್ಲಿ ಈ ಟೂರ್ನಿ ನಡೆಯಿತು.

ಅನುಭವಿ ಆಟಗಾರರಿದ್ದ ಕಣದಲ್ಲಿ ವಯಸ್ಸಿಗೆ ಮೀರಿದ ಪ್ರಬುದ್ಧತೆಯಿಂದ ಆಡಿದ ಅಯಾನ್ ಸಂಯಮ, ಏಕಾಗ್ರತೆಯಿಂದ ಆಡಿ ಟೂರ್ನಿಯುದ್ದಕ್ಕೂ ಅಜೇಯನಾದ. ಏಳು ಸುತ್ತುಗಳಲ್ಲಿ ಗೆಲುವು, ಎರಡು ಸುತ್ತುಗಳಲ್ಲಿ ಡ್ರಾ ಮಾಡಿಕೊಂಡ.

ರಾಜ್ಯದ ವಿವಿಧ ಜಿಲ್ಲೆಗಳಿಂದ 500ಕ್ಕೂ ಹೆಚ್ಚು ಆಟಗಾರರು ಭಾಗವಹಿಸಿದ್ದರು. ಮೊದಲ ನಾಲ್ಕು ಸ್ಥಾನ ಪಡೆದ ಆಟಗಾರರು ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲಿದ್ದಾರೆ.

ವಿನೇಶ್‌ಗೆ ಸುರಕ್ಷತೆಯ ಆತಂಕ, ಖಾತರಿ ನೀಡಿದ ಫೆಡರೇಷನ್



ನವದೆಹಲಿ (ಪಿಟಿಐ): ರಾಷ್ಟ್ರೀಯ ಓಪನ್ ರ‍್ಯಾಂಕಿಂಗ್ ಕುಸ್ತಿ ಟೂರ್ನಿಯು ಗೊಂಡಾದಲ್ಲೇ (ಉತ್ತರ ಪ್ರದೇಶ) ನಡೆಯಲಿದ್ದು, ತಾಣ ಬದಲಾವಣೆಯಾಗುವುದಿಲ್ಲ. ಕುಸ್ತಿ ತಾರೆ ವಿನೇಶ್ ಫೋಗಟ್ ಅವರ ಸುರಕ್ಷತೆಗೆ ಸಂಬಂಧಿಸಿ ವೈಯಕ್ತಿಕ ಖಾತರಿ ನೀಡುವುದಾಗಿ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಸಂಜಯ್ ಸಿಂಗ್ ಭಾನುವಾರ ಇಲ್ಲಿ ಭರವಸೆ ನೀಡಿದ್ದಾರೆ.

‘ಗೊಂಡಾದಲ್ಲಿ ಸ್ಪರ್ಧೆಗಳ ವೇಳೆ ಅಹಿತಕರ ಘಟನೆಗಳೇನಾದರೂ ನಡೆದಲ್ಲಿ ಅದಕ್ಕೆ ಸರ್ಕಾರವೇ ಹೊಣೆ’ ಎಂದು ವಿನೇಶ್ ಹೇಳಿದ್ದರು. ಮಾತ್ರವಲ್ಲ, ಅಧಿಕಾರಿಗಳು ಪಕ್ಷಪಾತದಿಂದ ವರ್ತಿಸಬಹುದು ಎಂದೂ ಶಂಕೆ ವ್ಯಕ್ತಪಡಿಸಿದ್ದರು.

ಹರಿಯಾಣದ ಶಾಸಕಿಯೂ ಆಗಿರುವ ವಿನೇಶ್ ಸುಮಾರು 18 ತಿಂಗಳ ನಂತರ ಕುಸ್ತಿ ಕಣಕ್ಕೆ ಮರಳುತ್ತಿದ್ದಾರೆ. ಈ ಟೂರ್ನಿ ಮೇ 10 ರಿಂದ 12ರವರೆಗೆ ನಡೆಯಲಿದೆ. 31 ವರ್ಷ ವಯಸ್ಸಿನ ವಿನೇಶ್ 57 ಕೆ.ಜಿ. ವಿಭಾಗದಲ್ಲಿ ಕಣಕ್ಕಿಳಿಯುತ್ತಿದ್ದಾರೆ. 12ರಂದು ಮಹಿಳೆಯರ ವಿಭಾಗದ ಸ್ಪರ್ಧೆಗಳು ನಡೆಯಲಿವೆ.

ಕುಸ್ತಿ ಫೆಡರೇಷನ್ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಗೊಂಡಾ ಆಗಿದ್ದು, ಅವರು ಇಲ್ಲಿ ಪ್ರಭಾವಶಾಲಿ ರಾಜಕಾರಣಿ. ಈ ಹಿಂದೆ ಫೆಡರೇಷನ್ ಅಧ್ಯಕ್ಷರಾಗಿದ್ದಾಗ ಅವರ ವಿರುದ್ಧ ವಿನೇಶ್ ಮತ್ತು ಕೆಲವು ಕುಸ್ತಿಪಟುಗಳು ಧರಣಿ ನಡೆಸಿದ್ದರು. ಅವರು ಯುವ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆಂದು ದೂರು ನೀಡಿದ್ದರು.

‘ವಿನೇಶ್ ಅವರಿಗೆ ಸುರಕ್ಷತೆಯ ಬಗ್ಗೆ ಆತಂಕವಿದ್ದರೆ, ಅವರಿಗೆ ಭದ್ರತೆಯ ಬಗ್ಗೆ ವೈಯಕ್ತಿಕವಾಗಿ ಖಾತರಿ ನೀಡುತ್ತೇನೆ. ಯುನೈಟೆಡ್ ವಿಶ್ವ ಕುಸ್ತಿ (ಯುಡಬ್ಲ್ಯುಡಬ್ಲ್ಯು) ಮಾನ್ಯತೆ ಪಡೆದ ರೆಫ್ರಿಗಳು ಎಲ್ಲ ಸೆಣಸಾಟಗಳ ಉಸ್ತುವಾರಿ ವಹಿಸಲಿದ್ದಾರೆ. ಸ್ಪರ್ಧೆಗಳ ವಿಡಿಯೊ ಚಿತ್ರೀಕರಣ ನಡೆಯುವ ಕಾರಣ ಪಕ್ಷಪಾತಕ್ಕೆ ಅವಕಾಶವಿರುವುದಿಲ್ಲ’ ಎಂದು ಸಂಜಯ್ ಸಿಂಗ್ ಪಿಟಿಐಗೆ ತಿಳಿಸಿದ್ದಾರೆ.

2024ರ ಪ್ಯಾರಿಸ್ ಒಲಿಂಪಿಕ್ಸ್ ನಂತರ ವಿನೇಶ್ ಯಾವುದೇ ಟೂರ್ನಿಯಲ್ಲಿ ಭಾಗವಹಿಸಿರಲಿಲ್ಲ. ಒಲಿಂಪಿಕ್ಸ್‌ನಲ್ಲಿ 50 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು ನಿಗದಿಗಿಂತ ಹೆಚ್ಚು ತೂಕವಿದ್ದ ಕಾರಣ ಫೈನಲ್‌ಗೆ ಮೊದಲು ಅನರ್ಹಗೊಂಡಿದ್ದರು.

ರಾಜಸ್ಥಾನ ರಾಯಲ್ಸ್: ಶೇ 75ರಷ್ಟು ಪಾಲು ಖರೀದಿಸಿದ ಮಿತ್ತಲ್ ಕುಟುಂಬ

ನವದೆಹಲಿ (ಪಿಟಿಐ): ಉದ್ಯಮಿ ಲಕ್ಷ್ಮಿ ಎನ್.ಮಿತ್ತಲ್ ಮತ್ತು ಅವರ ಪುತ್ರ ಆದಿತ್ಯ ಮಿತ್ತಲ್ ಅವರು ಉದ್ಯಮಿ ಅದಾರ್ ಪೂನಾವಾಲಾ ಜೊತೆಗೂಡಿ ರಾಜಸ್ಥಾನ ರಾಯಲ್ಸ್ ಫ್ರಾಂಚೈಸಿಯ ಬಹುಪಾಲು ಷೇರನ್ನು ಖರೀದಿಸಿದ್ದಾರೆ. ಸುಮಾರು ₹15,600 ಕೋಟಿ ಮೊತ್ತಕ್ಕೆ ಈ ಷೇರುಗಳನ್ನು ಖರೀದಿ ಮಾಡಿದೆ.

ಈ ಹಿಂದೆ ಅತ್ಯಧಿಕ ಮೊತ್ತದ ಬಿಡ್ ಸಲ್ಲಿಸಿದ್ದ ಕಲ್ ಸೊಮಾನಿ- ರಾಬ್ ವಾಲ್ಟನ್- ಶೀಲಾ ಫೋರ್ಡ್ ಹ್ಯಾಂಪ್ ಕನ್ಸೋರ್ಷಿಯಂ (ಕಂಪನಿಗಳ ಒಕ್ಕೂಟ) ಖರೀದಿ ರೇಸ್‌ನಿಂದ ಹಿಂದೆಸರಿದ ಕಾರಣ ಮಿತ್ತಲ್ ಸಮೂಹ ಆಸಕ್ತಿ ತೋರಿಸಿದೆ.

ರಾಜಸ್ಥಾನ ರಾಯಲ್ಸ್ (ಪುರುಷರ ಫ್ರಾಂಚೈಸಿ), ಪಾರ್ಲ್ ರಾಯಲ್ಸ್ (ದಕ್ಷಿಣ ಆಫ್ರಿಕಾ ಲೀಗ್), ಬಾರ್ಬಡೋಸ್ ರಾಯಲ್ಸ್ (ಕೆರೀಬಿಯನ್ ಲೀಗ್) ಖರೀದಿ ಒಪ್ಪಂದದ ವ್ಯಾಪ್ತಿಯಲ್ಲಿ ಬರಲಿದೆ.

ಈ ಒಪ್ಪಂದಕ್ಕೆ ಬಿಸಿಸಿಐ, ಸಿಸಿಐ ಮತ್ತು ಐಪಿಎಲ್ ಆಡಳಿತ ಮಂಡಳಿ ಮತ್ತು ಸಂಬಂಧಿತ ಕಾನೂನು ಸಂಸ್ಥೆಗಳ ಒಪ್ಪಿಗೆ ದೊರೆಯಬೇಕಿದೆ. ಒಪ್ಪಂದವು ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ವೇಳೆಗೆ ಅಂತಿಮಗೊಳ್ಳುವ ನಿರೀಕ್ಷೆಯಿದೆ.

ಈ ಹಿಂದೆ ಕಲ್ ಸೊಮಾನಿ ನೇತೃತ್ವದಲ್ಲಿ ಅಮೆರಿಕದ ಮೂಲದ ಕಂಪನಿಗಳ ಒಕ್ಕೂಟವು ಸುಮಾರು ₹15,470 ಕೋಟಿ ಮೊತ್ತಕ್ಕೆ ಖರೀದಿಗೆ ಮುಂದಾಗಿತ್ತು. ಆದರೆ ವಿವಿಧ ಕಾರಣಗಳಿಂದ ಈ ಬಿಡ್ ಮುರಿದುಬಿದ್ದಿತು.

ಪ್ರಕಟಣೆಯ ಪ್ರಕಾರ ಮಿತ್ತಲ್ ಕುಟುಂಬವು ರಾಜಸ್ಥಾನ ರಾಯಲ್ಸ್‌ನ ಅಂದಾಜು ಶೇ 75ರಷ್ಟು ಪಾಲು ಪಡೆಯಲಿದೆ. ಅದಾರ್ ಪೂನಾವಾಲಾ ಅವರು ಶೇ 18 ರಷ್ಟು ಪಾಲು ಪಡೆಯಲಿದ್ದಾರೆ. ಉಳಿದ ಶೇ 7ರಷ್ಟು ಪಾಲನ್ನು ಹಿಂದಿನ ಆಡಳಿತ ಮಂಡಳಿಯಲ್ಲಿದ್ದ ಮನೋಜ್ ಬದಾಲೆ ಮತ್ತು ಇತರ ಹೂಡಿಕೆದಾರರು ಹೊಂದಲಿದ್ದಾರೆ ಎಂದು ಮಿತ್ತಲ್ ಕುಟುಂಬ ತಿಳಿಸಿದೆ.

ಹೊಸದಾಗಿ ಅಸ್ತಿತ್ವಕ್ಕೆ ಬರಲಿರುವ ರಾಜಸ್ಥಾನ ರಾಯಲ್ಸ್ ಆಡಳಿತ ಮಂಡಳಿಯು ಲಕ್ಷ್ಮಿ ಎನ್.ಮಿತ್ತಲ್, ಆದಿತ್ಯ ಮಿತ್ತಲ್, ವನಿಶಾ ಮಿತ್ತಲ್-ಭಾಟಿಯಾ, ಸೀರಂ ಇನ್‌ಸ್ಟಿಟ್ಯೂಟ್‌ನ ಸಿಇಒ ಅದಾರ್ ಪೂನಾವಾಲಾ ಮತ್ತು ಮನೋಜ್ ಬದಾಲೆ ಅವರನ್ನು ಹೊಂದಲಿದೆ.

ಬದಾಲೆ ಅವರು ಈಗಿನ ಮತ್ತು ಹೊಸ ಮಂಡಳಿಯ ಸೇತುವಾಗಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬಿಎಫ್‌ಸಿಗೆ ಇಂದು ಒಡಿಶಾ ಸವಾಲು


ಬಿಎಫ್‌ಸಿ ತಂಡದ ಗೋಲ್‌ಕೀಪರ್ ಗುರ್‌ಪ್ರೀತ್ ಸಿಂಗ್ ಸಂಧು

ಭುವನೇಶ್ವರ: ತವರಿನಾಚೆ ಅಜೇಯ ಓಟ ಮುಂದುವರಿಸುವ ಛಲದಲ್ಲಿರುವ ಬೆಂಗಳೂರು ಎಫ್‌ಸಿ ತಂಡವು ಸೋಮವಾರ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಪಂದ್ಯದಲ್ಲಿ ಒಡಿಶಾ ಎಫ್‌ಸಿ ತಂಡವನ್ನು ಎದುರಿಸಲಿದೆ.

ಗೋವಾದ ಪಂಡಿತ್ ಜವಾಹರ ಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆಯಲಿರುವ ಹಣಾಹಣಿಯಲ್ಲಿ ಸುನಿಲ್ ಚೆಟ್ರಿ ಪಡೆಯು ಪಾರಮ್ಯ ಮೆರೆಯುವ ವಿಶ್ವಾಸದಲ್ಲಿದೆ. ತವರಿನಾಚೆ ಆಡಿದ ಐದು ಪಂದ್ಯಗಳ ಪೈಕಿ ನಾಲ್ಕರಲ್ಲಿ ಗೆದ್ದಿದ್ದರೆ, ಒಂದರಲ್ಲಿ ಡ್ರಾ ಸಾಧಿಸಿದೆ.

ಬಿಎಫ್‌ಸಿ ತಂಡವು ಕಂಠೀರವ ಕ್ರೀಡಾಂಗಣದಲ್ಲಿ ನಡೆದ ತನ್ನ ಕೊನೆಯ ಪಂದ್ಯದಲ್ಲಿ ಬಲಿಷ್ಠ ಮುಂಬೈ ಸಿಟಿ ಎಫ್‌ಸಿ ವಿರುದ್ಧ ಗೋಲಿಲ್ಲದೆ ಡ್ರಾ ಸಾಧಿಸಿತ್ತು. ಒಡಿಶಾ ತಂಡವು ತನ್ನ ಕೊನೆಯ ಹಣಾಹಣಿಯಲ್ಲಿ 0–3ರಿಂದ ಈಸ್ಟ್ ಬೆಂಗಾಲ್ ವಿರುದ್ಧ ಪರಾಭವಗೊಂಡಿತ್ತು.

ಐಎಸ್‌ಎಲ್ ಇತಿಹಾಸದಲ್ಲಿ ಉಭಯ ತಂಡಗಳು ಈತನಕ 16 ಬಾರಿ ಮುಖಾಮುಖಿಯಾಗಿವೆ. ಈ ಪೈಕಿ ಎರಡು ಪಂದ್ಯಗಳು ಡ್ರಾನಲ್ಲಿ ಅಂತ್ಯಗೊಂಡಿದೆ. ಉಳಿದ 14 ಪಂದ್ಯಗಳಲ್ಲಿ ತಲಾ ಏಳು ಬಾರಿ ಜಯ ಸಾಧಿಸುವ ಮೂಲಕ ಎರಡೂ ತಂಡಗಳು ಸಮಬಲದ ದಾಖಲೆ ಹೊಂದಿವೆ.

ಪ್ರಸ್ತುತ ಅಂಕಪಟ್ಟಿಯಲ್ಲಿ ಪ್ರವಾಸಿ ಬೆಂಗಳೂರು ತಂಡವು 15 ಅಂಕಗಳೊಂದಿಗೆ (4 ಗೆಲುವು, 4 ಡ್ರಾ, 2 ಸೋಲು) ಆರನೇ ಸ್ಥಾನದಲ್ಲಿದ್ದರೆ, ಆತಿಥೇಯ ಒಡಿಶಾ ತಂಡ ಕೇವಲ 6 ಅಂಕಗಳೊಂದಿಗೆ (1 ಗೆಲುವು, 3 ಡ್ರಾ, 5 ಸೋಲು) 13ನೇ ಸ್ಥಾನದಲ್ಲಿದೆ.

ಬೆಂಗಳೂರು ಎಫ್‌ಸಿಯ ಮುಖ್ಯ ಕೋಚ್ ಪೆಪ್ ಮುನೋಝ್ ಅವರು ಅಧಿಕಾರ ಸ್ವೀಕರಿಸಿದ ಬಳಿಕ ತಮ್ಮ ಮೊದಲ ಗೆಲುವಿನ ಹುಡುಕಾಟದಲ್ಲಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಆಡಿದ ಮೂರು ಪಂದ್ಯಗಳ ಪೈಕಿ ಎರಡು ಡ್ರಾಗೊಂಡರೆ, ಒಂದರಲ್ಲಿ ಸೋತಿದೆ.

‘ಒಡಿಶಾ ಎಫ್‌ಸಿ ತಂಡವನ್ನು ಲಘುವಾಗಿ ಪರಿಗಣಿಸುವಂತಿಲ್ಲ. ಎದುರಾಳಿಗಳಿಗೆ ಪೆಟ್ಟು ನೀಡುವ ತಂತ್ರಗಳು ಅವರ ಬಳಿಯಿವೆ. ಅದಕ್ಕೆ ನಾವೂ ತಯಾರಿ ನಡೆಸಿದ್ದೇವೆ’ ಎಂದು ತಂಡದ ಗೋಲ್‌ಕೀಪರ್ ಗುರ್‌ಪ್ರೀತ್ ಸಿಂಗ್ ಸಂಧು ಹೇಳಿದ್ದಾರೆ.

ಬೆಂಗಳೂರು ತಂಡಕ್ಕೆ ಗಾಯದ ಸಮಸ್ಯೆ ಕಾಡುತ್ತಿದ್ದು, ಸ್ನಾಯು ಸೆಳೆತದಿಂದಾಗಿ ನಿಖಿಲ್ ಪೂಜಾರಿ ಮತ್ತು ಆಶಿಕ್ ಕುರುಣಿಯನ್ ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಮಿಶ್ರ ರಿಲೇ: ರಾಷ್ಟ್ರೀಯ ದಾಖಲೆ

ಬೆಂಗಳೂರು: ಕರ್ನಾಟಕದ ಅಥ್ಲೀಟ್ ಎಸ್. ಎಸ್. ಸ್ನೇಹಾ ಒಳಗೊಂಡ ಭಾರತದ 4x100 ಮೀಟರ್ ಮಿಶ್ರ ರಿಲೇ ತಂಡವು ಬೋಟ್ಸ್‌ವಾನದ ಗ್ಯಾಬೋರೋನ್‌ನಲ್ಲಿ ಭಾನುವಾರ ನಡೆದ ವಿಶ್ವ ರಿಲೇಸ್ ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿತು.

ರಫುಲ್ ಕುಮಾರ್, ನಿತ್ಯಾ ಗಂಧೆ, ಅನಿಮೇಶ್ ಕುಜುರ್ ಮತ್ತು ಸ್ನೇಹಾ ಅವರನ್ನು ಒಳಗೊಂಡ ತಂಡ 41.35 ಸೆಕೆಂಡುಗಳಲ್ಲಿ ಗುರಿ ತಲುಪಿ ಆರನೇ ಸ್ಥಾನ ಗಳಿಸಿತು. 2026ರ ಮಾರ್ಚ್‌ನಲ್ಲಿ ಲಾಲು ಪ್ರಸಾದ್, ಉನ್ನತಿ ಅಯ್ಯಪ್ಪ, ಹರಿತಾ ಭದ್ರ ಮತ್ತು ಜಯರಾಮ್ ಡಿ. ನಿರ್ಮಿಸಿದ್ದ (42.30ಸೆ) ದಾಖಲೆ ಮುರಿಯಿತು. ಆದರೆ, ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆಯಲು ವಿಫಲವಾಯಿತು.



ಸನ್ ನಾಗಾಲೋಟಕ್ಕೆ ತಡೆ

ಕೋಲ್ಕತ್ತ ನೈಟ್ ರೈಡರ್ಸ್‌ಗೆ 7 ವಿಕೆಟ್ ಜಯ
ಮಿಂಚಿದ ಸ್ಪಿನ್ನರ್‌ಗಳಾದ ವರುಣ್, ಸುನಿಲ್

ಹೈದರಾಬಾದ್ (ಪಿಟಿಐ): ಲಯಕ್ಕೆ ಮರಳಿರುವ ವರುಣ್ ಚಕ್ರವರ್ತಿ ಮತ್ತು ಸುನಿಲ್ ನಾರಾಯಣ್ ಅವರ ಪರಿಣಾಮಕಾರಿ ದಾಳಿಯ ನೆರವಿನಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಭಾನುವಾರ ನಡೆದ ಐಪಿಎಲ್ ಪಂದ್ಯವನ್ನು 7 ವಿಕೆಟ್‌ಗಳಿಂದ ಜಯಿಸಿತು. ಸನ್‌ರೈಸರ್ಸ್ ಹೈದರಾಬಾದ್ ತಂಡದ ಐದು ಪಂದ್ಯಗಳ ಗೆಲುವಿನ ಸರಪಣಿಯನ್ನೂ ತುಂಡರಿಸಿತು.

ಲೆಗ್ ಸ್ಪಿನ್ನರ್ ಚಕ್ರವರ್ತಿ (36ಕ್ಕೆ3) ಮತ್ತು ಆಫ್ ಸ್ಪಿನ್ನರ್ ಸುನಿಲ್ (31ಕ್ಕೆ2) ಅವರು ಬಲಾಢ್ಯ ಬ್ಯಾಟಿಂಗ್ ಪಡೆ ಹೊಂದಿರುವ ಸನ್‌ರೈಸರ್ಸ್ ತಂಡವನ್ನು 19 ಓವರುಗಳಲ್ಲಿ 165 ರನ್‌ಗಳಿಗೆ ಉರುಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಅಜಿಂಕ್ಯ ರಹಾನೆ ಪಡೆ ಹತ್ತು ಎಸೆತಗಳಿರುವಂತೆ 3 ವಿಕೆಟ್‌ಗೆ 169 ರನ್ ಬಾರಿಸಿತು.


ನಾಲ್ಕು ಪಂದ್ಯಗಳಿಂದ ಚಕ್ರವರ್ತಿ ಅವರು ಎರಡು ಅಥವಾ ಅದಕ್ಕಿಂತ ಹೆಚ್ಚು ವಿಕೆಟ್ ಪಡೆಯುತ್ತಿದ್ದಾರೆ. ಅನುಭವಿ ಸುನಿಲ್ ಈ ಪಂದ್ಯದ ಮೂಲಕ ಐಪಿಎಲ್‌ನಲ್ಲಿ 200 ವಿಕೆಟ್‌ಗಳ ಮೈಲಿಗಲ್ಲು ತಲುಪಿದರು. ಸ್ವಿಂಗ್ ಬೌಲರ್ ಭುವನೇಶ್ವರ್ ಕುಮಾರ್ (199 ಪಂದ್ಯಗಳಿಂದ 215 ವಿಕೆಟ್) ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ (182 ಪಂದ್ಯಗಳಿಂದ 228 ವಿಕೆಟ್) ಮಾತ್ರ ಈ 'ಕ್ಲಬ್'ನಲ್ಲಿದ್ದಾರೆ. ಇದು ಸುನಿಲ್‌ಗೆ 197ನೇ ಪಂದ್ಯ.

ಸಾಧಾರಣ ಗುರಿಯ ಬೆನ್ನಟ್ಟಿದ ಕೋಲ್ಕತ್ತ ತಂಡ ಇಂಪ್ಯಾಕ್ಟ್ ಸಬ್ ಫಿನ್ ಅಲೆನ್ (29, 13 ಎಸೆತ) ಅವರನ್ನು ನಾಲ್ಕನೇ ಓವರಿನಲ್ಲಿ ಕಳೆದುಕೊಂಡಿತು. ಆದರೆ, ನಾಯಕ ಅಜಿಂಕ್ಯ ರಹಾನೆ (43, 36 ಎಸೆತ) ಮತ್ತು ಅಂಗ್‌ಕ್ರಿಶ್ ರಘುವಂಶಿ (59, 47 ಎಸೆತ) ತಂಡವು ಗುರಿ ತಲುಪಲು ನೆರವಾದರು. ಎರಡನೇ ವಿಕೆಟ್‌ಗೆ 11 ಓವರುಗಳಲ್ಲಿ 84 ರನ್‌ಗಳ ಜೊತೆಯಾಟವಾಡಿದರು.

ಇದಕ್ಕೆ ಮೊದಲು ಸನ್‌ರೈಸರ್ಸ್ ಉತ್ತಮ ಆರಂಭದ ನಂತರ ದಿಢೀರನೇ ಕುಸಿಯತೊಡಗಿತು. ಪವರ್‌ಪ್ಲೇ ನಂತರ 1 ವಿಕೆಟ್‌ಗೆ 77 ರನ್ ಗಳಿಸಿದ್ದ ಹಾಗೂ 10 ಓವರುಗಳ ನಂತರ 2 ವಿಕೆಟ್‌ಗೆ 107 ರನ್ ಗಳಿಸಿದ್ದ ಪ್ಯಾಟ್ ಕಮಿನ್ಸ್ ಪಡೆ ದೊಡ್ಡ ಮೊತ್ತದತ್ತ ಸಾಗಿತ್ತು.

ಟ್ರಾವಿಸ್ ಹೆಡ್ (61, 28 ಎಸೆತ) ಸತತ ಎರಡನೇ ಅರ್ಧ ಶತಕ ಬಾರಿಸಿದ್ದರು. ಅಭಿಷೇಕ್ ಶರ್ಮಾ (15) ವಿಫಲರಾದ ನಂತರ ಇಶಾನ್ ಕಿಶನ್ (42, 29ಎ) ಸಹ ಬಿರುಸಿನಿಂದ ಆಡಿದ್ದರು. ಹೆಡ್, ವರುಣ್ ಬೌಲಿಂಗ್‌ನಲ್ಲಿ ಗ್ರೀನ್‌ಗೆ ಕ್ಯಾಚಿತ್ತರು. ಒಂದು ಹಂತದಲ್ಲಿ 3 ವಿಕೆಟ್‌ಗೆ 117 ರನ್ ಗಳಿಸಿದ್ದ ಸನ್‌ರೈಸರ್ಸ್ 48 ರನ್ ಗಳಿಸುವಷ್ಟರಲ್ಲಿ ಉಳಿದ ಏಳು ವಿಕೆಟ್‌ಗಳನ್ನು ಕಳೆದುಕೊಂಡಿತು. ಮೊದಲ ಐಪಿಎಲ್ ಪಂದ್ಯ ಆಡಿದ ಕನ್ನಡಿಗ ಸ್ಮರಣ್ ರವಿಚಂದ್ರನ್ (4) ಕೂಡ ಇವರಲ್ಲಿ ಒಳಗೊಂಡಿದ್ದರು.

ರನ್ 59 | ಬೌಂಡರಿ 5
ಎಸೆತ 47 | ಸಿಕ್ಸರ್ 2


ಅಂಗ್‌ಕ್ರಿಶ್ ರಘುವಂಶಿ


ಅರ್ಧಶತಕ ದಾಖಲಿಸಿದ ಸನ್‌ರೈಸರ್ಸ್‌ನ ಟ್ರಾವಿಸ್ ಹೆಡ್ ವಿಕೆಟ್ ಪಡೆದ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವರುಣ್ ಚಕ್ರವರ್ತಿ ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್: 165 (19 ಓವರ್‌ಗಳಲ್ಲಿ)
ಅಭಿಷೇಕ್ ಸಿ ಗ್ರೀನ್ ಬಿ ಕಾರ್ತಿಕ್ 15 (10ಎ, 4x1, 6x1)
ಹೆಡ್ ಸಿ ಗ್ರೀನ್ ಬಿ ವರುಣ್ 61 (28ಎ, 4x9, 6x3)
ಇಶಾನ್ ಸಿ ಅನುಕೂಲ್ ಬಿ ಸುನಿಲ್ 42 (29ಎ, 4x4, 6x2)
ಕ್ಲಾಸೆನ್ ಸಿ ಪೊವೆಲ್ ಬಿ ಗ್ರೀನ್ 11 (8ಎ, 4x1, 6x1)
ಸ್ಮರಣ್ ಸಿ ರಹಾನೆ ಬಿ ವರುಣ್ 4 (4ಎ, 4x1)
ಅನಿಕೇತ್ ಸಿ ರಹಾನೆ ಬಿ ವರುಣ್ 6 (8ಎ, 4x1)
ಸಲೀಲ್ ಬಿ ಸುನಿಲ್ 2 (6ಎ)
ಕಮಿನ್ಸ್ ಸಿ ಮತ್ತು ಬಿ ಅನುಕೂಲ್ 10 (8ಎ, 6x1)
ಶಿವಾಂಗ್ ಸಿ ಅಂಗಕ್ರಿಷ್ ಬಿ ವೈಭವ್ 1 (2ಎ)
ಹರ್ಷಲ್ ಸಿ ವೈಭವ್ ಬಿ ಕಾರ್ತಿಕ್ 6 (5ಎ, 4x1)
ಇಶಾನ್ ಮಾಲಿಂಗ ಔಟಾಗದೇ 2 (6ಎ)
ಇತರೆ: 5 (ಬೈ 1, ವೈಡ್ 4)
ವಿಕೆಟ್ ಪತನ: 1-44 (ಅಭಿಷೇಕ್ ಶರ್ಮಾ, 3.4), 2-105 (ಟ್ರಾವಿಸ್ ಹೆಡ್, 8.6), 3-117 (ಹೆನ್ರಿಚ್ ಕ್ಲಾಸೆನ್, 10.4), 4-122 (ಸ್ಮರಣ್ ರವಿಚಂದ್ರನ್, 11.3), 5-135 (ಅನಿಕೇತ್ ವರ್ಮಾ, 13.4), 6-139 (ಸಲೀಲ್ ಅರೋರಾ, 15.1), 7-148 (ಇಶನ್ ಕಿಶನ್, 15.6), 8-156 (ಪ್ಯಾಟ್ ಕಮಿನ್ಸ್, 16.6), 9-156 (ಶಿವಾಂಗ್ ಕುಮಾರ್, 17.1), 10-165 (ಹರ್ಷಲ್ ಪಟೇಲ್, 18.6)
ಬೌಲಿಂಗ್: ಸುನಿಲ್ ನಾರಾಯಣ್ 4-0-31-2, ವೈಭವ್ ಅರೋರಾ 3-0-25-1, ಕಾರ್ತಿಕ್ ತ್ಯಾಗಿ 4-0-30-2, ಕ್ಯಾಮರಾನ್ ಗ್ರೀನ್ 3-0-34-1, ವರುಣ್ ಚಕ್ರವರ್ತಿ 4-0-36-3, ಅನುಕೂಲ್ ರಾಯ್ 1-0-8-1

ಕೋಲ್ಕತ್ತ ನೈಟ್ ರೈಡರ್ಸ್: 3ಕ್ಕೆ 169 (18.2 ಓವರ್‌ಗಳಲ್ಲಿ)
ರಹಾನೆ ಸಿ ಸ್ಮರಣ್ ಬಿ ಸಕೀಬ್ 43 (36ಎ, 4x1, 6x1)
ಅಲೆನ್ ಸಿ ಕ್ಲಾಸೆನ್ ಬಿ ಕಮಿನ್ಸ್ 29 (13ಎ, 4x3, 6x2)
ಅಂಗ್‌ಕ್ರಿಶ್ ಸಿ ಮಾಲಿಂಗ ಬಿ ಶಿವಾಂಗ್ 59 (47ಎ, 4x5, 6x2)
ರಿಂಕು ಸಿಂಗ್ ಔಟಾಗದೇ 22 (11ಎ, 4x2, 6x1)
ಕ್ರಾಮರಾನ್ ಗ್ರೀನ್ ಔಟಾಗದೇ 3 (3ಎ)
ಇತರೆ: 13 (ಲೆಗ್‌ಬೈ 1, ವೈಡ್ 12)
ವಿಕೆಟ್ ಪತನ: 1-49 (ಫಿನ್ ಅಲೆನ್, 3.6), 2-133 (ಅಜಿಂಕ್ಯ ರಹಾನೆ, 14.6), 3-151 (ಅಂಗ್‌ಕ್ರಿಶ್ ರಘುವಂಶಿ, 16.4)
ಬೌಲಿಂಗ್: ಅಭಿಷೇಕ್ ಶರ್ಮಾ 2-0-14-0, ಪ್ಯಾಟ್ ಕಮಿನ್ಸ್ 4-0-47-1, ಇಶಾನ್ ಮಾಲಿಂಗ 3.2-0-42-0, ಶಿವಾಂಗ್ ಕುಮಾರ್ 4-0-31-1, ಹರ್ಷಲ್ ಪಟೇಲ್ 2-0-17-0, ಸಕೀಬ್ ಹುಸೇನ್ 3-0-17-1
ಪಂದ್ಯದ ಆಟಗಾರ: ವರುಣ್ ಚಕ್ರವರ್ತಿ

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 7 ವಿಕೆಟ್ ಜಯ


ಹೋಲ್ಡರ್‌ಗೆ ನಾಲ್ಕು ವಿಕೆಟ್ • ಶುಭಮನ್ ಗಿಲ್ ಪಡೆಗೆ ಹ್ಯಾಟ್ರಿಕ್ ಜಯ
ಪಂಜಾಬ್‌ಗೆ ಟೈಟನ್ಸ್ ವೇಗಿಗಳ ಲಗಾಮು

ಅಹಮದಾಬಾದ್ (ಪಿಟಿಐ): ಕೊನೆಯ ಓವರ್‌ವರೆಗೆ ಸಾಗಿದ ಐಪಿಎಲ್‌ನ ರೋಚಕ ಹಣಾಹಣಿಯಲ್ಲಿ ಗುಜರಾತ್ ಟೈಟನ್ಸ್ ತಂಡವು ಭಾನುವಾರ ಪಂಜಾಬ್ ಕಿಂಗ್ಸ್ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಮಣಿಸಿತು. ಇದರೊಂದಿಗೆ ಶುಭಮನ್ ಗಿಲ್ ಪಡೆ ಹಾಲಿ ಆವೃತ್ತಿಯಲ್ಲಿ ಎರಡನೇ ಬಾರಿ ಹ್ಯಾಟ್ರಿಕ್ ಗೆಲುವು ದಾಖಲಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಗುಜರಾತ್ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ವೇಗದ ಬೌಲರ್‌ಗಳಾದ ಜೇಸನ್ ಹೋಲ್ಡರ್ (24ಕ್ಕೆ 4), ಮೊಹಮ್ಮದ್ ಸಿರಾಜ್ (28ಕ್ಕೆ 2) ಮತ್ತು ಕಗಿಸೊ ರಬಾಡ (22ಕ್ಕೆ 2) ಸಂಘಟಿತ ದಾಳಿಯ ಮುಂದೆ ಪಂಜಾಬ್ ತಂಡ 9 ವಿಕೆಟ್‌ಗೆ 163 ರನ್‌ಗಳ ಸಾಧಾರಣ ಮೊತ್ತ ಗಳಿಸಲಷ್ಟೇ ಶಕ್ತವಾಯಿತು. ಸೂರ್ಯಾಂಶ್ ಶೆಡ್ಗೆ (57, 29 ಎಸೆತ) ಮತ್ತು ಮಾರ್ಕಸ್ ಸ್ಟೊಯಿನಿಸ್ (40;31ಎ) ಉಪಯುಕ್ತ ಕಾಣಿಕೆ ನೀಡಿದರು.

ಗುರಿ ಬೆನ್ನಟ್ಟಿದ ಗುಜರಾತ್ ತಂಡವು ಆರಂಭಿಕ ಆಟಗಾರ ಸಾಯಿ ಸುದರ್ಶನ್ (57;41ಎ) ಮತ್ತು ವಾಷಿಂಗ್ಟನ್ ಸುಂದರ್ (ಔಟಾಗದೇ 40;23ಎ) ಅವರ ಬ್ಯಾಟಿಂಗ್ ನೆರವಿನಿಂದ ಒಂದು ಎಸೆತ ಬಾಕಿ ಇರುವಂತೆ 6 ವಿಕೆಟ್‌ಗೆ 167 ರನ್ ಗಳಿಸಿ ಸಂಭ್ರಮಿಸಿತು. ಪಂಜಾಬ್ ತಂಡಕ್ಕೆ ಇದು ಲೀಗ್‌ನಲ್ಲಿ ಎರಡನೇ ಸೋಲು.

ಗುಜರಾತ್ ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಶುಭಮನ್ (5) ಪೆವಿಲಿಯನ್ ಸೇರಿಕೊಂಡರು. ಸಾಯಿ ಮತ್ತು ಜೋಸ್ ಬಟ್ಲರ್ (26;22) ಎರಡನೇ ವಿಕೆಟ್‌ಗೆ 53 (40ಎ) ರನ್ ಸೇರಿಸಿದರು. ಬಟ್ಲರ್ ವಿಕೆಟ್ ಪಡೆಯುವ ಮೂಲಕ ಈ ಜೊತೆಯಾಟವನ್ನು ಕನ್ನಡಿಗ ವೈಶಾಖ ವಿಜಯಕುಮಾರ್ ಮುರಿದರು. ನಂತರ ಬಂದ ನಿಶಾಂತ್ ಸಿಂಧು (15) ತಮ್ಮ ಚೊಚ್ಚಲ ಐಪಿಎಲ್ ಪಂದ್ಯದಲ್ಲಿ ನಿರಾಸೆ ಮೂಡಿಸಿದರು. ಅದರ ಬೆನ್ನಲ್ಲೇ ಲೀಗ್‌ನಲ್ಲಿ ಮೂರನೇ ಅರ್ಧಶತಕ ಪೂರೈಸಿದ ಸಾಯಿ ಕೂಡಾ ಔಟಾದರು. ಒಂದು ಹಂತದಲ್ಲಿ ಪಂಜಾಬ್ ಬೌಲರ್‌ಗಳು ಪಂದ್ಯದ ಮೇಲೆ ಹಿಡಿತ ಸಾಧಿಸುವ ಪ್ರಯತ್ನ ನಡೆಸಿದರು. ಆದರೆ, ವಾಷಿಂಗ್ಟನ್ ಜವಾಬ್ದಾರಿಯುತ ಆಟವಾಡಿ ತಂಡವನ್ನು ಗೆಲುವಿನ ದಡ ಸೇರಿಸಿದರು.



ನಾಲ್ಕು ವಿಕೆಟ್ ಪಡೆದ ಜೇಸನ್ ಹೋಲ್ಡರ್

ಸೂರ್ಯಾಂಶ್ ಅರ್ಧಶತಕ: ಇದಕ್ಕೂ ಮೊದಲು ವೇಗಿಗಳ ದಾಳಿಗೆ ಪಂಜಾಬ್ ತಂಡವು (8.5 ಓವರ್‌ಗಳಲ್ಲಿ) 47 ರನ್‌ಗಳಾಗುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡು ಕುಸಿತದ ಅಪಾಯದಲ್ಲಿತ್ತು. ಆದರೆ ಶೆಡ್ಗೆ ಜೊತೆಗೂಡಿದ ಸ್ಟೊಯಿನಿಸ್ ಆರನೇ ವಿಕೆಟ್‌ಗೆ 79 ರನ್ ಸೇರಿಸಿದ್ದರಿಂದ ತಂಡದ ಸ್ಥಿತಿ ಸುಧಾರಿಸಿತು.

ದೇಶಿ ಕ್ರಿಕೆಟ್‌ನಲ್ಲಿ ಮುಂಬೈ ತಂಡಕ್ಕೆ ಸಾಕಷ್ಟು ಸಲ ಆಪತ್ಬಾಂಧವನ ಪಾತ್ರ ವಹಿಸಿರುವ ಶೆಡ್ಗೆ ಇಲ್ಲಿ ಪಂಜಾಬ್ ನೆರವಿಗೆ ನಿಂತರು. ಅವರು 3 ಬೌಂಡರಿಗಳ ಜೊತೆ ಐದು ಸಿಕ್ಸರ್‌ಗಳನ್ನೆತ್ತಿದರು. ಎಡಗೈ ಸ್ಪಿನ್ನರ್ ಮಾನವ್ ಸುತಾರ್ ಅವರ ಒಂದೇ ಓವರಿನಲ್ಲಿ ಶೆಡ್ಗೆ 26 ರನ್ (6,6,4,4,6) ಹೆಕ್ಕಿದರು. 24 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದರು. ಮೊತ್ತ 126 ಆಗಿದ್ದಾಗ ರಬಾಡ ಅವರ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಜೋಸ್ ಬಟ್ಲರ್‌ಗೆ ಕ್ಯಾಚಿತ್ತರು. ನಂತರ ಪಂಜಾಬ್ ಮತ್ತೊಮ್ಮೆ ಕುಸಿಯಿತು.

ಸ್ಕೋರುಗಳು: ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 9ಕ್ಕೆ 163 (ಸೂರ್ಯಾಂಶ್ ಶೆಡ್ಗೆ 57, ಮಾರ್ಕಸ್ ಸ್ಟೊಯಿನಿಸ್ 40; ಮೊಹಮ್ಮದ್ ಸಿರಾಜ್ 28ಕ್ಕೆ2, ಕಗಿಸೊ ರಬಾಡ 22ಕ್ಕೆ2, ಜೇಸನ್ ಹೋಲ್ಡರ್ 24ಕ್ಕೆ4). ಗುಜರಾತ್ ಟೈಟನ್ಸ್: 19.5 ಓವರ್‌ಗಳಲ್ಲಿ 6 ವಿಕೆಟ್‌ಗೆ 167 (ಸಾಯಿ ಸುದರ್ಶನ್ 57, ಜೋಸ್ ಬಟ್ಲರ್ 26, ವಾಷಿಂಗ್ಟನ್ ಸುಂದರ್ ಔಟಾಗದೇ 40; ಅರ್ಷದೀಪ್ ಸಿಂಗ್ 24ಕ್ಕೆ 2, ವೈಶಾಖ ವಿಜಯಕುಮಾರ್ 31ಕ್ಕೆ 2). ಪಂದ್ಯದ ಆಟಗಾರ: ಜೇಸನ್ ಹೋಲ್ಡರ್

ತಳದಲ್ಲಿರುವ ತಂಡಗಳ ಮುಖಾಮುಖಿ

ಮುಂಬೈ (ಪಿಟಿಐ): ತಿಣುಕಾಡುತ್ತಿರುವ ಮುಂಬೈ ಇಂಡಿಯನ್ಸ್ ತಂಡವು ತಾರಾ ವರ್ಚಸ್ಸಿನ ಆಟಗಾರರಾದ ಹಾರ್ದಿಕ್ ಪಾಂಡ್ಯ ಮತ್ತು ಸೂರ್ಯಕುಮಾರ್ ಯಾದವ್ ಅವರು ಲಯಕ್ಕೆ ಮರಳುವರೆಂಬ ವಿಶ್ವಾಸದಲ್ಲಿದೆ. ಐದು ಬಾರಿಯ ಚಾಂಪಿಯನ್ ತಂಡ ಸೋಮವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಕೊನೆಯ ಸ್ಥಾನದಲ್ಲಿರುವ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ.

ಎರಡೂ ತಂಡಗಳ ಪ್ಲೇ ಆಫ್ ಕನಸು ಹೆಚ್ಚುಕಮ್ಮಿ ಭಗ್ನಗೊಂಡಿದೆ. ಆಲ್‌ರೌಂಡರ್ ಪಾಂಡ್ಯ (146 ರನ್ ಮತ್ತು 4 ವಿಕೆಟ್) ಮತ್ತು ಸೂರ್ಯಕುಮಾರ್ (186 ರನ್) ಈ ಬಾರಿ ನಿರಾಸೆ ಅನುಭವಿಸಿದ್ದಾರೆ. ಇದು ತಂಡದ ಹಿನ್ನಡೆಗೂ ಕಾರಣವಾಗಿದೆ. ಮಾಜಿ ನಾಯಕ ರೋಹಿತ್ ಶರ್ಮಾ ಅವರು ಮಂಡಿರಜ್ಜು ನೋವಿನಿಂದ ಚೇತರಿಸಿಕೊಳ್ಳದಿರುವುದೂ ತಂಡದ ಮನೋಬಲ ಕುಗ್ಗಿಸಿದೆ.

ಮುಂಬೈ ತಂಡ ಏಳು ಪಂದ್ಯಗಳಲ್ಲಿ ಸೋಲನುಭವಿಸಿದ್ದು, ಎರಡರಲ್ಲಿ ಮಾತ್ರ ಜಯಗಳಿಸಿದೆ. ಪಾಯಿಂಟ್ ಪಟ್ಟಿಯಲ್ಲಿ 9ನೇ ಸ್ಥಾನದಲ್ಲಿದ್ದರೆ, ಎಂಟು ಪಂದ್ಯಗಳಲ್ಲಿ ಎರಡು ಗೆದ್ದು, ಆರು ಸೋತಿರುವ ಲಖನೌ ಕೊನೆಯ ಸ್ಥಾನದಲ್ಲಿದೆ. ಎರಡೂ ತಂಡಗಳು ತಲಾ 4 ಪಾಯಿಂಟ್ಸ್ ಸಂಗ್ರಹಿಸಿವೆ.

ಪಾಂಡ್ಯ ಅವರ ತಂತ್ರಗಾರಿಕೆ ಮೇಲೆ ಪ್ರಶ್ನಾರ್ಥಕ ಚಿಹ್ನೆಗಳಿವೆ. ಅವರ ನಿರ್ಧಾರಗಳು ನಿರೀಕ್ಷಿತ ಫಲ ನೀಡಿಲ್ಲ. ಅನುಭವಿ ಬ್ಯಾಟರ್‌ಗಳು ವಿಫಲರಾಗಿದ್ದಾರೆ. ಬೌಲರ್‌ಗಳು ಯಶಸ್ಸು ಗಳಿಸುತ್ತಿಲ್ಲ. ಹೀಗಾಗಿ ತಂಡದ ಸ್ಥೈರ್ಯ ಉತ್ತಮ ಮಟ್ಟದಲ್ಲಿಲ್ಲ. ಈ ಬಾರಿಯ ಅಭಿಯಾನದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಮಾತ್ರ ಮುಂಬೈ ಅಧಿಕಾರಯುತ ಜಯಗಳಿಸಿತ್ತು.

ಭಾರತ ಟಿ20 ತಂಡದ ನಾಯಕ ಸೂರ್ಯ ಅವರು ಒಳ್ಳೆಯ ಆರಂಭವನ್ನು ದೊಡ್ಡಮೊತ್ತವಾಗಿ ಪರಿವರ್ತಿಸಲು ವಿಫಲರಾಗಿದ್ದಾರೆ. ತಮ್ಮ ಟ್ರೇಡ್‌ಮಾರ್ಕ್ ಹೊಡೆತಗಳಿಗೇ ಔಟಾಗುತ್ತಿದ್ದಾರೆ.

ಲಖನೌ ತಂಡದ ನಾಯಕ ರಿಷಭ್ ಪಂತ್ ಅವರಂತೂ ವಿರಾಮಕ್ಕಾಗಿ ಹಾತೊರೆದಿದ್ದಾರೆ. ತಂಡ ಸತತ ಐದು ಪಂದ್ಯ ಸೋತು ಸುಣ್ಣವಾಗಿದೆ. ಸಾಧಾರಣ ಮಟ್ಟದ ಬ್ಯಾಟಿಂಗ್ ತಂಡಕ್ಕೆ ಹಿನ್ನಡೆ ತಂದಿದೆ. ಬೌಲರ್‌ಗಳ ಪ್ರಯತ್ನ ಉತ್ತಮವಾಗಿದ್ದರೂ ಬ್ಯಾಟರ್‌ಗಳು ಅದಕ್ಕೆ ಪೂರಕವಾಗಿ ಸ್ಪಂದಿಸುತ್ತಿಲ್ಲ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	9	6	2	1	13	0.855
ಆರ್‌ಸಿಬಿ	9	6	3	0	12	1.420
ಎಸ್‌ಆರ್‌ಎಚ್	10	6	4	0	12	0.644
ಆರ್ ಆರ್	10	6	4	0	12	0.510
ಜಿ ಟಿ	10	6	4	0	12	- 0.147
ಸಿಎಸ್‌ಕೆ	9	4	5	0	8	0.005
ಡಿ ಸಿ	9	4	5	0	8	- 0.895
ಕೆಕೆಆರ್	9	3	5	1	7	- 0.539
ಎಂ ಐ	9	2	7	0	4	- 0.803
ಎಲ್‌ಎಸ್‌ಜಿ	8	2	6	0	4	- 1.106

ಆರೆಂಜ್ ಕ್ಯಾಪ್: ಅಭಿಷೇಕ್ ಶರ್ಮಾ, ಎಸ್‌ಆರ್‌ಎಚ್ (440 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (17 ವಿಕೆಟ್)

ಬಲಾಬಲ — 8 ಒಟ್ಟು ಪಂದ್ಯ
ಲಖನೌ ಗೆಲುವು 6
ಮುಂಬೈ ಗೆಲುವು 2

ಇಂದಿನ ಪಂದ್ಯ
ಮುಂಬೈ ಇಂಡಿಯನ್ಸ್ V/s ಲಖನೌ ಸೂಪರ್ ಜೈಂಟ್ಸ್
ತಾಣ: ವಾಂಖೆಡೆ
ಸಮಯ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್